

## ಸರ್ವಮೂಲ ಸಂದೇಶ

### ಗೌರವ ತರುವ ಸಂಗತಿಗಳು

**ವಿತ್ತಂ ಬಂಧುರ್ವಯಃ ಕರ್ಮ ವಿದ್ಯಾ ಚೈವ ತು ಪಂಚಮೀ ।**
**ಏತಾನಿ ಮಾನ್ಯಸ್ಥಾನಾನಿ ಗರೀಯೋ ಯದ್ಯದುತ್ತರಮ್ ॥**

ಸಂಪತ್ತು, ಬಾಂಧವ್ಯ, ವಯಸ್ಸು, ಸಾಧನೆ ಮತ್ತು ಐದನೆಯದು ವಿದ್ಯೆ–ಇವು ಮನುಷ್ಯನಿಗೆ ಗೌರವ ತರುವ ಸಂಗತಿಗಳು. ಇದರಲ್ಲಿ ಮೊದಲಿಗಿಂತ ಮತ್ತಿನದು ಹಿರಿದಾದುದು.

**–ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದರು**

ಸಂಪುಟ–೭ ಸಂಚಿಕೆ–೮ ಸರ್ವಧಾರಿ ಸಂ.॥ ಆಷಾಢ – ಶ್ರಾವಣ ಅಗಸ್ಟ್ ೨೦೦೮

ಸಂಸ್ಥಾಪಕರು:
**ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು**

**ಶ್ರೀವಿದ್ಯಾಮಾನ್ಯ ಪ್ರಕಾಶನ**
ಶ್ರೀಮದ್ ಹೃಷೀಕೇಶ ತೀರ್ಥ ಸ್ವಾಮಿಯರ್ ಸ್ಮಾರಕ ಟ್ರಸ್ಟ್ (ರಿ.)
ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

**E-MAIL**
**sarvamoola@udupishripalimarumatha.org**

## ವಿಷಯಾನುಕ್ರಮಣಿಕೆ


| | | |
|---|---|---|
| **ಉದ್ಧವಗೀತೆ** | ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು | 1 |
| **ವಿದ್ವತ್ ಪ್ರಪಂಚ** | ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು | 3 |
| **ವಿದುರನೀತಿ** | ಶ್ರೀ ವಿಶ್ವಪ್ರಿಯತೀರ್ಥ ಶ್ರೀಪಾದರು | 5 |
| **ತೈತ್ತರೀಯೋಪನಿಷತ್** | ವಿ॥ ಬನ್ನಂಜೆ ಗೋವಿಂದಾಚಾರ್ಯ | 7 |
| **ಹರಿಭಕ್ತಿಸಾರ** | ವಿ॥ ಹಯವದನ ಪುರಾಣಿಕ | 9 |
| **ಭಾರತಭಾವದರ್ಪಣ** | ವಿ॥ ರಾಮವಿಟ್ಠಲಾಚಾರ್ಯ | 13 |
| **ವೈಷ್ಣವತ್ವಕ್ಕೆ ಪುಷ್ಟಿ** | ॥ ಸಗ್ರಿ ರಾಘವೇಂದ್ರಾಚಾರ್ಯ | 19 |
| **ಕಠೋಪನಿಷತ್** | ಡಾ॥ ಎನ್. ವೆಂಕಟೇಶ್ ಆಚಾರ್ಯ | 20 |
| **ನಾರಾಯಣವರ್ಮ** | ವಿ॥ ಬೆ.ನಾ. ವಿಜಯೀಂದ್ರಾಚಾರ್ಯ | 22 |
| **ಜೀವನಯಜ್ಞ** | ಶ್ರೀ ಸುನಂದಕೀ | 24 |
| **ಶ್ರೀಮಧ್ವಚರಿತ್ರೆ** | ವಿ॥ ಅನಂತಕೃಷ್ಣಾಚಾರ್ಯ | 27 |
| **ಹರಿಕಥಾಮೃತಸಾರ** | ವಿ॥ ಕೆ. ಅಪ್ಪಣ್ಣಾಚಾರ್ಯ | 29 |
| **ವಿಷ್ಣುಪುರಾಣ** | ಸ್ಫೂರ್ತಿ | 31 |
| **ಮಾರ್ಕಂಡೇಯಪುರಾಣ** | ವಿ॥ ಅಡ್ವೇ ಲಕ್ಷ್ಮೀಶಾಚಾರ್ಯ | 33 |
| **ಮುಖಪುಟ ಲೇಖನ** | ಶ್ರೀ ಬಿ. ಶ್ರೀನಿವಾಸಭಟ್ | 35 |
| **ಅನುಭವಕಥನ** | ಶ್ರೀ ರಾಘವೇಂದ್ರ ಮುಟ್ಲುಪಾಡಿ | 37 |
| **ನೆನಪಿನ ಅಂಗಳ** | ವಿ॥ ಶಂಕರನಾರಾಯಣಾಚಾರ್ಯ | 41 |



**ಪ್ರಕಾಶಕರು**

ಶ್ರೀ ಶಿಬರೂರು ವೇದವ್ಯಾಸ ತಂತ್ರಿ, ಉಡುಪಿ

**ಪ್ರಧಾನ ಸಂಪಾದಕರು**

ವಿಸಗ್ರಿ ರಾಘವೇಂದ್ರ ಉಪಾಧ್ಯಾಯ, ಉಡುಪಿ

**ಸಂಪಾದಕ ಮಂಡಳಿ:**

ವಿ॥ ಬಲರಾಮ ಭಟ್ಟ, ಉಡುಪಿ

ವಿ॥ ಮೋಹನಾಚಾರ್ಯ ಬೆಂಗಳೂರು

ವಿ॥ ಗಿರೀಶ ಉಪಾಧ್ಯಾಯ, ಕುತ್ಯಾರು

**ಸಲಹಾ ಮಂಡಳಿ**

ಶ್ರೀ ರಘುಪತಿ ತಂತ್ರಿ, ಬೆಂಗಳೂರು

ಶ್ರೀ ಲಕ್ಷ್ಮೀನಾರಾಯಣ ಶರ್ಮ ಉಡುಪಿ

ಶ್ರೀ ಹರ್ಷ ಬೆಂಗಳೂರು

ಮುಖಪುಟ ವಿನ್ಯಾಸ: ಕೆ. ಎಮ್. ಶೇಷಗಿರಿ ಬೆಂಗಳೂರು

ಅಕ್ಷರ ವಿನ್ಯಾಸ: ಸ್ವಾತಿ ಭಾಗವತ್ ಉಡುಪಿ

**ವಾರ್ಷಿಕಚಂದಾ** : ರೂ. 90.00

**15 ವರ್ಷಕ್ಕೆ** : ರೂ. 1,250.00

**ಸದಸ್ಯರು** : ರೂ. 2,250.00

**ಪೋಷಕರು** : ರೂ. 3,000.00



ಅಯಾಯ ಲೇಖನಗಳಿಗೆ ಲೇಖಕರೇ ಜವಾಬ್ದಾರರು

# ಉದ್ಧವಗೀತೆ

-ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು
ಶ್ರೀ ಪಲಿಮಾರು ಮಠ, ಉಡುಪಿ

**ಭೂತೈರಾಕ್ರಮ್ಯಮಾಣೋऽಪಿ ಧೀರೋ ದೈವವಶಾನುಗೈಃ।**
**ತದ್ವಿದಾಂ ನ ಚಲೇತ್ ಮಾರ್ಗಾತ್ ಅನುಶಿಕ್ಷನ್ ಕ್ಷಿತೇರ್ವ್ರತಮ್॥**

ಅವಧೂತ ಬ್ರಾಹ್ಮಣರ ಇಪ್ಪತ್ತನಾಲ್ಕು ಗುರುಗಳು:– 1. ಪೃಥವೀ 2. ವಾಯು 3. ಆಕಾಶ 4. ನೀರು 5. ಅಗ್ನಿ 6. ಚಂದ್ರಮ 7. ರವಿ 8. ಕಪೋತ(ಪಾರಿವಾಳ) 9. ಅಜಗರ(ಹೆಬ್ಬಾವು) 10. ಸಿಂಧು(ಸಮುದ್ರ) 11. ಪತಂಗ 12. ಮಧುಕೃತ್(ದುಂಬಿ) 13. ಗಜ 14. ಮಧುಹಾ 15. ಹರಿಣ(ಜಿಂಕೆ) 16. ಮೀನ(ಮೀನು) 17. ಪಿಂಗಲೆ 18. ಕುರರ 19. ಅರ್ಭಕ(ಮಗು) 20. ಕುಮಾರ 21. ಶರಕಾರ 22. ಸರ್ಪ 23. ಊರ್ಣನಾಭಿ(ಜೇಡ) 24. ಸುಪೇಶಕೃತ್, ಮೊದಲನೆಯ ಗುರು ಪೃಥಿವಿ. ಈ ಭೂಮಿಯಿಂದ ತಾನು ಅಧ್ಯಯನ ಮಾಡಿದ ಪಾಠವನ್ನು ಅವಧೂತರು ವಿವರಿಸುತ್ತಾರೆ. ಸಾಧಕಿಯಾದ ಕ್ಷಿತಿಯ ವ್ರತವು ಅತ್ಯಪೂರ್ವ. ಸುಂದರ ಆದರ್ಶ. ಧೀರನಾದ ಸಾಧಕನು ದೈವಪ್ರೇರಿತರಾದ ಪ್ರಾಣಿಗಳಿಂದ ಆಕ್ರಮಣಕ್ಕೆ ಒಳಗಾದರೂ ಜ್ಞಾನಿಗಳು ತುಳಿದ ಹಾದಿಯನ್ನು ಎಂದೆದೂ ತ್ಯಜಿಸಬಾರದು.

"ಅಚಲಾ" ಭೂಮಿಯ ಇನ್ನೊಂದು ಅನ್ವರ್ಥ ನಾಮ. 'ಸ್ಥಿರಾ' ಮತ್ತೊಂದು ನಾಮ. ಸಾಧನೆಯ ಪಥದಲ್ಲಿ ಸಾಗುವವನಿಗೆ ಇರಲೇಬೇಕಾದ ಮುಖ್ಯಗುಣ ಸ್ಥೈರ್ಯ. ಇದರ ಮಗದೊಂದು ಮುಖವೇ ಸಹನೆ. ಜಪಕ್ಕೋ, ತಪಸ್ಸಿಗೋ, ಶ್ರವಣಕ್ಕೋ ಕೂತರೆ ಅಲ್ಲಾಡುತ್ತಲೇ ಇರುವವರು ಅದೆಷ್ಟೋ ಮಂದಿ. ಆನೆ ಹಾಕುವುದೆಂದು ಹಳ್ಳಿಯ ಭಾಷೆಯಲ್ಲಿ ಅಪಹಾಸ ಮಾಡುವುದುಂಟು. ಆನೆಯು ಬೆನ್ನಾಡಿಸುತ್ತಲೇ ಇರುತ್ತದೆ. ಯೋಗದ ಮಾರ್ಗಕ್ಕಅನನುಗುಣವಾದ ಕೆಟ್ಟ ದುಶ್ಚಟ ಇದು. ಅದಕ್ಕೆ ದೇವರು ಹೇಳಿದ್ದು. "ಸಮಂ ಕಾಯಶಿರೋಗ್ರೀವಂ" ಜಪವು ಸಿದ್ಧಿಸಬೇಕಾದರೆ ಇಡೀ ದೇಹ ಅಂದರೆ ಬೆನ್ನ ತುದಿಯಿಂದ ಆರಂಭಿಸಿ ತಲೆಯ ತುದಿಯನಕ ಸರ್ವಾಯವಗಳೂ ಒಂದೇ ಸರಳ ರೇಖೆಯಲ್ಲಿರಬೇಕು. ಆಗ ಮಾತ್ರ ತಾನೇ ದೇಹವು ಅಚಲವಾಗಿರುತ್ತದೆ. ದೇಹವು ಅಲ್ಲಾಡಿದರೇನು ಬಿಟ್ಟರೇನು ಎಂದು ಮೂದಲಿಸಬೇಡಿ. ದೇಹದ ಚಾಂಚಲ್ಯವು ಸಾಧನೆಗೆ ಹೇಗೆ ತಾನೇ ಪ್ರತಿಬಂಧಕ ಎನ್ನುವ ಪ್ರಶ್ನೆ ಸಹಜ. ಅದಕ್ಕೆ ಉತ್ತರ ಇಷ್ಟು ಮಾನಸ ಸ್ಥಿರತೆಗೆ ದೇಹದ ಅಚಲತೆ

ನಂಬಿದವರ ಸಲಹುವವರಲ್ಲಿ ಶ್ರೀಕೃಷ್ಣನೇ ಅಗ್ರಗಣ್ಯ

ಅಂದರೆ ಸ್ಥಿರತೆಯು ಮುಖ್ಯಕಾರಣ. ದೇಹವು ಚಂಚಲವಾದರೆ ಒಳಗಿನ ಮನಸ್ಸು ಅಲ್ಲಾಡುತ್ತದೆ. ಮನನಕ್ಕೆ ಮನಸ್ಸಿನ ಸ್ಥಿರತೆಯೇ ಪ್ರಮುಖಾಂಶ. ಬ್ರಹ್ಮಸೂತ್ರವು ಇದನ್ನು ಒತ್ತು ಕೊಟ್ಟು ವಿವರಿಸಿದೆ. "ಅಚಲತ್ವಂ ಚಾಪೇಕ್ಷ್ಯ" ವ್ಯಗ್ರಮನಸ್ಸಿನವನಿಂದ ಏನೇನೂ ಮಾಡಲಾಗದು. ವ್ಯಗ್ರಮನಸ್ಸಿನ ಬಾಲಕನಲ್ಲಿ ನಮ್ಮ ವಾಹನದ ಜವಾಬ್ದಾರಿಯನ್ನು ಕೊಟ್ಟರೆ, ಕೂಡುವವನ ಪಾಡೇನು? ವಾಹನ ಧರೆಗೆರಗಿ, ನುಚ್ಚುನೂರಾಗಿ ನಮ್ಮನ್ನು ಹಣ್ಣುಗಾಯಿ–ನೀರುಗಾಯಿ ಮಾಡದಿದ್ದೀತೇ? ವ್ಯಗ್ರಮಾನಸದವನ ಉಪನ್ಯಾಸ ಹೇಗಿದ್ದೀತು? ಹುಚ್ಚರ ಮಾತೇ ಸರಿ. ಮನೋದೌರ್ಬಲ್ಯದ ವ್ಯಕ್ತಿ ಮಾಡಿದ ಅಡುಗೆ ಬಡಿಸಿದರೆ ಉಣಬಹುದೇ? ಮನಸ್ಸೇ ಮುಖ್ಯಸಾಧನ. "ಮನವನ್ನಿತ್ತರೆ ತನ್ನನೀವನು" ಇದು ರಂಗಒಲಿದ ದಾಸರ ವಾಣಿ. ಮನಸ್ಸಿಲ್ಲದವನ ಆದರ ರುಚಿಸದು. ಜಪ–ಪೂಜೆ–ಧ್ಯಾನ ಮುಂತಾದ ಯಾವುದೇ ಸಾಧನ ಮನಸ್ಸಿಲ್ಲದೆ ಮಾಡಿದಾಗ ಶೂನ್ಯವೇ ಸರಿ. ಅಖಿಲಾಂಡಕೋಟಿಬ್ರಹ್ಮಾಂಡನಾಯಕನ ಹಾದಿಯಲ್ಲಿ ಸಾಗಬೇಕಾದರೆ ಎಂತಹ ಎಚ್ಚರ ಇರಬೇಕು.

ಸಾಧನದ ಪ್ರಥಮ ಸೋಪಾನವೆನಿಸಿದ ಅಚಲತೆಯನ್ನು ಭೂಮಿಯು ವ್ರತದಂತೆ ಸಂಗ್ರಹಿಸಿದೆ. ದೇವತೆಗಳೇ ನಮ್ಮ ಮನಸ್ಸನ್ನು ಅಲ್ಲಾಡಿಸಬಹುದು. ದೈವಪ್ರೇರಿತವಾದ ವಸ್ತು–ಜಾತಗಳು ನಮ್ಮನ್ನು ಆಕ್ರಮಣಮಾಡಬಹುದು. ಏನೇ ಬರಲಿ ಭೂಮಿಯಂತೆ ನಾವು ಅಚಲರಾದರೆ ಮಾತ್ರ ಶ್ರೀಹರಿ ಧೀರರಾದ ನಮ್ಮಕಡೆ ಹರಿಯುತ್ತಾನೆ. ಹಿಡಿದ ಕಾರ್ಯವನ್ನು ಕೊನೆಮುಟ್ಟುವ ಅಚಲತ್ವದ ವ್ರತ ಭೂಮಿಯಿಂದ ಕಲಿತೆ ಅನ್ನುತ್ತಾರೆ ಅವಧೂತರು. ದೇವರು ಇದ್ದಾನೆಯೇ ಇಲ್ಲವೇ ಅನ್ನುವ ಸಂದೇಹವೂ ಒಂದು ತರದ ಚಾಂಚಲ್ಯ. ದೇವರನ್ನು ಸಾಧಿಸುವ ಪ್ರಮಾಣಗಳೆನಿಸಿದ ವೇದ–ಪುರಾಣಗಳಂಥ ಶಾಸ್ತ್ರಗಳಲ್ಲಿ ನಾವು ಮಾಡುವ ಸಂಶಯವೂ ಚಾಂಚಲ್ಯ. ದೇವರ ಬಳಿ ಸಾಗಲು ಶಾಸ್ತ್ರ ತಿಳಿಸಿದ ಸಾಧನಪಥದ ಬಗ್ಗೆ ಬಂದ ಸಂದೇಹವೂ ಚಾಂಚಲ್ಯ. ಸಾಧನಪಥ ಅರುಹಿದ ಗುರುಗಳ ಬಗ್ಗೆ ಸಂಶವೂ ಚಾಂಚಲ್ಯ. ಉಪಾಸನೆಯಿಂದ ಲಭಿಸುವ ಮುಕ್ತಿಯಂಥ ಅದೃಷ್ಟ ಫಲದ ಬಗ್ಗೆ ಅಪನಂಬಿಕೆಯ ಸಂಶಯವೂ ಚಂಚಲತೆಯೇ ಸರಿ. ಸಂಶಯ ದೋಷವೆಂದೇನೂ ಅಲ್ಲ. ಸರಿಯಾದ ಪರಿಹಾರ ಸೂಚಿಸಿದರೂ ಬಗೆಹರಿಯದ ಸಂಶಯವು ಅನರ್ಥವೇ ಸರಿ. "ಸಂಶಯಾತ್ಮಾ ವಿನಶ್ಯತಿ" ಇಂಥ ಬಗೆ ಬಗೆಯ ಸಂಶಯ–ಚಾಂಚಲ್ಯ–ಚಾಪಲಗಳನ್ನು ಮೆಟ್ಟಿನಿಂತು ಸ್ಥಿರಚಿತ್ತನಾಗಿ ಬಗೆಯನ್ನು ಶ್ರೀಹರಿಯಲ್ಲಿ ನೆಲೆಗೊಳಿಸುವುದೇ ಅಚಲತೆ.

---

ಇದು ವೇದ–ಮಹಾಭಾರತ ಮುಂತಾದ ಇತಿಹಾಸ–ಪುರಾಣಗಳ ಸಾರ.

**ವಿದ್ವತ್ ಪ್ರಪಂಚ**

ಭಾಗ–೬

# ಶ್ರೀಮಧ್ವಮತದ ವೈಶಿಷ್ಟ್ಯಗಳು



–ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು

**ತತ್ತತ್ಪದಾರ್ಥಭಿನ್ನೋಽಪಿತತ್ತನ್ನಾಮೈವಮಚ್ಯುತಃ ।**
**ಸ್ವಾತಂತ್ರ್ಯಾತ್ ಸರ್ವಕರ್ತೃತ್ವಾತ್ ಗುಣಾನಂತ್ಯಾಚ್ಚ ಕೇವಲಮ್ ॥**

ಆಯಾಯಾ ಪದಾರ್ಥಗಳಿಂದ ಭಿನ್ನವಾದರೂ ಆಯಾಯಾ ಪದಾರ್ಥಗಳ ಹೆಸರಿನಿಂದಲೇ ಅಲ್ಲಿರುವ ಭಗವಂತನು ವಾಚ್ಯನಾಗುತ್ತಾನೆ. ಅವನೇ ಸ್ವತಂತ್ರನಾದುದರಿಂದಲೂ, ಎಲ್ಲವನ್ನೂ ಅವನೇ ಮಾಡುವುದರಿಂದಲೂ, ಅನಂತಗುಣಪೂರ್ಣನಾದುದರಿಂದಲೂ ಎಲ್ಲ ವಸ್ತುವಿನ ಗುಣ, ಕಾರ್ಯಗಳೂ ಅವನ ಅಧೀನಗಳೇ ಆಗಿರುವುದರಿಂದ ಎಲ್ಲ ವಸ್ತುಗಳ ನಾಮಗಳು ಮುಖ್ಯವಾಗಿ ಅವನಿಗೇ ಸೇರಿವೆ.

**ಸತ್ ಸಾಧುಗುಣಪೂರ್ಣತ್ವಾತ್ ಅಸ್ಮಾನ್ನಾನ್ಯೋ ಗುಣಾಧಿಕಃ ।**
**ಯತೋಽತೋಽಸದಿತಿ ಪ್ರೋಕ್ತಂ ವಿಷ್ಣ್ವಾಖ್ಯಂ ಪರಮಮ್ ಪದಮ್ ॥**

ಸಾಧು ಗುಣಪೂರ್ಣನಾದುದರಿಂದ ಭಗವಂತನು ಸತ್ ಎನಿಸಿದ್ದಾನೆ. ಇವನಿಗಿಂತ ಬೇರೆ ಯಾರೂ ಗುಣಗಳಿಂದ ಉತ್ತಮರಾದವರಿಲ್ಲ. ಆದುದರಿಂದ ಅಸತ್ ಎಂದೂ ವಿಷ್ಣುವನ್ನು ಹೇಳುತ್ತಾರೆ.

**ಸರ್ವದೇವವರತ್ವೇನ ಯೋ ನ ಜಾನಾತಿ ಕೇಶವಮ್ ।**
**ತಸ್ಯ ಪುಣ್ಯಾನಿ ಮೋಘಾನಿ ಯಾತಿ ಚಾಂಧಂತಮೋ ಧ್ರುವಮ್ ॥**

ಕ–ಬ್ರಹ್ಮನನ್ನು ಈಶ–ರುದ್ರನನ್ನು ವ–ಪ್ರವೃತ್ತಿಗೊಳಿಸುವ ಪ್ರಯುಕ್ತ ಕೇಶವ ಎಂದೆನಿಸುವ ಭಗವಂತನೇ ಸರ್ವದೇವತೆಗಳಲ್ಲಿ ಶ್ರೇಷ್ಠನು ಎಂದು ಯಾರು ತಿಳಿಯುವುದಿಲ್ಲವೋ, ಅವನ ಎಲ್ಲ ಪುಣ್ಯಕಾರ್ಯಗಳು ವ್ಯರ್ಥ. ನಿಶ್ಚಯವಾಗಿಯೂ ಅವನು ಅಂಧಂತಮಸ್ಸನ್ನು ಹೊಂದುವನು.

**ವಿನಾ ಜ್ಞಾನಂ ಕುತೋ ಭಕ್ತಿಃ ಕುತೋ ಭಕ್ತಿಂ ವಿನಾ ತತ್ ।**
ಜ್ಞಾನವಿರದೆ ಭಕ್ತಿ ಎಲ್ಲಿಂದ? ಭಕ್ತಿಯಿಲ್ಲದೆ ಜ್ಞಾನ ಎಲ್ಲಿಂದ?

ಆತನನ್ನು ನಂಬಿ ಕೆಟ್ಟವರಿಲ್ಲ.

**ಸದಾ ತದ್ಭಾವಭಾವಿತಾನಾಮೇವ ಕೇವಲತತ್ಕಾಲಸ್ಮರಣಂ ಭವತಿ ।**

ಸದಾವಿಷ್ಣುಸ್ಮರಣಾಸಕ್ತಚಿತ್ತರಿಗೆ ಮಾತ್ರ ಮರಣಕಾಲದಲ್ಲಿ ಹರಿಸ್ಮೃತಿಯುಂಟಾಗುತ್ತದೆ.

**ಭಕ್ತ್ಯಾ ಜ್ಞಾನಾತ್ ನಿಷಿದ್ಧಾನಾಂ ತ್ಯಾಗಾತ್ ನಿತ್ಯಹರಿಸ್ಮೃತೇಃ ।**
**ಅರಾಗಾತ್ ವಿಹಿತಾತ್ಯಾಗಾತ್, ಇತ್ಯೇತೇರ್ರೈವ ಸಂಯುತೈಃ ।**
**ಅಪರೋಕ್ಷದರ್ಶನಂ ವಿಷ್ಣೋಃ ಜಾಯತೇ ನಾನ್ಯಥಾ ಕ್ವಚಿತ್ ॥**

ಭಗವದ್ಭಕ್ತಿ, ಜ್ಞಾನ, ನಿಷಿದ್ಧತ್ಯಾಗ, ನಿತ್ಯಹರಿಸ್ಮರಣೆ, ರಾಗಾದಿವರ್ಜನೆ, ವಿಹಿತಕರ್ಮಾನುಷ್ಠಾನ ಇವೆಲ್ಲ ಕೂಡಿಯೇ ಭಗವದಪರೋಕ್ಷವಾಗುವುದು. ಇದರಲ್ಲಿ ಒಂದು ತಪ್ಪಿದರೂ ಅದಿಲ್ಲ.

**ಉದ್ದಿಶ್ಯ ದೇವಾನ್ ದ್ರವ್ಯಾಣಾಂ ತ್ಯಾಗೋ ಯಜ್ಞ ಇತೀರಿತಃ ।**

ದೇವತೆಗಳನ್ನು ಉದ್ದೇಶಿಸಿ ಮಾಡುವ ದ್ರವ್ಯತ್ಯಾಗವೇ ಯಜ್ಞ.

**ಹಿರಣ್ಯಕಶಿಪುಶ್ಚಾಪಿ ಭಗವನ್ನಿಂದಯಾ ತಮಃ ।**
**ವಿವಿಕ್ಷುಃ ಅತ್ಯಗಾತ್ ಸೂನೋಃ ಪ್ರಹ್ಲಾದಸ್ಯಾನುಭಾವತಃ ॥**

ಭಗವನ್ನಿಂದೆಯಿಂದ ಅಂಧಂತಮಸ್ಸಿಗೆ ಹೋಗಬೇಕಿದ್ದ ಹಿರಣ್ಯಕಶಿಪು ಮಗನಾದ ಪ್ರಹ್ಲಾದನ ಸದ್ಗುಣಗಳಿಂದ ಅದನ್ನು ದಾಟಿದನು. ★

## ಹರಿಲಹರಿ

ಹರಿಧ್ಯಾನಕ್ಕೆ ಗಾನಲಹರಿಯಾಗಬೇಕು
ಸದಾ ಹರಿ ಎನುವವಗೆ ಹರಿಗೋಲಾಗಬೇಕು
ನಮ್ಮ ಬಾಳಿಗೆ ಬೆಳಕಾಗಿ ಹರಿಯಬೇಕು
ನಮ್ಮ ಮನದಾಳದಲ್ಲಿ ಸತತ ಹರಿಯುತ್ತಿರಬೇಕು
ನಮ್ಮ ಹೃದಯಕುಂಡಿಕೆಯ ತುಂಬಲು ಹರಿಯುತ್ತಿರಬೇಕು
ಕಾಯಾ ವಾಚಾ ಮನಸಾ ಕರೆದಾಗ ನೀ ಹರಿದು ಬರಬೇಕು
ಅದಕ್ಕಾಗಿ, ಹರಿ ಹರಿ ಎಂದಾಗ ಬರಬೇಕು
ಬನ್ನಗಳ ಪರಿಹರಿಸಿ ಎನ್ನ ಹರಸಬೇಕು
ಉಸಿರಿರುವ ತನಕ ಹರಿಯೆನ್ನಬೇಕು
ಹರಿ, ತೆರೆದ ಮನದೊಳಗೆ, ನಡೆ–ನುಡಿಗಳಲ್ಲಿ ಹರಿದು ಬಾ

ಎಸ್. ಡಿ. ಪೆಜತ್ತಾಯ, ಉಡುಪಿ

**ಆದ್ದರಿಂದ ಶ್ರೀ ಕೃಷ್ಣನನ್ನು ಸರ್ವೋತ್ತಮನೆಂದು ತಿಳಿದು ಆರಾಧಿಸಬೇಕು**

ಪ್ರವಚನ ಮಾಲಿಕೆ

ಭಾಗ–5

# ವಿದುರನೀತಿ

–ಶ್ರೀ ಶ್ರೀ ವಿಶ್ವಪ್ರಿಯತೀರ್ಥಶ್ರೀಪಾದರು, ಶ್ರೀಅದಮಾರುಮಠ,

ಬರಹಃ ಕೃಷ್ಣಾ

ಶ್ರವಣ ಮಾಡುವುದು ಅಂದರೆ ಕೇಳುವುದು. ಆದರೆ ಇಂದಿನ ಸಮಾಜದಲ್ಲಿ ಒಳ್ಳೆಯ ಯಾವುದೇ ವಿಷಯವನ್ನು ಉದ್ದೇಶಪೂರ್ವಕವಾಗಿ ಕೇಳುವುದಿಲ್ಲ. ಅನಾಯಾಸವಾಗಿ ತನ್ನ ಕಿವಿಗೆ ಬಿದ್ದರೆ ಮಾತ್ರ ಅದನ್ನು ನಾವು ಕೇಳುತ್ತೇವೆ. ಎಲ್ಲಿಯೂ ನಾವು ಪ್ರಯತ್ನ ಪೂರ್ವಕವಾಗಿ ಯಾವುದನ್ನೂ ಕೇಳಬೇಕೆಂದು ಅಪೇಕ್ಷೆ ಮಾಡುವುದಿಲ್ಲ. ನಮ್ಮಲ್ಲಿ ಪ್ರಚಲಿತ ಮಾತಿರುವುದೇ ಹೀಗೆ–'ನಾನು ಅವರ ಉಪನ್ಯಾಸವನ್ನು ಕೇಳಿಬಿಟ್ಟಿದ್ದೇನೆ, ಅದಕ್ಕಾಗಿಯೇ ನಾನು ಅವರ ಉಪನ್ಯಾಸಕ್ಕೆ ಹೋಗುವುದಿಲ್ಲ' ಎಂದು. ಮೇಲ್ನೋಟಕ್ಕೆ, ಅವರ ಉಪನ್ಯಾಸ ಕೇಳಿದ್ದೇನೆ ಆದ್ದರಿಂದ ಹೋಗಬೇಕಾಗಿಲ್ಲ ಎಂಬ ಅರ್ಥ ಗೋಚರವಾಗುತ್ತದೆ. ಹೀಗೆ ಉಪನ್ಯಾಸವನ್ನು ಕೇಳಿಯೂ ಪ್ರಯೋಜನವಿಲ್ಲ. ಯಾಕೆಂದರೆ ಸದ್ಯಕ್ಕೆ ನಮಗೆ ಇನ್ನು ಕೂಡ ಶ್ರವಣ ಮಾಡತಕ್ಕಂತಹ ಅಧಿಕಾರವೇ ಬಂದಿಲ್ಲ. ಹೇಗೆ ಶ್ರವಣ ಮಾಡಬೇಕೆಂದು ನಮಗೆ ಗೊತ್ತಾಗಿಲ್ಲ. ಆದ್ದರಿಂದಲೇ ಕೇಳಿ ಬಿಟ್ಟಿದ್ದೇನೆ, ಹೇಳಿ ಬಿಟ್ಟಿದ್ದೇನೆ, ಹೋಗಿ ಬಿಟ್ಟಿದ್ದೇನೆ ಎಂಬ ಮಾತುಗಳು ಚಾಲ್ತಿಯಲ್ಲಿ ಬಂದಿದೆ. ನಾವು ಯಾವುದನ್ನೂ ಇಟ್ಟುಕೊಂಡದ್ದಿಲ್ಲ. ಎಲ್ಲವನ್ನೂ ಬಿಟ್ಟಿದ್ದೇವೆ.

ಭಗವಂತ ಎರಡೆರಡು ಇಂದ್ರಿಯಗಳನ್ನು ಕೊಟ್ಟಿದ್ದಾನೆ. ನಮ್ಮಲ್ಲಿ **'ದ್ವಿರ್ಬಾದ್ಧಂ ಸುಬದ್ಧಂ'** ಎಂಬ ಮಾತು ಇದೆ. ಎರಡು ಗಂಟು ಹಾಕಿದರೆ ಅದು ಗಟ್ಟಿಯಂತೆ. ಒಂದೇ ಗಂಟು ಹಾಕಿದರೆ ಬಿಚ್ಚಿ ಹೋಗುವುದೆಂದು ಇನ್ನೊಂದು ಗಂಟು ಹಾಕಿ ಗಟ್ಟಿ ಮಾಡುವುದು ವಾಡಿಕೆ. ಎರಡು ಕಿವಿಗಳನ್ನು ಕೊಟ್ಟಿರುವುದು ಚೆನ್ನಾಗಿ ಕೇಳಿ ಎಂಬ ಉದ್ದೇಶದಿಂದ. ಎರಡು ಕಿವಿಗಳಿಂದ ಕೇಳಿದರೆ ಅದು ಗಟ್ಟಿ. ಎರಡು ಕಣ್ಣುಗಳಿಂದ ನೋಡಿದರೆ ಅದು ಗಟ್ಟಿ. ಅದಕ್ಕೋಸ್ಕರ ಭಗವಂತನು ಎರಡು ಕಿವಿ, ಎರಡು ಕಣ್ಣು, ಎರಡು ಕೈ, ಎರಡು ಕಾಲು ಕೊಟ್ಟ. ಈ ಕಿವಿಗಳಲ್ಲಿ ಕೇಳತಕ್ಕಂತಹ ಶಕ್ತಿ ಇರುವುದು ಎಲ್ಲಿ? ಇಂದ್ರಿಯ ಯಾವುದು? ಯಾವುದನ್ನು ಇಂದ್ರಿಯ ಎಂದು ಕರೆಯುತ್ತೇವೆ? ಕಿವಿಯ ಹಾಳೆಯನ್ನು ಇಂದ್ರಿಯ ಎಂದು ಕರೆಯುವುದಿಲ್ಲ ಇದಕ್ಕೆ ಕೈಹಿಡಿದರೂ ನಮಗೆ ಕೇಳಿಯೇ ಕೇಳಿಸುತ್ತದೆ. ಹಾಗಾದರೆ ಕೇಳಿಸತಕ್ಕಂತಹ ಇಂದ್ರಿಯ ಇರುವುದು ಒಳಗೆ. ನಾವು ಕಿವಿಯ ರಂಧ್ರಕ್ಕೆ ಕೈ ಹಿಡಿದರೆ ನಮಗೆ ಕೇಳಿಸುವುದಿಲ್ಲ. ಹಾಗಾದರೆ ದೇವರು ಹಾಳೆಯನ್ನು ಯಾಕೆ ಕೊಟ್ಟ. ಅಷ್ಟೇ ಅಲ್ಲದೆ ಅದು ಸ್ವಲ್ಪ ಮುಂದೆ ಭಾಗಿಕೊಂಡಿದೆ. ಕಣ್ಣಿನ ಮೇಲಿನ ಕಸ ಬೀಳುವುದನ್ನು ರೆಪ್ಪೆ ಹೇಗೆ ತಡೆಯುತ್ತದೆಯೋ. ಅದೇರೀತಿ ಕಿವಿಯ ರಕ್ಷಣೆಗಾಗಿ ಈ ಚರ್ಮದ ಹಾಳೆಯನ್ನು ಕೊಟ್ಟನೋ?

ಆದ್ದರಿಂದ ಶ್ರೀ ಕೃಷ್ಣನನ್ನು ಸರ್ವೋತ್ತಮನೆಂದು ತಿಳಿದು ಆರಾಧಿಸಬೇಕು

ಆದರೆ ಕಸಬೀಳತಕ್ಕ ಪ್ರಸಂಗ ಕಿವಿಗಳಿಗೆ ಇಲ್ಲ. ಹಾಗಾದರೆ ಹೇಳಿದ ವಿಚಾರ ಹಿಂದಕ್ಕೆ ಹೋಗದೆ, ಅದನ್ನು ತಡೆದು ಕಿವಿಯ ಒಳಗೆ ತುಂಬಿಸುವುದಕ್ಕೋಸ್ಕರ ಭಗವಂತ ಎರಡು ಕಿವಿಗಳಿಗೆ ಹಾಳೆಯನ್ನು ಕೊಟ್ಟ. ಇಷ್ಟೆಲ್ಲಾ ವ್ಯವಸ್ಥೆಯಿರುವ ಕಿವಿಯಿಂದ ಒಳ್ಳೆಯ ವಿಷಯಗಳ ಶ್ರವಣ ಮಾಡಲೇಬೇಕು. ಇಲ್ಲವಾದರೆ ಅಪಚಾರಮಾಡಿದಂತಾಗುತ್ತದೆ. ಕೇವಲ ಶ್ರವಣವನ್ನಷ್ಟೇ ಅಲ್ಲದೆ ಶ್ರವಣಮಾಡಿದ್ದನ್ನು ಗ್ರಹಣ ಮಾಡಿಕೊಂಡು ಮನನಮಾಡಿಕೊಳ್ಳಲೇಬೇಕು ಎಂದು ವಿದುರನು ಧೃತರಾಷ್ಟ್ರನಿಗೆ ಹೇಳುತ್ತಿದ್ದಾನೆ.

ನಾವು ಏನು ಮಾಡುತ್ತೇವೋ ಅದನ್ನು ಸರಿಯಾಗಿ ತಿಳಿದು ಮಾಡಬೇಕು. ಇಂದಿನ ಸಮಾಜದಲ್ಲಿ ಅಪ್ಪ ಮಾಡಿದ್ದಾನೆಂದು ಮಗನು ಮಾಡುವ ಪರಿಪಾಠ ಬೆಳೆದಿದೆ. ಅದರ ಹಿನ್ನಲೆ ಏನು? ಯಾಕೆ ಮಾಡಬೇಕು? ಎಂಬುದು ತಿಳಿಯದೆ ಮಾಡುತ್ತಿರುವುದನ್ನು ನಾವು ಕಾಣುತ್ತೇವೆ. ಇದಕ್ಕೆ ಒಂದು ಉದಾಹರಣೆಯನ್ನು ಕೊಡುವುದಾದರೆ ಜಪದ ಕೊನೆಯಲ್ಲಿ ನಮ್ಮ ನಾಮ, ಗೋತ್ರ, ಪ್ರವರಗಳನ್ನು ಕಿವಿ ಹಿಡಿದುಕೊಂಡು ದೇವರಿಗೆ ನಮಸ್ಕಾರ ಮಾಡುತ್ತೇವೆ. ಕೈಯಿಂದ ಕಿವಿಯನ್ನು ಹಿಡಿಯುವ ಉದ್ದೇಶ ಏನು? ಕಿವಿಯನ್ನು ಹಿಡಿಯುವುದರ ಶಾಸ್ತ್ರೀಯ ಹಿನ್ನಲೆಯನ್ನು ಬದಿಗಿಟ್ಟು ಲೌಕಿಕವಾಗಿ ವಿಚಾರ ಮಾಡುವುದಾದರೆ, ನಾವೇನೋ ಒಂದು ಮಂತ್ರ ಹೇಳುತ್ತಿರುತ್ತೇವೆ. ಬದಿಯಲ್ಲಿ ಇನ್ನೊಬ್ಬ ಹಾಡನ್ನು ಹಾಡುತ್ತಿದ್ದರೆ, ನಮ್ಮ ಮಂತ್ರ ಅಸ್ತವ್ಯಸ್ತವಾಗುವುದು ಸಹಜ. ನಾವು ಹೇಳುವ ಮಂತ್ರ ಚೆನ್ನಾಗಿ ಅರ್ಥೈಸಿಕೊಂಡು ಮುಂದುವರಿಯಬೇಕಾದರೆ ಕಿವಿಗೆ ಕೈಹಿಡಿದುಕೊಂಡು ಮಂತ್ರವನ್ನು ಹೇಳಬೇಕು. ಹೇಗೆ ಕಿವಿಹಿಡಿದುಕೊಳ್ಳಬೇಕೆಂಬ ಸಂಶಯವನ್ನು ಪರಿಹರಿಸುವುದಾದರೆ, ನಮ್ಮ ಎಡಕೈಯಿಂದ ಎಡ ಕಿವಿಯನ್ನು ಹಾಗೂ ಬಲಕೈಯಿಂದ ಬಲಕಿವಿಯನ್ನು ಹಿಡಿಯಬೇಕು. ಹಾಗೆಯೇ ದೇವರಿಗೆ ನಮಸ್ಕಾರವನ್ನು ಮಾಡುವಾಗ ಎರಡು ಕೈಯನ್ನು ಗುಣಿತಾಕಾರಮಾಡಿಕೊಂಡು ನಮಸ್ಕರಿಸಬೇಕು. ಇದರಿಂದ ನಮ್ಮ ಬಲಕೈಯಿಂದ ದೇವರ ಬಲಕಾಲನ್ನು ಮತ್ತು ಎಡಕೈಯಿಂದ ದೇವರ ಎಡಕಾಲನ್ನು ಮುಟ್ಟಿದಂತಾಗುತ್ತದೆ. ಯದ್ಯಪಿ ದೇವರಿಗೆ ಎಡ ಬಲ ಎನ್ನುವುದು ಇಲ್ಲ. ಆದರೆ ನಾವು ಇದನ್ನು ಲೋಕದ ದೃಷ್ಟಿಯಿಂದ ವಿಚಾರ ಮಾಡಿದಾಗ ದೇವರಿಗೂ ಎಡಬಲ ಎಂದು ಚಿಂತನೆ ಮಾಡುತ್ತೇವೆ. ಎಡಕೈಯಿಂದ ದೇವರ ಎಡಕಾಲನ್ನು ಬಲಕೈಯಿಂದ ದೇವರ ಬಲಕಾಲನ್ನು ಚಿಂತನೆ ಮಾಡಿಕೊಂಡು ನಮಸ್ಕರಿಸಬೇಕು. ಇದನ್ನು ನಾವು ತಿಳಿದುಕೊಂಡು ಮಾಡಿದ್ದಲ್ಲಿ ಅದಕ್ಕೊಂದು ಅರ್ಥ ಬರುತ್ತದೆ. ಆದ್ದರಿಂದ ಹಿರಿಯರು ಮಾಡಿದ್ದಾರೆ, ಅದಕ್ಕೆ ನಾವು ಮಾಡಬೇಕಷ್ಟೆ ಎಂಬ ಪ್ರಸಂಗ ಬಾರದಿರಲಿ ಎಂದು ವಿದುರನು ಧೃತರಾಷ್ಟ್ರನ ಮೂಲಕ ಸಮಾಜಕ್ಕೆ ಎಚ್ಚರಿಕೆ ಕೊಡುತ್ತಾನೆ.

ಮುಂದುವರಿಯುತ್ತದೆ.....

**ಶ್ರೀ ಕೃಷ್ಣನ ಮೂರ್ತಿಯನ್ನು ಸಂದರ್ಶಿಸಬೇಕು.**

# ತೈತ್ತಿರೀಯೋಪನಿಷತ್

ಬರಹ: ಪಿ. ವೆಂಕಟರಮಣ ಆಚಾರ್ಯ, ಉಡುಪಿ

ಪ್ರವಚನ:ಬನ್ನಂಜೆ ಗೋವಿಂದಾಚಾರ್ಯ

ಶಬ್ದ ಉಚ್ಚರಿಸಬೇಕಾದರೆ ನಾಲ್ಕು ಹಂತಗಳಿವೆ. ಮೊಟ್ಟ ಮೊದಲು ಶಬ್ದ ಉತ್ಪತ್ತಿ ಆಗುವುದು ನಾಭಿಯ ಮೂಲಾಧಾರದಲ್ಲಿ. 'ಅ'ಕಾರವನ್ನು ಉಚ್ಚಾರ ಮಾಡಿದಾಗ ನಾಭಿಯ ಮೂಲಾಧಾರದಲ್ಲೇ ಶಬ್ದದ ಉತ್ಪತ್ತಿ ಆಗುತ್ತದೆ. ಅದು ಮಾತ್ರ ನಮಗೆ ಕೇಳಿಸದು. ಇಲ್ಲಿ ಉತ್ಪತ್ತಿಯಾದ ಶಬ್ದಕ್ಕೆ 'ಪರ' ಎಂದು ಹೆಸರು. ನಂತರ ಆ ಶಬ್ದ ಹೃದಯಕ್ಕೆ ಬರುತ್ತದೆ. ಈ ಹಂತಕ್ಕೆ ಪಶ್ಯಂತಿ ಎಂದು ಹೇಳುತ್ತಾರೆ. ಯೋಗಿಗಳು ಈ ಶಬ್ದ (ಸ್ವರ) ವನ್ನು ಕಾಣುತ್ತಾರೆ. (ಕೇಳುತ್ತಾರೆ) ನಾವು ಸಹ ಕಾಣಬಹುದು. ಕಿವಿಯನ್ನು ಮುಚ್ಚಿದಾಗ ಅದು ಕೇಳುತ್ತದೆ. ನಾದದ ಕಂಪನವನ್ನು ಕೇಳಬಹುದು. ಈ ನಾದದ ಕಂಪನ ಕುತ್ತಿಗೆ ನಾಳಕ್ಕೆ ಬಂದಾಗ ಅದು 'ಮಧ್ಯಮ' ಎಂದು ಎನಿಸಲ್ಪಡುತ್ತದೆ. ನಂತರ ಇದನ್ನೇ ನಾವು ನಾಲಿಗೆ, ತುಟಿ, ಮೂಗುಗಳನ್ನು ಉಪಯೋಗಿಸಿಕೊಂಡು ಶಬ್ದವನ್ನು ಹೊರಗೆಡುವುತ್ತೇವೆ. ಅದನ್ನು ಪೂರ್ತಿಯಾಗಿ ವ್ಯಕ್ತಪಡಿಸುತ್ತೇವೆ. ಇಲ್ಲಿ ಮೇಲೆ ಹೇಳಿದ ಮೂರು ಉಚ್ಚಾರಗಳು ನಮಗೆ ಕೇಳುವದಿಲ್ಲ . ನಾಲ್ಕನೇ ಉಚ್ಚಾರ ಮಾಡಿದಾಗ ಕೇಳಿದವರಿಗೆ ಅದರ ಪೂರ್ಣ ಪರಿಜ್ಞಾನ ಬರುತ್ತದೆ. ಕಷ್ಟಪಟ್ಟರೆ ಎರಡು ಹಂತದ ಸ್ವರಗಳನ್ನು ಕೇಳಬಹುದು. ಹೀಗೆ ವರ್ಣಸ್ವರಗಳನ್ನು ತಿಳಿದಿರಬೇಕು.

ವರ್ಣ ಎಂದರೇನು? ಎಷ್ಟು ವರ್ಣಗಳಿವೆ? 'ಅ'ಕಾರದಿಂದ ಹಿಡಿದು 'ಕ್ಷ'ಕಾರದವರೆಗೆ ಇರುವವೆಲ್ಲ ವರ್ಣಗಳು. ಅಕ್ಷರ ಎಂದರೆ ಸ್ವರಗಳು. ವ್ಯಂಜನಗಳು ಅಕ್ಷರಗಳಲ್ಲ. ಸ್ವರದ ಒಟ್ಟಿಗೆ ಸೇರಿದಾಗ (ಕ್, ಚ್, ಕ್+ಅ=ಕ) ಮಾತ್ರ ಅಕ್ಷರಗಳಾಗುತ್ತವೆ. ವರ್ಣಗಳು ಎಷ್ಟಿವೆ ಎಂದು ಲೆಕ್ಕ ಮಾಡಲು ಸಾಧ್ಯವಿಲ್ಲ. ಅನಂತ ವರ್ಣಗಳಿವೆ. ವಾಸ್ತವಿಕವಾಗಿ ನಾವು ಹೇಳುವ 'ಅ' ಬೇರೆ. ಇನ್ನೊಬ್ಬರು ಹೇಳುವ 'ಅ' ಬೇರೆ. ನನ್ನ ಕಂಪನ ಬೇರೆ. ನಿಮ್ಮ ಕಂಪನ ಬೇರೆ. 'ಅ'ಕಾರವೇ ಅನಂತವಾಗಿದೆ. ಆಕಾಶವಾಣಿ ನಿಲಯದವರು 25, 30, 40 ಹೀಗೆ ಬೇರೆ ಬೇರೆ ತರಂಗಾಂತರಗಳಲ್ಲಿ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಾರೆ. ಅದೇ wave length ಗಳನ್ನು ನಾವು ರೇಡಿಯೋದಲ್ಲಿ ಹಿಡಿದು ಆಲಿಸುತ್ತೇವೆ. ಹೀಗೆಯೇ

ಶ್ರೀ ಕೃಷ್ಣನ ಮೂರ್ತಿಯನ್ನು ಸಂದರ್ಶಿಸಬೇಕು.

ರಾಮ, ಕೃಷ್ಣ, ಶಂಕರಾಚಾರ್ಯರು, ಮಧ್ವಾಚಾರ್ಯರು ಮಾತಾಡಿದ ಶಬ್ದಗಳು ಆಕಾಶದಲ್ಲಿ ಇವೆ. ಅದರ ತರಂಗಗಳನ್ನು ಕಂಡು ಹಿಡಿಯಲು ಈಗಿನ ವಿಜ್ಞಾನಿಗಳು ಪ್ರಯತ್ನಿಸುತ್ತಿದ್ದಾರೆ. ಅವರು ಯಾವ wave length ನಲ್ಲಿ ಮಾತಾಡಿದ್ದಾರೆ ಎಂದು ಒಮ್ಮೆ ತಿಳಿದರೆ ಸಾಕು. ಅದನ್ನು ನಾವು ಕೇಳಲು ಶಕ್ತರಾಗುತ್ತೇವೆ. ಹೀಗೆ ಅಕ್ಷರಗಳು ಅನಂತ ಇವೆ. ವ್ಯಾವಹಾರಿಕವಾಗಿ ಅಕ್ಷರಗಳೆಷ್ಟು? ಸಂಸ್ಕೃತದಲ್ಲಿ 44ರಿಂದ 66ರವರೆಗೆ ಅಕ್ಷರಗಳಿವೆ. ಮೂಲಭೂತವಾಗಿ 44 ಅಕ್ಷರಗಳು ಸಂಸ್ಕೃತದಲ್ಲಿ ಇವೆ. ಅಲ್ಲದೆ ಅಕ್ಷರಗಳ ಸಂಖ್ಯೆಯನ್ನು 66ರವರೆಗೆ ಏರಿಸಿಕೊಂಡು ಹೋಗಿದ್ದಾರೆ. ಅ, ಇ, ಉ, ಋ, ಲೃ ಏ, ಐ, ಓ, ಔ=9. 'ಅಂ' ಹಾಗೂ 'ಅಃ' ವನ್ನು ಕೆಲವರು ಸ್ವರವೆಂತಲೂ ಕೆಲವರು ವ್ಯಂಜನವೆಂತಲೂ ಹೇಳುತ್ತಾರೆ. ಅಲ್ಲದೆ ಕೆಲವರು 'ಅಂ' ನ್ನು ಮಾತ್ರ ಸ್ವರವೆಂತಲೂ 'ಅಃ' ವನ್ನು ವ್ಯಂಜನವೆಂತಲೂ ಹೇಳುತ್ತಾರೆ. ಹೀಗೆ 9+2=11 ಕವರ್ಗ, ಚವರ್ಗ, ಟವರ್ಗ, ತವರ್ಗ, ಹಾಗೂ ಪವರ್ಗ ಹೀಗೆ 25 ಅಕ್ಷರಗಳು. ಯರಲವಶಷಸಹ=8 ಹೀಗೆ ಒಟ್ಟಿಗೆ 9+2+25+8=44. ಇದಕ್ಕೆ ಳ ಸೇರಿಸಿದರೆ 45 ಆಗುತ್ತದೆ. ಅಃ ಎಂಬ ವಿಸರ್ಗ ಇದ್ದ ಹಾಗೆ ಇನ್ನು ಎರಡು ರೀತಿಯ ವಿಸರ್ಗಗಳಿವೆ. ದುಃಖ ಎಂಬಲ್ಲಿ 'ಖ'ಕ್ಕೆ ಒತ್ತಡ ಬೀಳುವ ಹಾಗೆ ಒಂದು ತರದ ವಿಸರ್ಗ ಇದೆ. ಅಲ್ಲದೆ 'ಪ' ಕಾರದ ಮೊದಲು ಸಹ ವಿಸರ್ಗ ಬರುತ್ತದೆ. ಳ ಬಿಟ್ಟು ಈ ಎರಡು ತರಹದ ವಿಸರ್ಗಗಳನ್ನು ಸೇರಿಸಿದರೆ 46 ಆಗುತ್ತದೆ. ಳ ಸೇರಿಸಿದರೆ 47 ಆಗುತ್ತದೆ. ಅಲ್ಲದೆ ಇಷ್ಟರವರೆಗೆ ದೀರ್ಘಗಳನ್ನು ತೆಗೆದುಕೊಂಡಿಲ್ಲ. ಅ ಆಇ ಈ ಉ ಊ ಋ ಲೃ ಏ ಐ ಓ ಔ ಅಂ ಅಃ ಹೀಗೆ 15. ಕಚಟತಪವರ್ಗಗಳು 25. ನಂತರ ಯರಲವಶಷಸಹ=8. ಹೀಗೆ 15+25+8=48 'ಲೃ' ಕ್ಕೆ ದೀರ್ಘ ಸೇರಿಸಿದರೆ 49. ಇದಕ್ಕೆ ಳ ಸೇರಿಸಿದರೆ 50. ಕ್ಷ ಸೇರಿಸಿದರೆ 51. ಳ ಬಿಟ್ಟು ಎರಡು ವಿಸರ್ಗಗಳನ್ನು ಸೇರಿಸಿದರೆ 52. ಳ ಸೇರಿಸಿದರೆ 53. ಹೀಗೆ 66 ರವರೆಗೆ ಅಕ್ಷರಗಳನ್ನು ಗುರುತಿಸಿದ್ದಾರೆ. ಮೊದಲಿನ 14 ಅಕ್ಷರಗಳಿಗೆ 'ಸ್ವರ'ಗಳೆಂದು ಹೇಳುತ್ತಾರೆ. (ಅ ಆ ಇ ಈ ಉ ಊ ಋ ಲೃ ಏ ಐ ಓ ಔ) ಕ, ಚ, ಟ, ತ, ಪ ವರ್ಗಗಳ 25 ಅಕ್ಷರಗಳಿಗೆ 'ಸ್ಪರ್ಷ'ಗಳೆಂದೂ ಯರಲವ ಗಳನ್ನು ಅಂತಸ್ತಗಳೆಂದೂ ಶಷಸಹಗಳನ್ನು ಊಷ್ಮಗಳೆಂದೂ ಹೇಳುತ್ತಾರೆ.

ಮುಂದುವರಿಯುತ್ತದೆ.....

**ಪ್ರತಿದಿನ ಆತನನ್ನು ಪೂಜಿಸಬೇಕು**

# ಶ್ರೀಹರಿಭಕ್ತಿಸಾರ

-ವಿ॥ ಹಯವದನ ಪುರಾಣಿಕ, ತಿರುಪತಿ

**ಬಲುಮೃಗವು ಮರ ಪಕ್ಷಿ ಕೀಟಕ**
**ಜಲಚರೌಘದಿ ಜನಿಸಿದೆನು ಕೋ**
**ಟಲೆಗೊಳಿಸಬೇಡಾಕಟ ಮಾನವನಾದ ಬಳಿಕಿನ್ನು ।**
**ಕೊಲಿಸದಿರು ಯಮನಿಂದ ಮುರಹರ**
**ಒಲಿದು ನಿನ್ನನು ಭಜಿಸುವವರಿಗೆ**
**ಕೊಲೆಗೆ ಕಾರಣವೇನು ರಕ್ಷಿಸು ನಮ್ಮನನವರತ ॥೫೭॥**

ಬಹಳವಾದ ಮೃಗ ವೃಕ್ಷ ಪಕ್ಷಿ ಕೀಟ ಜಲಚರಯೋನಿಗಳ ಸಮೂಹದಲ್ಲಿ ನಾನು ಜನಸಿದ್ದೇನೆ. ಇದೀಗ ಮಾನವನಾದ ಬಳಿಕ ಇನ್ನೂ ಕೋಟಲೆಗೊಳಿಸಬೇಡ. ಅಕಟ! ಮುರಹರ, ಯಮನಿಂದ ನನ್ನನ್ನು ಕೊಲಿಸದಿರು. ಒಲಿದು ನಿನ್ನನು ಭಜಿಸುವವರಿಗೆ ಕೊಲೆಗೆ ಕಾರಣವೇನು? ರಕ್ಷಿಸು ನಮ್ಮನ್ನು ಅನವರತ.

### ಬಲು ಮೃಗವು ಮರ ಪಕ್ಷಿ ಕೀಟಕ ಜಲಚರೌಘದಿ ಜನಿಸಿದೆನು

ಎಂಭತ್ತನಾಲ್ಕು ಲಕ್ಷ ಯೋನಿಗಳಲ್ಲಿ ಮಾನವನದು ನಾಲ್ಕು ಲಕ್ಷ. ಉಳಿದ ಮೃಗ ಮರ ಪಕ್ಷಿ ಕೀಟ ಜಲಚರ ಯೋನಿಗಳಲ್ಲಿ ಮೃಗ ಯೋನಿಗಳೇ ಬಹಳ. ಅವು ಮೂವತ್ತು ಲಕ್ಷ. ವೃಕ್ಷಯೋನಿ ಇಪ್ಪತ್ತು ಲಕ್ಷ. ಪಕ್ಷಿಯೋನಿ ಹತ್ತು ಲಕ್ಷ, ಕೀಟಯೋನಿ ಹನ್ನೊಂದು ಲಕ್ಷ. ಜಲಚರಯೋನಿ ಒಂಭತ್ತು ಲಕ್ಷ. ಈ ಮೃಗ ಪಕ್ಷಿ ಮುಂತಾದ ಯೋನಿಗಳಲ್ಲಿ ಕೋಟಲೆಗಳು ಅಧಿಕ. ಪಾಪ ಮಾಡಿದವರು ಈ ಯೋನಿಗಳಲ್ಲಿ ಹುಟ್ಟುತ್ತಾರೆ. ನಾನೂ ಹಿಂದೆ ಈ ಯೋನಿಗಳಲ್ಲಿ ಜನಿಸಿ ತುಂಬ ಕೋಟಲೆಗಳಿಗೊಳಗಾಗಿದ್ದೇನೆ. ಏನೋ ಪೂರ್ವಪುಣ್ಯವಶದಿಂದ ಈಗ ಮಾನವನಾಗಿ ತತ್ರಾಪಿ ವೈಷ್ಣವನಾಗಿ ಜನಿಸಿದ್ದೇನೆ. ಈಗಲೂ ಕೋಟಲೆಗಳಿಗೆ ನನ್ನನ್ನು ಈಡುಮಾಡುವೆಯಾ, ಶ್ರೀಹರಿ, ಬೇಡ.

### ಕೋಟಲೆಗೊಳಿಸಬೇಡಾಕಟ ಮಾನವನಾದ ಬಳಿಕಿನ್ನು

ಅಕಟ, ಅಯ್ಯೋ, ಸದ್ವೈಷ್ಣವ ಮಾನವನಾಗಿ ಜನಿಸಿದ ಬಳಿಕವೂ ಇನ್ನೂ ನನ್ನನ್ನು ಕೋಟಲೆಗೊಳಿಸಬೇಡ.

ಕೃಷ್ಣನ ಪಾದದ ತುಳಸಿಯನ್ನು ಆಘ್ರಾಣಿಸಬೇಕು.

ಮಾನವ ಜನ್ಮದಲ್ಲಿಯೂ ಕೋಟಲೆಗಳು ಸಹಸ್ರಾರು ಇವೆ. ಹುಟ್ಟಿದವನಿಗೆ ಸಾವು. ಬಾಲ್ಯ ಯೌವನ ವೃದ್ಧಾಪ್ಯಗಳ ವಯೋದೋಷಗಳು ರೋಗರುಜಿನಗಳು ಮನಸ್ಸಿನ ಅಶಾಂತಿ ದಾರಿದ್ರ್ಯ ದುಃಖ ಭಯ ಬಂಧು ವಿಯೋಗ..... ಒಂದೇ, ಎರಡೇ? ಸಂಸಾರದಿಂದ ಮೋಕ್ಷ ಸಿಗುವವರೆಗೆ ಎಲ್ಲವೂ ಅನಿವಾರ್ಯ. ಆದರೆ ಸಂಸಾರದ ದುಃಖವನ್ನು ಸಹನ ಮಾಡುವ ಶಕ್ತಿಯನ್ನು ಭಗವಂತ ಮಾನವನಿಗೆ ಕೊಡುತ್ತಾನೆ. ದ್ವಂದ್ವಸಹಿಷ್ಣುತೆ, ಸುಖದುಃಖಗಳನ್ನು ಸಮಾನವಾಗಿ ಕಾಣುತ್ತ ಬಾಳಿನ ಎಲ್ಲ ಏರಿಳಿತಗಳಲ್ಲಿ ಹಿಗ್ಗದೆ ಕುಗ್ಗದೆ ನಿರ್ಲಿಪ್ತನಾಗಿರುವುದೇ ಒಂದು ಶಕ್ತಿ. ಅದನ್ನು ಮಾನವನಿಗೆ ಹೊರತು ಬೇರಾವ ಮೃಗಪಕ್ಷಿಗಳಿಗೂ ಹರಿ ಕೊಡುವುದಿಲ್ಲ. ಮಾನವ ಹರಿ ಒಲುಮೆಯಿಂದ ಅದನ್ನು ಪಡೆಯಬೇಕು. ಅದು ಬಿಟ್ಟು ಮೃಗಪಕ್ಷಿಗಳಂತೆಯೇ ತಾನೂ ಎಂದುಕೊಂಡು ಅವುಗಳಂತೆಯೇ ಬಾಳುತ್ತೇನೆ, ಹೊಟ್ಟೆಗಾಗಿ ಗೇಣುಬಟ್ಟೆಗಾಗಿ ಹೋರಾಡುತ್ತೇನೆ ಮೋಕ್ಷ ಸಾಧನೆ ಬೇಡವೆಂದರೆ ಅದು ಅವನ ಹಣೆ ಬರಹ. ಯಾರೇನೂ ಮಾಡುವ ಹಾಗಿಲ್ಲ.

ಸುಖದುಃಖಗಳನ್ನು ಸಮನಾಗಿ ಕಾಣುವುದು ದೇವರನ್ನು ಕಣ್ಣಾರೆಕಂಡ ಜ್ಞಾನಿಗಳಿಗೆ ಮಾತ್ರ ಸಾಧ್ಯ. ಏನೂ ಅರಿಯದ ಹುಲು ಮಾನವನೇನು ಮಾಡಬೇಕು? ಎಂದರೆ ಅವನಿಗೂ ಒಂದು ಸುಲಭ ಉಪಾಯವಿದೆ. ಹರಿನಾಮಸಂಕೀರ್ತನೆ ಬಲು ಸುಲಭ. ಹರಿದಾಸನಾಗಬೇಕು. ತನ್ಮಯತೆಯಿಂದ ಹರಿಗುಣಗಳನ್ನು ಹಾಡಿಕೊಂಡಾಡಬೇಕು. ಮೈಮರೆಯಬೇಕು. ಎಲ್ಲ ಕೋಟಲೆಗಳನ್ನೂ ಅವು ಇದ್ದೂ ಇಲ್ಲದಂತೆ ಮಾಡಿಕೊಳ್ಳಬೇಕು.

ಮಾನವ ಸದಾ ಶ್ರಮ ಜೀವಿ. ಶಾರೀರಿಕ ಅಥವಾ ಬೌದ್ಧಿಕ ಶ್ರಮ ಮಾಡುತ್ತಲೇ ಇರುತ್ತಾನೆ. ಶ್ರಮದಿಂದ ದುಃಖವಿದೆ, ಆದರೂ ಸುಖದಾಸೆ ಪ್ರಬಲವಾಗಿರುತ್ತದೆ. ಆದರೆ ಆ ಸುಖ ಬಂದರೂ ಜೊತೆಗೆ ದುಃಖವಿದ್ದೇ ಇರುತ್ತದೆ. ಪಲ್ಲಂಗದಲ್ಲಿ ಪವಡಿಸುವವನೂ ಮೃಷ್ಟಾನ್ನವನ್ನುಣ್ಣುವವನೂ ಮನದೊಳಗೆ ಏನೇನೋ ಚಿಂತೆಗಳಿಂದ ಬೇಯುತ್ತಾನೆ. ಬಂದ ಸುಖ ಅಲ್ಪ ಕ್ಷಣಿಕ. ಅದರ ಹಿಂದಿನಿಂದ ಬರುವ ದುಃಖ ಅಧಿಕ, ದೀರ್ಘ. ಅದರಿಂದ ಸುಖ ನಿಜವಾಗಿ ಸುಖವೇ ಅಲ್ಲ. ನಿಜವಾದ ಸುಖ ಹರಿಭಜನೆಯಿಂದ ಬರುತ್ತದೆ. ಅದು ಅಲೌಖಿಕ ಸುಖ. ಎಲ್ಲ ದುಃಖ ಮರೆಸುವ ಪರಮಸುಖ. ಮೃಷ್ಟಾನ್ನವನ್ನು ನಾನು ಉಣ್ಣುತ್ತಿಲ್ಲ, ನನ್ನೊಳಗಿರುವ ಹರಿ ಉಣ್ಣುತ್ತಾನೆ. ಅವನಿಗಿದು ಅರ್ಪಣೆ ಎಂದು ತುತ್ತು ತುತ್ತಿಗೆ ಗೋವಿಂದ ಗೋವಿಂದ ಎನ್ನುತ್ತ ಉಂಡರೆ ಹೊರಗಿನ ಚಿಂತೆಗಳಿಗೆ ಕೋಟಲೆಗಳಿಗೆ ಅವಕಾಶವಿಲ್ಲ. ಅದರಿಂದ ನನಗಿಂತಹ ವಿವೇಕ ನೀಡು, ಮಾನವನಾಗಿ ವೈಷ್ಣವನಾಗಿ ಹುಟ್ಟಿದ ಬಳಿಕ ಅವಿವೇಕತನದಿಂದ ಇನ್ನೂ ನಾನು ಬಳಲಬೇಕೆ? ಇನ್ನೂ ನನಗೆ ಕೋಟಲೆಯೆ? ಕೊಲೆಯೆ?

**ಹಾಗೆಂದು ಉಳಿದ ದೇವತೆಗಳಲ್ಲಿ ತಿರಸ್ಕಾರ ಬೇಡ.**

## ಕೊಲಿಸದಿರು ಯಮನಿಂದ

ಕೊಲೆ ಎಂದರೇನು? ಶರೀರವನ್ನು ಯಾರೂ ಕೊಲೆ ಮಾಡುವುದಿಲ್ಲ. ವ್ಯಕ್ತಿಯನ್ನು ಕೊಲ್ಲುತ್ತಾರೆ. ವಸ್ತುತಃ ವ್ಯಕ್ತಿಗೆ, ಆತ್ಮನಿಗೆ ಕೊಲೆಯಿಲ್ಲ. ಅವನು ಅಚ್ಛೇದ್ಯ ಅಭೇದ್ಯ. ಕೇವಲ ಶರೀರ ಬಂದು ಹೋಗುವುದೇ ಜನನ–ಮರಣ. ಮರಣ ಉಂಟು ಮಾಡುವುದೇ ಕೊಲೆ. ಕೊಲೆಗಾರ ವಸ್ತುತಃ ಕೊಲೆ ಮಾಡುವುದಿಲ್ಲ. ಶರೀರಕ್ಕೆ ಗಾಯ ಮಾಡುತ್ತಾನೆ. ಕೊಲೆ ಮಾಡುವವನು ಯಮ. ಗಾಯಗೊಂಡ ಶರೀರದಿಂದ ಆತ್ಮನನ್ನು ಆತ ಹೊರಗೆ ಸೆಳೆಯುತ್ತಾನೆ. ಆತ್ಮ ಬರಲಾರೆನೆಂದು ವಿಲವಿಲನೆ ಒದ್ದಾಡಿದರೂ ಫಲವಿಲ್ಲ.

ಅಜಾಮಿಳನನ್ನು ಈ ರೀತಿ ಕೊಲ್ಲಲು ಯಮದೂತರು ಬಂದಾಗ ಆತ 'ನಾರಾಯಣ!' ಎಂದು ಕೂಗಿ ಕರೆದ. ಆಗ ವಿಷ್ಣುದೂತರು ಬಂದು ಯಮದೂತರನ್ನು ಓಡಿಸಿದರು. ಪಾಪಿಗಳನ್ನು ಕೊಲ್ಲಲು ನರಕಕ್ಕೆ ಹಾಕಲು ಯಮದೂತರು ಬರುತ್ತಾರೆ. ಪುಣ್ಯವಂತರನ್ನು ಪುಣ್ಯಲೋಕಕ್ಕೆ ಒಯ್ಯಲು ವಿಷ್ಣುದೂತರು ಬರುತ್ತಾರೆ. ಹಾಗೇ ನನ್ನನ್ನು ಯಮನಿಂದ ಕೊಲ್ಲಿಸದಿರು, ನಾನೂ ನಾರಾಯಣ! ಹರಿ! ಎಂದು ನಾಮಸಂಕೀರ್ತನೆ ಮಾಡುತ್ತೇನೆ, ಭಜಿಸುತ್ತೇನೆ.

## ಒಲಿದು ನಿನ್ನನು ಭಜಿಸುವವರಿಗೆ ಕೊಲೆಗೆ ಕಾರಣವೇನು

ಒಲಿದು ಪ್ರೀತಿಯಿಂದ ನಿನ್ನನ್ನು ಭಜಿಸುವವರಿಗೆ ಕೊಲೆಗೆ ಕಾರಣವೇ ಇಲ್ಲ. 'ವಾಸಾಂಸಿ ಜೀರ್ಣಾನಿ ಯಥಾ ವಿಹಾಯ'– ಹಳೆ ಬಟ್ಟೆ ಬೇಡವೆಂದು ಹೊಸಬಟ್ಟೆ ಉಡುವಂತೆ ಹರಿದಾಸರು ಹರಿಭಜನೆಗೆ ಸಲ್ಲದ ಜೀರ್ಣವಾದ ಹಳೆ ಶರೀರ ಬೇಡವೆಂದು ಅದರಲ್ಲಿ ಅಭಿಮಾನವನ್ನು ಬಿಟ್ಟಿರುತ್ತಾರೆ. ಯೋಗಾಭ್ಯಾಸ ಬಲದಿಂದ ದ್ರೋಣಾಚಾರ್ಯರು ರಣರಂಗದಲ್ಲಿಯೇ ಶರೀರವನ್ನು ಬಿಟ್ಟು ಹೊರಟಿದ್ದಾಗ ಧೃಷ್ಟದ್ಯುಮ್ನ ಶರೀರವನ್ನು ಖಡ್ಗದಿಂದ ಹೊಡೆದ. ಪರೀಕ್ಷಿತ ಯೋಗಾಭ್ಯಾಸದಿಂದ ಶರೀರಾಭಿಮಾನ ತೊರೆದು ಹೊರಟಾಗ ತಕ್ಷಕ ಕಡಿದ. ನೋಡುವ ಕಣ್ಣಿಗೆ ಇದು ಕೊಲೆ. ವಾಸ್ತವದಲ್ಲಿ ಕೊಲೆಯಲ್ಲ. ಶರೀರವಿಯೋಗವನ್ನು ಯಾರೂ ಮಾಡಿಲ್ಲ.

## ರಕ್ಷಿಸು ನಮ್ಮನನವರತ

ಮಾನವನಾಗಿ ಸದ್‌ವೈಷ್ಣವನಾಗಿ ಹುಟ್ಟಿದ್ದೇನೆ. ನಿನ್ನನ್ನು ಭಜಿಸುತ್ತಿದ್ದೇನೆ. ಅದರಿಂದ ಬದುಕಿರುವಷ್ಟೂ ಕಾಲ ನಿನ್ನ ಸ್ಮರಣೆಯಲ್ಲಿ ನಾಮಸಂಕೀರ್ತನೆಯಲ್ಲಿ ಎಲ್ಲ ಕೋಟಲೆಗಳನ್ನು ಮರೆಸು. ಅಂತ್ಯಕಾಲದಲ್ಲಿ 'ಅನಾಯಾಸೇನ ಮರಣಂ' ಎಂಬಂತೆ ನಿನ್ನ ಸ್ಮರಣೆಯಲ್ಲಿ ಜೀರ್ಣಶರೀರದ ಮೇಲಿನ ಅಭಿಮಾನ ಬಿಟ್ಟು ಸುಖವಾಗಿ ನಾನಾಗಿ ಶರೀರವನ್ನು ಬಿಡುವಂತೆ ಮಾಡು. ಯಮನಿಂದ ಕೊಲಿಸಬೇಡ, ಅನವರತ ನನ್ನನು ಕಾಪಾಡು.

ಮುಂದುವರಿಯುತ್ತದೆ.....

ಎಲ್ಲಾ ದೇವತೆಗಳ ಬಗ್ಗೆ ಚೆನ್ನಾಗಿ ಅರಿತು ಗೌರವಿಸಬೇಕು.

ಪರಮಪೂಜ್ಯ ಉಡುಪಿ ಶ್ರೀಪಲಿಮಾರು ಮಠದ

## ಶ್ರೀ ಶ್ರೀ 108 ವಿದ್ಯಾಧೀಶತೀರ್ಥ ಶ್ರೀಪಾದರೊಂದಿಗೆ

## ರಜಾ ಕಾಲದಲ್ಲಿ

**ಪಶ್ಚಿಮ ಭಾರತ ತೀರ್ಥಕ್ಷೇತ್ರ ಪ್ರವಾಸ**

**ಅಕ್ಟೋಬರ್ 15ರಿಂದ 22, 2008ರವರೆಗೆ (8 ದಿನಗಳು)**

(ಊಟ, ವಸತಿ ಎಲ್ಲಾ ಸೇರಿ)

ಸೀಟು 1ಕ್ಕೆ ಉಡುಪಿಯಿಂದ ಉಡುಪಿಗೆ ರೂ. 7,000/– (ಸ್ಲೀಪರ್ ಕೋಚ್)

ಬೆಂಗಳೂರಿನಿಂದ ಬೆಂಗಳೂರಿಗೆ ರೂ. 7,600/– (ಸ್ಲೀಪರ್ ಕೋಚ್)

ಅಡ್ವಾನ್ಸ್ ರೂ. 2,000/–

ಸೀಟು 1ಕ್ಕೆ ಉಡುಪಿಯಿಂದ ಉಡುಪಿಗೆ ರೂ. 10,000/– (3 ಟೈಯರ್ ಎ.ಸಿ.)

ಬೆಂಗಳೂರಿನಿಂದ ಬೆಂಗಳೂರಿಗೆ ರೂ. 10,600/– (3 ಟೈಯರ್ ಎ.ಸಿ.)

ಅಡ್ವಾನ್ಸ್ ರೂ. 5,000/–

ಸೀಟುಗಳನ್ನು ಕಾದಿರಿಸಿರಿ.

ಪ್ರತಿನಿತ್ಯ ಆಯಾಯ ಕ್ಷೇತ್ರದ ಮಹಾತ್ಮೆಯನ್ನು ಶ್ರೀಗಳವರು ಪ್ರವಚನ ಮಾಡುತ್ತಾರೆ.

**ಸಂದರ್ಶಿಸುವ ಸ್ಥಳಗಳು:** ನರ್ಮದಾ, ಮಾತೃಗಯಾ, ಸೋಮನಾಥ, ಪ್ರಭಾಸ, ದ್ವಾರಕಾ, ಭೇಟ್‌ದ್ವಾರಕಾ, ಪುಷ್ಕರ,

**ವಿ.ಸೂ.** ಇದು ರೈಲ್ವೇ ಯಾತ್ರೆ ಆದ್ದರಿಂದ ಸೀಟುಗಳನ್ನು ಕನ್‌ಫರ್ಮ್ ಮಾಡಲು ಬೇಗನೇ ಬುಕ್ಕಿಂಗ್ ಮಾಡಬೇಕು. ಆದ್ದರಿಂದ ಅಗಸ್ಟ್ 15ರ ಒಳಗೆ ಅಡ್ವಾನ್ಸ್ ಕೊಟ್ಟು ಬುಕ್ಕಿಂಗ್ ಮಾಡಿಸಬೇಕಾಗಿ ಅಪೇಕ್ಷಿಸುತ್ತೇವೆ. ಸೀಟು ಬುಕ್ಕಿಂಗ್ ಮಾಡಿ ನಂತರ ಬರಲು ಅನಾನುಕೂಲವಾದಲ್ಲಿ ನಿಮ್ಮ ಅಡ್ವಾನ್ಸ್ ಹಣವನ್ನು ಹಿಂದಿರುಗಿಸಲಾಗುತ್ತದೆ.

ಜಗದ್ಗುರು ಮಧ್ವಾಚಾರ್ಯರಂತಹ ಮಹಾಜ್ಞಾನಿಗಳನ್ನೇ ಗುರುಗಳನ್ನಾಗಿ ಸ್ವೀಕರಿಸಿರಿ

**ಕಥಾಸಂದೇಶ** ಭಾಗ: 5

# ಭಾರತಭಾವದರ್ಪಣ

–ವಿ॥ ರಾಮವಿಟ್ಠಲಾಚಾರ್ಯ ಬೆಂಗಳೂರು

ಒಮ್ಮೆ ಬೈದಮುನಿಗಳು ಪೌರೋಹಿತ್ಯಕ್ಕಾಗಿ ಹೊರಡಬೇಕಾಗಿ ಬಂದಾಗ ಶಿಷ್ಯ ಉತ್ತಂಕನನ್ನು ಗುರುಕುಲದ ನಿರ್ವಹಣೆಗೆ ನಿಯೋಜಿಸಿದರು. ಗುರುಗಳ ಆಜ್ಞೆಯನ್ನು ಶಿರಸಾ ವಹಿಸಿ ಗುರುಕುಲದಲ್ಲಿದ್ದರು ಉತ್ತಂಕರು.

ಒಮ್ಮೆ ಗುರುಕುಲದ ಹೆಂಗಸರು ಬಂದು ನಿನ್ನ ಗುರುಪತ್ನಿ ಋತುಮತಿಯಾಗಿರುವಳು. ಅವಳ ಋತುಕಾಲ ವ್ಯರ್ಥವಾಗದಂತೆ ಸಹಕರಿಸು ಎಂದರು. ಉತ್ತಂಕ ನುಡಿದ. ಹೆಂಗಸರ ಮಾತು ಕೇಳಿಕೊಂಡು ಇಂತಹ ಅಕಾರ್ಯವನ್ನು ನಾನು ಮಾಡಲಾರೆ. ಅಕಾರ್ಯವನ್ನೂ ಮಾಡು ಎಂದು ಗುರುಗಳು ನನಗೆ ಆದೇಶವಿತ್ತಿಲ್ಲ.

ಸ್ವಲ್ಪ ಸಮಯದ ಬಳಿಕ ಪ್ರವಾಸ ಹೋಗಿದ್ದ ಬೈದರು ಮನೆಗೆ ಹಿಂತಿರುಗಿದರು. ಗುರುಪತ್ನೀಗಮನವನ್ನು ನಿರಾಕರಿಸಿದ ಉತ್ತಂಕರ ಸನ್ನಡತೆಯನ್ನು ತಿಳಿದು ಸಂತಸಪಟ್ಟರು. ವತ್ಸ! ಉತ್ತಂಕ! ಧರ್ಮದ ಎಲ್ಲೆಯನ್ನು ಮೀರದೆ ನನ್ನ ಶುಶ್ರೂಷೆಯನ್ನು ಮಾಡಿರುವಿ, ಸಂತಸಗೊಂಡಿರುವೆನು. ನಿನಗೇನು ಪ್ರಿಯವನ್ನುಂಟು ಮಾಡಲಿ? ನೀನು ಸಕಲಕಾಮನೆಯನ್ನು ಹೊಂದುವವನಾಗುವಿ. ನೀನಿನ್ನು ಹೊರಡಬಹುದು.

ಉತ್ತಂಕ ಹೇಳಿದರು. ಗುರುಗಳೇ! ನೀವು ಅನುಮತಿಕೊಟ್ಟರೆ ನಿಮಗಿಷ್ಟವಾದ ಗುರುದಕ್ಷಿಣೆಯನ್ನು ಸಲ್ಲಿಸಬೇಕೆಂದು ನನ್ನ ಬಯಕೆ.

ನೋಡೋಣ. ಸ್ವಲ್ಪ ಕಾಲ ಇಲ್ಲಿಯೇ ಇರು ಎಂದರು ಗುರುಗಳು. ಸ್ವಲ್ಪ ಕಾಲ ಕಳೆದ ಮೇಲೆ ಉತ್ತಂಕ ಮತ್ತೆ ವಿಚಾರಿಸಿದರು. ಗುರುಗಳೇ ಏನು ಗುರುದಕ್ಷಿಣೆ ಕೊಡಲಿ? ಅನುಮತಿಸಿ.

ಮಗು ಉತ್ತಂಕ! ಮೇಲಿಂದ ಮೇಲೆ ಏನು ಗುರುದಕ್ಷಿಣೆ ಕೊಡಲಿ ಎಂದು ಕೇಳುತ್ತಿರುವಿ. ನನ್ನ ಹೆಂಡತಿಯಲ್ಲಿ ಹೋಗಿ ಕೇಳು ಏನು ತರಲೆಂದು. ನಿನ್ನ ಗುರುಪತ್ನಿ ಏನು ಕೇಳುತ್ತಾಳೆ. ಅದನ್ನು ತಂದು ಕೊಡೆಂದರು.

ಅಮ್ಮ ! ಗುರುಕುಲವಾಸ ಪೂರೈಸಿ ಮನೆಗೆ ಹೊರಡುವವನಿದ್ದೇನೆ. ಗುರುದಕ್ಷಿಣೆಯನ್ನು ಸಲ್ಲಿಸಿ ಋಣಮುಕ್ತನಾಗಬೇಕೆಂದು ಬಯಸಿದ್ದೇನೆ. ತಮಗೇನು ಇಷ್ಟವಸ್ತುವನ್ನು ಗುರುದಕ್ಷಿಣೆಯಾಗಿ ಸಲ್ಲಿಸಲಿ? ಹೇಳಿ ಎಂದು ಉತ್ತಂಕರು ಗುರುಪತ್ನಿಯನ್ನು ವಿಚಾರಿಸಿದರು.

**ಅವನಿಗೆ ಅರ್ಪಿಸಿದ ಪವಿತ್ರಾನ್ನವನ್ನು ಸ್ವೀಕರಿಸಬೇಕು**

ಉತ್ತಂಕ! ಪೌಷ್ಯರಾಜನ ಬಳಿಗೆ ಹೋಗು. ಅವಳ ಪತ್ನಿ ಧಾರಣೆ ಮಾಡಿರುವ ಓಲೆಯನ್ನು ಬೇಡಿ ತೆಗೆದುಕೊಂಡು ಬಾ. ಇಂದಿನಿಂದ ನಾಲ್ಕನೇ ದಿವಸ ಇಲ್ಲಿ ನಡೆಯುವ ಧಾರ್ಮಿಕ ಸಮಾರಂಭದಲ್ಲಿ ಆ ಕುಂಡಲಿಗಳನ್ನು ಧರಿಸಿ ಕಂಗೊಳಿಸುತ್ತ ಬ್ರಾಹ್ಮಣರಿಗೆ ಬಡಿಸಬೇಕೆಂದು ಬಯಸಿದ್ದೇನೆ. ಹೀಗೆ ಮಾಡಿದರೆ ನಿನಗೆ ಶ್ರೇಯಸ್ಸಾಗುವುದು.

ಉತ್ತಂಕರು ಸಂಭ್ರಮದಿಂದ ಹೊರಟರು. ದಾರಿಯಲ್ಲಿ ಅತಿ ಎತ್ತರದ ಎತ್ತು ಹಾಗೂ ಅದರ ಬೆನ್ನೇರಿ ಕುಳಿತ ಪುರುಷನನ್ನು ಕಂಡರು. ಆ ಪುರುಷ ಉತ್ತಂಕರಿಗೆ ಈ ಎತ್ತಿನ ಸಗಣಿಯನ್ನು ತಿನ್ನು ಎಂದಾದೇಶಿಸಿದ. ಅದನ್ನು ತಿನ್ನಲೊಪ್ಪದ ಉತ್ತಂಕರಿಗೆ ವಿಚಾರ ಮಾಡಬೇಡ. ಸುಮ್ಮನೆ ತಿನ್ನು. ನಿನ್ನ ಗುರುಗಳೂ ತಿಂದಿರುವರು ಎಂದ. ಹಾಗೆ ಆಗಲೆಂದು ಉತ್ತಂಕರು ಅದರ ಗಂಜಲ ಸಗಣಿಗಳನ್ನು ತಿಂದು ಹೊರಟರು. ಗಡಿಬಿಡಿಯಲ್ಲಿ ಆಚಮನೆ ಮಾಡುವುದನ್ನು ಮರೆತಿದ್ದರು.

ಪೌಷ್ಯರಾಜನಲ್ಲಿಗೆ ಹೋದ ಉತ್ತಂಕರು ಆಶೀರ್ವಾದಗಳನ್ನು ಮಾಡಿ ಅವನನ್ನು ಅಭಿನಂದಿಸಿ ನಿಮ್ಮಲ್ಲಿಗೆ ಆರ್ಥಿಯಾಗಿ ಬಂದಿದ್ದೇನೆ. ನನ್ನ ಗುರುಪತ್ನಿಗೆ ನಿಮ್ಮ ಪತ್ನಿಯ ಓಲೆಗಳು ಬೇಕಂತೆ. ದಯವಿಟ್ಟು ತಾವು ಅದನ್ನು ಕೊಡಬೇಕು ಎಂದರು.

ಮನೆಯೊಳಗೆ ಹೋಗಿ ನನ್ನ ಪತ್ನಿಯನ್ನು ಕೇಳಿರಿ ಎಂದ ರಾಜ. ಮನೆಯೊಳಗೆ ಹೊಕ್ಕು ರಾಣಿಯನ್ನು ಕಾಣದೆ ಹಿಂತಿರುಗಿದ ಉತ್ತಂಕರು ಒಳಗೆ ರಾಣಿಯಿಲ್ಲ. ಸುಳ್ಳು ಉಪಚಾರದ ಮಾತೇಕೆ? ಎಂದು ಆಕ್ಷೇಪಿಸಿದರು. ಪೌಷ್ಯರಾಜ ವಿಚಾರ ಮಾಡಿ ನುಡಿದ. ನಾನು ಸುಳ್ಳು ಹೇಳುತ್ತಿಲ್ಲ. ರಾಣಿ ಒಳಗಿದ್ದಾಳೆ. ನಿಮಗೆ ಕಾಣಲಿಲ್ಲವೆಂದರೆ ನೀವೆಲ್ಲೋ ಮೈಲಿಗೆ ಆಗಿರಬೇಕು. ಉಚ್ಚಿಷ್ಟರಾಗಿರುವಿರಿ. ಪತಿವ್ರತೆಯಾದ ರಾಣಿ ಅಪವಿತ್ರರ ಕಣ್ಣಿಗೆ ಬೀಳುವುದಿಲ್ಲ. ಉತ್ತಂಕರು ನೆನಪು ಮಾಡಿಕೊಂಡು. ಹೌದು ಗೋಮಯವನ್ನು ತಿಂದೆ. ಆಚಮನ ಮಾಡುವುದನ್ನು ಮರೆತೆ. ಅಶುಚಿಯಾಗಿದ್ದೇನೆ ಎಂದರು. ಮತ್ತೆ ಚೆನ್ನಾಗಿ ಕೈಕಾಲು ಮುಖಗಳನ್ನು ತೊಳೆದು ನೊರೆಯಿರದ, ಬಿಸಿಯಿರದ ನೀರಿನಿಂದ ಹೃದಯದವರೆಗೆ ತಲುಪುವಂತೆ ಶಬ್ದವಿಲ್ಲದೆ ಆಚಮನ ಮಾಡಿ ಎರಡು ಬಾರಿ ಮುಖ ಒರೆಸಿ ಶುದ್ಧಿ ಮಾಡಿಕೊಂಡು ನೀರಿನಿಂದ ಇಂದ್ರಿಯಗಳನ್ನು ಒರೆಸಿಕೊಂಡು ಅಂತಃಪುರಕ್ಕೆ ಬಂದರು. ಆಗ ಪತಿವ್ರತೆಯಾದ ರಾಣಿ ಗೋಚರಿಸಿದಳು. ಉತ್ತಂಕರನ್ನು ಕಂಡೊಡನೆಯೇ ಎದ್ದು ನಮಿಸಿ ಸ್ವಾಗತ ಹೇಳಿ ಏನು ಮಾಡಲಿ ಹೇಳಿ ಎಂದು ವಿನಂತಿಸಿದಳು. ನನ್ನ ಗುರುಪತ್ನಿಗಾಗಿ ತಮ್ಮ ಕರ್ಣಕುಂಡಲಗಳನ್ನು ಬಯಸಿ ಬಂದಿದ್ದೇನೆ ಎಂದರು ಉತ್ತಂಕರು. ಉತ್ತಂಕರ

**ಭಗವದ್ಭಕ್ತರಾದ ಸಜ್ಜನರ ಸಂಸರ್ಗವನ್ನು ಎಂದಿಗೂ ಬಿಡಬೇಡಿ.**

ಸದ್ಭಾವನೆಯ ನಡವಳಿಕೆ ನೋಡಿ ಪ್ರೀತಳಾದ ರಾಣಿ ಇವನು ಸತ್ಪಾತ್ರನೆಂದು ತಿಳಿದು ಸಂತೋಷದಿಂದ ಕಿವಿಯೋಲೆಗಳನ್ನು ಬಿಚ್ಚಿಕೊಟ್ಟಳು. ತಕ್ಷಕ ನಾಗರಾಜ ಬಹುವಾಗಿ ಬಯಸಿ ಬೇಡುತ್ತಾನೆ. ಜೋಕೆ! ಪ್ರಮಾದಕ್ಕೆ ಒಳಗಾಗದೆ ತೆಗೆದುಕೊಂಡು ಹೋಗಬೇಕು ಎಂದು ಎಚ್ಚರಿಸಿದಳು. ನೆಮ್ಮದಿಯಾಗಿರಿ ರಾಣಿ! ತಕ್ಷಕ ನನ್ನಿಂದ ಬಲಾತ್ಕಾರವಾಗಿ ಇದನ್ನು ಕಸಿಯಲು ಸಾಧ್ಯವಿಲ್ಲ ಎಂದು ಹೇಳಿ ಉತ್ತಂಕ ಪೌಷ್ಯನ ಬಳಿಗೆ ಬಂದು ಹೋಗಿ ಬರುತ್ತೇನೆಂದರು. ಆದರೆ ಪೌಷ್ಯ ಬಹುಕಾಲದ ಬಳಿಕ ಗುಣವಂತನಾದ ಸತ್ಪಾತ್ರ ಅತಿಥಿಯಾಗಿ ನೀನು ಬಂದಿರುವಿ. ಶ್ರಾದ್ಧ ಮಾಡಲು ಬಯಸಿದ್ದೇನೆ. ಅವಕಾಶ ಕೊಡಬೇಕು ಎಂದ.

ರಾಜ ಅವಶ್ಯವಾಗಿ ಅವಕಾಶ ಮಾಡಿಕೊಂಡಿದ್ದೇನೆ. ಆಶ್ರಮಕ್ಕೆ ಹಿಂತಿರುಗುವ ಅವಸರವಿದೆ. ಬೇಗ ಇದ್ದದ್ದು ಬಡಿಸು ಎಂದರು ಉತ್ತಂಕರು. ಸಿದ್ಧಪಡಿಸಿದ್ದ ಅನ್ನವನ್ನು ಉತ್ತಂಕರಿಗೆ ಉಣ ಬಡಿಸಿದರು. ತಣ್ಣಗಾದ ಕೂದಲಿನಿಂದ ಕೂಡಿದ ಅನ್ನವನ್ನು ನೋಡಿ ಅಡಿಗೆ ಅಶುಚಿಯಾಗಿದೆ ಎಂದು ಭಾವಿಸಿ ಅಶುಚಿಯಾದ ಅನ್ನವನ್ನು ಉಣಬಡಿಸಿದ ನೀನು ಕುರುಡನಾಗು ಎಂದು ಶಾಪವಿತ್ತರು ಉತ್ತಂಕರು.

ರಾಜನೂ ಸಿಟ್ಟಿನಿಂದ ಅದುಷ್ಟವಾದ ಅನ್ನವನ್ನು ಸುಮ್ಮನೆ ದೂಷಣೆ ಮಾಡಿದ. ನೀನು ಸಂತಾನಹೀನನಾಗು ಎಂದು ಶಪಿಸಿದ. ಉತ್ತಂಕರು ರೇಗಿದರು. ಅಶುಚಿಯಾದ ಅನ್ನ ಹಾಕಿದ ನಿನಗೆ ಪ್ರತಿಶಾಪ ಕೊಡುವ ಹಕ್ಕೆಲ್ಲಿದೆ? ಪೌಷ್ಯ ಹತ್ತಿರ ಬಂದು ಅನ್ನವನ್ನು ನೋಡಿ ನಿಜವಾಗಿ ಅಶುಚಿಯಾಗಿರುವುದನ್ನು ಮನಗಂಡರು. ತಲೆಗೂದಲನ್ನು ಬಿಚ್ಚಿಕೊಂಡೇ ರಾಣಿ ಉಣಬಡಿಸಿದ್ದಾಳೆ. ಆದ್ದರಿಂದ ಕೂದಲು ಅಡಿಗೆಯಲ್ಲಿ ಬಿದ್ದಿರಬೇಕು. ಅಡಿಗೆ ಮಾಡಿ ಸ್ವಲ್ಪ ಕಾಲ ಕಳೆದಿದೆ. ಆದ್ದರಿಂದ ತಣ್ಣಗಾಗಿರಬಹುದು. ದಯವಿಟ್ಟು ಕ್ಷಮಿಸು. ಪ್ರಸನ್ನನಾಗೆಂದರು. ನಾನು ಕುರುಡಾಗದಿರುವಂತೆ ಅನುಗ್ರಹಿಸಬೇಕು. ಅಜ್ಞಾನದಿಂದ ಆದ ಅಪರಾಧವಿದು ಎಂದು ರಾಜ ವಿನಯದಿಂದ ವಿನಂತಿಸಿದನು.

ನನ್ನ ಮಾತು ಸುಳ್ಳಾಗದು. ಆದರೆ ಕುರುಡಾಗಿ ಬೇಗನೆ ಕಣ್ಣು ಪಡೆಯುವಿ ಎಂದು ಅನುಗ್ರಹಿಸಿದ ಉತ್ತಂಕರ ನೀನು ನನಗಿತ್ತ ಶಾಪವನ್ನು ಹಿಂದಕ್ಕೆ ಪಡೆ ಎಂದರು. ಪೌಷ್ಯರಾಜನೆಂದ–ಉತ್ತಂಕ! ನನಗೆ ಶಾಪ ಹಿಂದಕ್ಕೆ ಪಡೆಯಲಾಗುತ್ತಿಲ್ಲ. ನನ್ನ ಮನದ ಕೋಪ ಇನ್ನೂ ಆರಿಲ್ಲ. ಬ್ರಾಹ್ಮಣರ ಮಾತು ಕ್ರೂರ. ಹೃದಯ ಬೆಣ್ಣೆ. ಕ್ಷತ್ರಿಯರ ಮಾತು ಬೆಣ್ಣೆ. ಹೃದಯ ಕ್ರೂರ. ನೀನು ಹೊರಡು. ಉತ್ತಂಕರೆಂದರು. ಅನ್ನ ಅಶುಚಿಯಾಗಿರುವುದನ್ನು ನೋಡಿಯೇ ನಾನು ಶಾಪ ಕೊಟ್ಟೆ. ನೀನು ಅದುಷ್ಟನಾದ ಅನ್ನವನ್ನೇ ನಾನು ದೂಷಣೆ

ನ್ಯಾಯಮಾರ್ಗದಿಂದ ಹಣ ಗಳಿಸಿರಿ, ನೀಚಮಾರ್ಗ ಬೇಡ.

ಮಾಡಿದೆನೆಂದು ಆರೋಪಿಸಿ ಅನಪತ್ಯನಾಗು ಎಂದು ಶಾಪ ಕೊಟ್ಟಿರುವಿ. ಅನ್ನ ವಾಸ್ತವವಾಗಿ ದುಷ್ಟವೇ ಆಗಿದ್ದರಿಂದ ಆ ಶಾಪ ನನಗೆ ತಗಲುವುದಿಲ್ಲ. ಇರಲಿ. ಬರೋಣ ಎಂದು ಹೊರಟರು. ಕುಂಡಲಗಳನ್ನು ಹಿಡಿದು ದಾರಿಯಲ್ಲಿ ಒಬ್ಬ ನಗ್ನ ಸನ್ಯಾಸಿ ಒಮ್ಮೊಮ್ಮೆ ಕಾಣುತ್ತ ಒಮ್ಮೊಮ್ಮೆ ಕಾಣದೆ ಬರುವುದನ್ನು ಕಂಡರು ಉತ್ತಂಕರು. ಬಳಿಕ ಒಂದೆಡೆ ಆಚಮನಗಳಿಗಾಗಿ ಹೊರಡಲು ಅನುವಾಗಿ ಕುಂಡಲಗಳನ್ನು ನೆಲ್ಲದಲ್ಲಿಟ್ಟರು. ಕೂಡಲೆ ಆ ಸನ್ಯಾಸಿ ಆ ಕುಂಡಲಗಳನ್ನು ಹಿಡಿದು ಓಡಿದರು. ಸ್ನಾನ-ಅನುಷ್ಠಾನಗಳನ್ನು ಗುರುದೇವತೆಗಳನ್ನು ನಮಸ್ಕರಿಸಿ ಹಿಂತಿರುಗಿ ಬಂದಾಗ ಕುಂಡಲಗಳು ನಾಪತ್ತೆಯಾಗಿದ್ದವು. ದೂರದಲ್ಲಿ ಸನ್ಯಾಸಿ ಓಡುವುದನ್ನು ಕಂಡ ಉತ್ತಂಕರು ಅವನನ್ನು ಬೆನ್ನಟ್ಟಿ ಹಿಡಿದರು. ಒಡನೆಯೇ ಸನ್ಯಾಸಿವೇಷವನ್ನು ಕಳಚಿ ತಕ್ಷಕನಿಜರೂಪವನ್ನು ಧರಿಸಿ ಧರಿಣಿಯ ಮಹಾಬಿಲವನ್ನು ಹೊಕ್ಕಿದನು. ಆಗ ರಾಣಿಯ ಮಾತು ನೆನಪಾಗಿ ತಾನು ಬಿಲವನ್ನು ಪ್ರವೇಶಿಸಲು ಕೋಲು ಹಿಡಿದು ಆ ಬಿಲವನ್ನು ಅಗೆದರು. ಅದು ಸಾಧ್ಯವಾಗದೆ ಆತಂಕದಿಂದ ಕ್ಲೇಶ ಪಡುವಾಗ ಇಂದ್ರ ಅದನ್ನು ಗಮನಿಸಿ ತನ್ನ ವಜ್ರಾಯುಧವನ್ನು ಕಳುಹಿಸಿ ಬ್ರಾಹ್ಮಣನಿಗೆ ಸಹಾಯ ಮಾಡೆಂದ. ಆ ವಜ್ರಾಯುಧವು ಉತ್ತಂಕರ ಕೈಯ್ಯಲಿದ್ದ ದಂಡಕಾಷ್ಠವನ್ನು ಪ್ರವೇಶಿಸಿ ಬಿಲವನ್ನು ಕ್ಷಿಪ್ರದಲ್ಲಿ ಸೀಳಿತು.

ಉತ್ತಂಕರು ಆ ಮಾರ್ಗದಿಂದಲೆ ನಾಗಲೋಕಕ್ಕೆ ತೆರಳಿದರು. ವಿಸ್ಮಯಕಾರಿ ವೈಭವಗಳಿಂದ ಕಂಗೊಳಿಸುತ್ತಿದ್ದ ನಾಗಲೋಕವನ್ನು ಕಂಡು ಬೆರಗಾದ ಉತ್ತಂಕರು ಅಲ್ಲಿದ್ದ ನಾಗಗಳನ್ನೇ ಸ್ತೋತ್ರ ಮಾಡಿದರು. ಆದರೂ ಕರ್ಣಕುಂಡಲಗಳು ದೊರೆಯಲಿಲ್ಲ. ಆದರೆ ಕೆಲವು ಬೆರಗಿನ ಘಟನೆಗಳನ್ನು ಕಂಡರು. ಒಂದೆಡೆ ಇಬ್ಬರು ಸ್ತ್ರೀಯರು ಕಪ್ಪು ಬಿಳುಪಿನ ದಾರಗಳಿಂದ ಬಟ್ಟೆ ನೇಯ್ಯುತ್ತಿದ್ದರು. ಹನ್ನೆರಡು ಅರಗಳಿರುವ ಚಕ್ರವನ್ನು ಆರು ಕುಮಾರರು ತಿರುಗಿಸುತ್ತಿರುವ ಮತ್ತೊಂದು ದೃಶ್ಯವನ್ನೂ ಕಂಡರು. ಒಬ್ಬ ಪುರುಷ ಹಾಗೂ ಒಂದು ಕುದುರೆಗಳನ್ನು ಕಂಡರು. ಆ ಪುರುಷನನ್ನು ಉತ್ತಂಕರು ಸ್ತೋತ್ರ ಮಾಡಿದರು. ಆ ಪುರುಷ ಪ್ರೀತನಾಗಿ ಏನು ಬೇಕೆಂದ. ನಾಗಗಳು ನನ್ನ ವಶವಾಗಬೇಕೆಂದರು ಉತ್ತಂಕರು. ಆಗ ಆ ಪುರುಷ ಈ ಕುದುರೆಯ ಅಪಾನದ್ವಾರದಲ್ಲಿ ಊದು ಎಂದರು. ಉತ್ತಂಕರು ಹಾಗೆ ಕುದುರೆಯ ಅಪಾನದ್ವಾರದಲ್ಲಿ ಊದಿದಾಗ ಎಲ್ಲ ದ್ವಾರಗಳಿಂದ ಹೊಗೆಯಿಂದ ಕೂಡಿದ ಬೆಂಕಿಯ ಜ್ವಾಲೆಗಳು ಹೊಮ್ಮಿದವು. ಬೆಂಕಿಯ ಪ್ರಭಾವಕ್ಕೆ ಹೆದರಿದ ತಕ್ಷಕ ಕೂಡಲೆ ಕುಂಡಲ ಹಿಡಿದು ಉತ್ತಂಕರಲ್ಲಿಗೆ ಧಾವಿಸಿ ಕುಂಡಲಗಳನ್ನು ಅರ್ಪಿಸಿದ.

ಉತ್ತಂಕನು ಗುರುಪತ್ನಿಯ ಪುಣ್ಯಾಚರಣೆಯ ಸಮಯ ಹತ್ತಿರ ಬಂದಿದೆ. ಸಾಗಬೇಕಾದ

**ಭಗವದ್ಭಕ್ತರನ್ನು ಎಂದಿಗೂ ನಿಂದಿಸದಿರಿ.**

ದಾರಿ ಬಹಳ ದೂರ. ತಲಪುವುದು ಹೇಗೆಂದು ಯೋಚನೆ ಮಾಡುತ್ತಿರುವಾಗ ಆ ಪುರುಷ ಈ ಕುದುರೆಯನ್ನು ಏರಿ ಹೋಗು ಎಂದ. ಕುದುರೆ ಏರಿದ ಉತ್ತಂಕರು ಕ್ಷಣಮಾತ್ರದಲ್ಲಿ ಗುರುಕುಲಕ್ಕೆ ಬಂದರು. ಗುರು ಪತ್ನಿ ಸ್ನಾನ ಮಾಡಿ ಕೂದಲು ಒಣಗಿಸಿಕೊಂಡು ಕುಳಿತಿದ್ದರು. ಉತ್ತಂಕ ಇನ್ನೂ ಬರಲಿಲ್ಲ. ಸಮಾರಂಭ ಆರಂಭವಾಗಿದೆಯೆಂದು ಆತಂಕದಿಂದ ಶಾಪಕೊಡಬೇಕೆಂದು ಕೋಪಗೊಂಡಿರುವಾಗಲೇ ಉತ್ತಂಕರು ಬಂದಿದ್ದಾರೆ. ಉತ್ತಂಕ! ಸಮಯಕ್ಕೆ ಸರಿಯಾಗಿ ಬಂದೆ. ತಡವಾದರೆ ಶಾಪಕೊಡುವ ಯೋಚನೆ ಮಾಡುತ್ತಿದ್ದೆ ಎಂದರು. ಗುರುಪತ್ನಿಗೆ ಕುಂಡಲಗಳನ್ನು ಅರ್ಪಿಸಿ ಗುರುಗಳಿಗೆ ನಮಸ್ಕರಿಸಿದ ಉತ್ತಂಕರು, ತಡವೇಕೆಂದು ಕೇಳಿದ ಗುರುಗಳಿಗೆ ತಕ್ಷಕನಾಗರಾಜ ವಿಘ್ನ ಉಂಟು ಮಾಡಿದನು. ಹಾಗಾಗಿ ನಾಗಲೋಕಕ್ಕೆ ಹೋಗುವ ಸಂದರ್ಭ ಒದಗಿತು. ಅಲ್ಲಿ ಕೆಲವೊಂದು ಅಚ್ಚರಿ ಕಂಡೆ. ಇಬ್ಬರು ಹೆಂಗಸರು ಕಪ್ಪು ಬಿಳುಪಿನ ದಾರಗಳಿಂದ ಯಂತ್ರದಲ್ಲಿ ಬಟ್ಟೆಯನ್ನು ನೇಯುತ್ತಿದ್ದರು. ಅದೇನು? ಆರು ಕುಮಾರರು ತಿರುಗಿಸುತ್ತಿದ್ದ ಹನ್ನೆರಡು ಅರಗಳಿದ್ದ ಚಕ್ರವೇನು? ನಾನು ಕಂಡ ಪುರುಷ, ಕುದುರೆಗಳಾವುವು? ಹೋಗುವ ದಾರಿಯಲ್ಲಿ ವೃಷಭಾರೂಢ ಪುರುಷನೊಬ್ಬ ನನಗೆ ಗೋಮಯ ತಿನ್ನಿಸಿದ. ಆ ಪುರುಷನಾರು? ತಾವು ಈ ವಿಸ್ಮಯಗಳನ್ನು ವಿವರಿಸಬೇಕು ಎಂದು ವಿನಂತಿಸಿದರು.

ಗುರುಗಳು ಪ್ರಸನ್ನಚಿತ್ತರಾಗಿ ವಿವರಿಸುತ್ತ ಅವರ ಕುತೂಹಲವನ್ನು ತಣಿಸಿದರು. ಉತ್ತಂಕ! ಧಾತಾ ವಿಧಾತರೆಂಬ ದೇವತೆಗಳು ಹಗಲು ರಾತ್ರಿಗಳನ್ನು ಹೆಣೆಯುವುದೆ ಬಟ್ಟೆ ನೇಯುವ ಹೆಂಗಸರು. ಆರು ಋತುಗಳು ಆರು ಕುಮಾರರು. ಹನ್ನೆರಡು ತಿಂಗಳುಗಳೇ ಹನ್ನೆರಡು ಅರಗಳು. ಸಂವತ್ಸರವೇ ಚಕ್ರ. ಪರ್ಜನ್ಯವೇ ನೀನು ಕಂಡ ಪುರುಷ. ಅಗ್ನಿಯೇ ಕುದುರೆ. ಐರಾವತವೆಂಬ ನಾಗರಾಜನೇ ಆ ಎತ್ತು. ಅದರ ಮೇಲಿದ್ದ ಪುರುಷ ಇಂದ್ರ. ಅವನು ತಿನ್ನಿಸಿದ ಸಗಣಿ ಅಮೃತ. ಅದರ ಬಲದಿಂದಲೇ ನಾಗಲೋಕದಲ್ಲಿ ನಾಶವಾಗದೆ ಹಿಂತಿರುಗಿ ಬಂದದ್ದು. ಆ ಇಂದ್ರ ನನ್ನ ಗೆಳೆಯ. ನಿನ್ನ ಮೇಲಿನ ಅನುಕಂಪದಿಂದ ಈ ಅನುಗ್ರಹ ಮಾಡಿದ್ದು. ಆದ್ದರಿಂದಲೇ ಕುಂಡಲ ಹಿಡಿದು ಹಿಂತಿರುಗಿ ಬಂದಿ. ಗುರುದಕ್ಷಿಣೆ ಸಮರ್ಪಿಸಿರುವಿ. ಸಂತೋಷ. ಶ್ರೇಯಸ್ಸನ್ನು ಪಡೆಯುವಿ. ಇನ್ನು ನೀನು ಮನೆಗೆ ಹೊರಡಬಹುದು ಎಂದು ಗುರುಗಳು ಉತ್ತಂಕರನ್ನು ಬೀಳ್ಕೊಟ್ಟರು.

ಗುರುಕುಲದ ಉಸ್ತುವಾರಿಯ ಜವಾಬ್ದಾರಿಯನ್ನು ಗುರುಗಳು ವಹಿಸಿಕೊಟ್ಟು ಹೋಗಿರುವಾಗ ಗುರುಕುಲದ ಸ್ತ್ರೀಯರು ಗುರುಪತ್ನಿಯ ಋತುಕಾಲವನ್ನು ವ್ಯರ್ಥಗೊಳಿಸದಿರು

ಗೋವುಗಳನ್ನು-ಸಜ್ಜನರನ್ನು ರಕ್ಷಿಸಲು ಪ್ರಯತ್ನಿಸಿ.

ಎಂದು ಕೇಳಿದಾಗ ತರುಣ ಉತ್ತಂಕರು ಅಕಾರ್ಯದಲ್ಲಿ ತೊಡಗದೆ ಆತ್ಮ ಸಂಯಮವನ್ನು ತೋರಿರುವರು. ಗುರುಕುಲದಲ್ಲಿ ಓದುವ ಬ್ರಹ್ಮಚಾರಿಗಳು ಎಂತಹ ಸಂದರ್ಭದಲ್ಲಿಯೂ ಯಾವುದೇ ಒತ್ತಡಕ್ಕೆ ಒಳಗಾಗದೆ ಸಂಯಮದಿಂದ ವರ್ತನೆ ಮಾಡಬೇಕು. ಗುರುಪತ್ನೀ ಗಮನದಂತಹ ಮಹಾಪರಾಧ ಮಾತ್ರವಲ್ಲದೆ ಯಾವುದೇ ಅನೈತಿಕ ಕಾರ್ಯ ಮಾಡದೆ ಚಾರಿತ್ರ್ಯ ಸಂಪನ್ನರಾಗಿರಬೇಕು. ಅದರಿಂದ ಗುರ್ವನುಗ್ರಹಪಾತ್ರರಾಗಬಹುದು.

ಗುರುದಕ್ಷಿಣೆಗಾಗಿ ಪಯಣಿಸಿದ ಉತ್ತಂಕರಿಗೆ ದೇವತಾ ಸಹಾಯದಿಂದ ಎದುರಾದ ಅಡ್ಡಿ ಆತಂಕಗಳು ಪರಿಹಾರವಾಗಿ ಹಿಡಿದ ಕಾರ್ಯ ಕೈಗೂಡಿತು. ಗುರುಕುಲದಲ್ಲಿ ಅಧ್ಯಯನ ಮಾಡಿದವರು ಕೃತಘ್ನರಾಗಿ ವರ್ತಿಸಬಾರದು. ಗುರುದಕ್ಷಿಣೆ ಅರ್ಪಿಸಿ ಅವರ ಋಣಭಾರವನ್ನು ಕಡಿಮೆಮಾಡಿಕೊಳ್ಳಬೇಕು. ಶ್ರದ್ಧೆಯಿಂದ ಸತ್ಕಾರ್ಯದಲ್ಲಿ ತೊಡಗಿದರೆ ಬರುವ ಅಡ್ಡಿಗಳನ್ನು ದೇವತೆಗಳು ಪರಿಹರಿಸುತ್ತಾರೆ.

ಗೋಮಯ ತಿಂದು ಆಚಮನ ಮಾಡದೆ ಹೋದ ಉತ್ತಂಕರಿಗೆ ಪತಿವ್ರತೆಯ ದರ್ಶನವಾಗಲಿಲ್ಲ. ಭೋಜನೋತ್ತರದಲ್ಲಿ ಆಚಮನದ ಬಗ್ಗೆ ಉದಾಸೀನರಾಗುವ ನಮಗೆ ಇದು ಕಣ್ತೆರೆಸುವ ಕಥೆಯಾಗಿದೆ. ಅಶುಚಿಯಾದರೆ ಮಹಾತ್ಮರ ದರ್ಶನವಾಗದೆಂಬ ಎಚ್ಚರಿಕೆಯೂ ಇಲ್ಲಿದೆ. ಬಕಾಸುರನ ಮುಂದೆ ಬಂಡಿ ಅನ್ನವ ಉಂಡ ಭೀಮಸೇನ ಆ ಗಡಿಬಿಡಿಯಲ್ಲಿಯೂ ಆಚಮನ ಮಾಡಿಯೇ ಬಕಾಸುರನನ್ನು ಸದೆಬಡಿದ ಸಂದರ್ಭವನ್ನೂ ನಾವು ಗಮನಿಸಬೇಕು. ಆಚಮನಕ್ಕೆ ಬಳಸುವ ನೀರು ನೊರೆಯಿರದ ಬಿಸಿಯಿಲ್ಲದ ತಣ್ಣೀರಾಗಿರಬೇಕು. ಹೃದಯಕ್ಕೆ ಮಾತ್ರ ತಲಪುವಷ್ಟೇ ಪ್ರಮಾಣದಲ್ಲಿ ಶಬ್ದವಿಲ್ಲದೆ ಆಚಮನ ಮಾಡಬೇಕು. ಕೈಕಾಲು ಮುಖ ತೊಳೆದು ಪೂರ್ವಮುಖವಾಗಿ ಕುಳಿತೇ ಆಚಮನ ಮಾಡಬೇಕು.

ಬ್ರಾಹ್ಮಣರಿಗೆ ಉಣ ಬಡಿಸುವಾಗ ಅಡಿಗೆ ಬಿಸಿ ಬಿಸಿಯಾಗಿರಬೇಕು. ಅದರಲ್ಲಿ ತಲೆಗೂದಲು ಬೀಳದಂತೆ ಜಡೆಹಾಕಿಕೊಂಡು ಹೆಂಗಸರು ಎಚ್ಚರದಿಂದ ಬಡಿಸಬೇಕು. ಅಶುಚಿಯಾದ ಅನ್ನವನ್ನು ಉಣಬಡಿಸಬಾರದು. ಅಡಿಗೆ ಮಾಡುವ ಬಡಿಸುವ ಹೆಂಗಸರು ತಲೆಕೂದಲು ಬಿಚ್ಚಿಕೊಂಡು ಹರಡಿಕೊಂಡಿರಬಾರದೆನ್ನುವ ಸೂಕ್ಷ್ಮ ತಿಳುವಳಿಕೆಯನ್ನು ಈ ಕಥೆಯಲ್ಲಿ ಕಾಣಬೇಕು.

ಮನೆಗೆ ಸತ್ಪಾತ್ರರು ಬಂದಾಗಲೇ ಶ್ರಾದ್ಧ ಮಾಡಿ ಕೃತಾರ್ಥರಾಗಬೇಕು ಎಂದು ರಾಜನ ನಡೆ ನಮಗೆ ತಿಳಿಸುತ್ತದೆ.

ಮುಂದುವರಿಯುತ್ತದೆ.....

ಬಹುಸಜ್ಜನರ ಮಾರ್ಗವನ್ನಾಶ್ರಯಿಸಿ.

ಅವಲೋಕನ

# ವೈಷ್ಣವತ್ವಕ್ಕೆ ಪುಷ್ಟಿ

-ಸಗ್ರಿ ರಾಘವೇಂದ್ರ ಉಪಾಧ್ಯಾಯ

ಮಹಾಭಾರತದ ಶಾಂತಿಪರ್ವ ಮತ್ತು ಅನುಶಾಸನಪರ್ವ-ಇವುಗಳಲ್ಲಿ ತುಂಬಿದ ಭೀಷ್ಮೋಪದೇಶವನ್ನು ಮಹಾಭಾರತತಾತ್ಪರ್ಯನಿರ್ಣಯದ 31 ಶ್ಲೋಕಗಳಲ್ಲಿ (29-17.....47) ಸೆರೆಹಿಡಿದಿರುವ ಶ್ರೀಮಧ್ವಗುರುಗಳು ಪ್ರಾರಂಭದಲ್ಲಿ ಹನ್ನೆರಡಕ್ಕೂ ಅಧಿಕ ಸರ್ವಸಾಧಾರಣ ಧರ್ಮಗಳನ್ನು ಪ್ರಸ್ತುತಪಡಿಸುತ್ತ ಅವುಗಳಲ್ಲಿ ಸಾರಿರುವ ಒಂದು ಧರ್ಮ.

**'ಪರಸ್ಪರ ವಿರೋಧೇತು ವಿಶಿಷ್ಟಸ್ಯಾನುಕೂಲತಾ.....ಸಾಮ್ಯೇ**
**ವಿರೋಧೇ ಚ ಬಹೂನನುವರ್ತೇತ ವೈಷ್ಣವಾನ್'**

ವೈಷ್ಣವರಲ್ಲಿ ಪರಸ್ಪರವಾಗಿ ವಿರೋಧ ಸಂಭವಿಸಿದಾಗ ಅವರಲ್ಲಿ ವಿಶಿಷ್ಟನಾದ ವೈಷ್ಣವನ ಪಕ್ಷವನ್ನು ಆಶ್ರಯಿಸಿ, ಅವನಿಗೆ ಬೆಂಬಲ ನೀಡಬೇಕು. ಒಂದು ವೇಳೆ ಎರಡೂ ಪಕ್ಷದ ವೈಷ್ಣವರು ಸಮಾನರಾಗಿರುವರೆಂದರೆ ಆಗ ಅಧಿಕವೈಷ್ಣವರು ಯಾವ ಪಕ್ಷದಲ್ಲಿ ಇರುವರೋ ಆ ಪಕ್ಷಕ್ಕೇ ಬೆಂಬಲ ನೀಡಿ ಅದನ್ನೇ ಅನುಸರಿಸಬೇಕು.

## ಆಧ್ಯಾತ್ಮಿಕ ಮಾನದಂಡ

ಹೀಗೆ ನೈತಿಕತೆ, ಪ್ರಾಮಾಣಿಕತೆ ಯಾವ ಪಕ್ಷದಲ್ಲಿ ಇದೆಯೋ ಆ ಪಕ್ಷವನ್ನೇ ಅನುಸರಿಸಬೇಕು ಎಂದು ಪಕ್ಷಾನುಸರಣೆಗೆ ಸಾಮಾನ್ಯವಾಗಿ ಮಾನದಂಡವಾಗಿ ಉದಾಹರಿಸಲಾಗುವ ನೈತಿಕತೆಯನ್ನು, ಪ್ರಾಮಾಣಿಕತೆಯನ್ನು ಬದಲಾಯಿಸಿ ವೈಷ್ಣವತ್ವವನ್ನು ಮಾನದಂಡವಾಗಿ ಇಟ್ಟುಕೊಳ್ಳಲಾಗಿದೆ. ಅಂದರೆ ವೈಷ್ಣವತ್ವವು ನೈತಿಕತೆಯೇ ಮುಂತಾದ ಇತರ ಎಲ್ಲ ಮೌಲ್ಯಗಳಿಗೂ ಮೂಲಾಧಾರದಂತಿದ್ದು, ಅಂತಹ ವೈಷ್ಣವತ್ವ ಇತ್ತೆಂದರೆ ಉಳಿದ ನೈತಿಕತೆಯೇ ಮುಂತಾದವು ಇದ್ದೇ ಇರುವವು ಎಂಬ ಆಂತರ್ಯ.

ಹಾಗೆಯೇ ಸಾಮಾನ್ಯ ವೈಷ್ಣವನನ್ನೂ, ವಿಶಿಷ್ಟ ವೈಷ್ಣವನನ್ನೂ ಹೋಲಿಸಿ ನೋಡಿದಾಗ ವಿಶಿಷ್ಟ ವೈಷ್ಣವನಲ್ಲಿ ವೈಷ್ಣವತ್ವವು ಅಧಿಕ ಪ್ರಮಾಣದಲ್ಲಿ ಇರುವುದರಿಂದ ಅಂತಹ ವಿಶಿಷ್ಟ ವೈಷ್ಣವನಿಗೆ ಬೆಂಬಲಿಸುವುದೆಂದರೆ ಅಧಿಕ ಪ್ರಮಾಣದ ವೈಷ್ಣವತ್ವವನ್ನು ಬೆಂಬಲಿಸಿದಂತೆಯೇ. ಅಂತೆಯೇ ವೈಷ್ಣವರ ಸಂಖ್ಯೆ ಹೆಚ್ಚಾದಂತೆ ಅವರೆಲ್ಲರ ವೈಷ್ಣವತ್ವವೂ ಅಧಿಕವಾದಂತೆಯೇ. ಆದುದರಿಂದ ಕೆಲವೇ ವೈಷ್ಣವರ ಪಕ್ಷಕ್ಕಿಂತ ಅಧಿಕಾಧಿಕ ವೈಷ್ಣವರು ಉಳ್ಳ ಪಕ್ಷಕ್ಕೆ ಬೆಂಬಲ

(36ನೇ ಪುಟದಲ್ಲಿ...)

ದೇಶ ಸೇವೆಯನ್ನು ದೇವರ ಸೇವೆಯೆಂಬ ಭಾವನೆಯಿಂದ ಮಾಡುತ್ತಿರಿ.

# ಕಠೋಪನಿಷತ್

ಡಾ। ಎನ್. ವೇಂಕಟೇಶಾಚಾರ್ಯ

ಯಮನು ಒಡ್ಡಿದ ಅಂತ್ಯದ ಆಮಿಷ ನೀನು ಇಚ್ಛಿಸುವ ತನಕ ಬಾಳು. ಮಾನವನು ಸಂಪತ್ತನ್ನೆಲ್ಲಾ ಶೇಖರಿಸುವುದು, ಸವಲತ್ತುಗಳನ್ನೆಲ್ಲಾ ನ್ಯಾಯತ್ತೀಕರಿಸುವುದು ಸುಖಕ್ಕಾಗಿ. ಆ ಸುಖ ನನ್ನದಾಗಬೇಕು ಎಂದು. ಇಷ್ಟಾಗುವಾಗಲೇ ದೇಹ ಮೂಲೆ ಗುಂಪಾಗಿರುತ್ತದೆ. ಆಗ ಅಶಕ್ತತೆಯಿಂದ ವೈರಾಗ್ಯದ ರಾಗ ಹೊರಹೊಮ್ಮುತ್ತದೆ. ಇದೆಲ್ಲವೂ ಸಂಪತ್ತು–ಸುಖಭೋಗಗಳು ಯೌವ್ವನದಲ್ಲಿಯೇ ದೊರತರಂತೂ ಅವನನ್ನು ಹಿಡಿಯುವವರೇ ಇಲ್ಲ. ಇದಕ್ಕಾಗಿಯೇ ಬೇಗನೇ ಸಂಪತ್ತು ಗಳಿಸಬೇಕೆಂಬ ಆತುರ. ಯಮನು ಇಚ್ಛಿಸುವ ತನಕ ಬಾಳು ಎಂಬ ವರ ನೀಡಲು ಮುಂದಾಗುತ್ತಾ ಎಲ್ಲರೂ ಬೀಳುವ ಭಾರೀ ಹೊಂಡದಲ್ಲೇ ನಚಿಕೇತನನ್ನು ಕೆಡವಲು ಸಾಧ್ಯವೇ ಎಂದು ಯೋಚಿಸುತ್ತಿರಬೇಕು. ಉಳಿದವರೂ ತಾವಾಗೇ ಬಂದು ಬಿದ್ದರೂ ಕೂಡ, ನಚಿಕೇತ ಕರೆದರೂ ಸಹ ಅತ್ತ ನೋಡಲೂ ಕೂಡ ನಾಚುತ್ತಿದ್ದಾನೆ.

ಇಷ್ಟೆಲ್ಲಾ ಆಮಿಷ ತೋರಿಸಿದರೂ ಆಚೀಚೆ ಅಲುಗದ ನಚಿಕೇತನನ್ನು ಕಂಡು ಯಮ ಮತ್ತೆ ತನ್ನ ಪ್ರಯತ್ನ ಮುಂದುವರೆಸಿದ. ಯಮನಂತಹ ಹಠಮಾರಿ ಬೇರೊಬ್ಬರಿಲ್ಲ ನಚಿಕೇತನಂತಹ ದಿಟ್ಟ ಇತರರೂ ಇಲ್ಲ. ಇವರಿಬ್ಬರ ಸಂಗಮವೇ ನೀತಿಮಯ ಪ್ರಪಂಚದ ನಿಧಿಯ ಮಾರ್ಗ.

**ಏತತ್ತುಲ್ಯಂ ಯದಿ ಮನ್ಯಸೇ ವರಂ**
**ವೃಣೀಷ್ವ ವಿತ್ತಂ ಚಿರಜೀವಿಕಾಂ ಚ ।**
**ಮಹಾಭೂಮೌ ನಚಿಕೇತಸ್ತ್ವಮೇಧಿ**
**ಕಾಮಾನಾಂ ತ್ವಾಂ ಕಾಮಭಾಜಂ ಕರೋಮಿ ॥**

ಇದಕ್ಕೆ ಸರಿಸಮಾನವಾದ ಬೇರೆ ಯಾವುದನ್ನಾದರೂ ನೀನು ಭಾವಿಸುವುದಾದರೆ ಅದನ್ನೂ ವರವಾಗಿ ಕೇಳು, ಧನವಾಗಲೀ, ಚಿರಜೀವನವಾಗಲಿ, ಭಾರಿ ಭೂಮಿಯ ಹಿರಿಯ ಒಡೆಯತನವಾಗಲಿ ಏನಾದರೂ ಸರಿ ಬಯಕೆಗಳೆಲ್ಲವನ್ನು ನಿನ್ನ ಕೈಗೂಡುವಂತೆ ಮಾಡುತ್ತೇನೆ.

ಯಮನು ಏನಾದರೂ ಸರಿ, ಸೋತಂತೆ ಆಗಬಾರದು ಎಂದು ಮತ್ತೊಂದು ಆಮಿಷ ಒಡ್ಡಿದ. ಮನದೊಳಗೆ ಇರಬಹುದಾದ ಬಯಕೆಗಳನ್ನೆಲ್ಲಾ ಬಡಿದೆಬ್ಬಿಸುವ ಸಾಹಸ

ಭಗವದ್ಭಕ್ತರನ್ನು ಎಂದಿಗೂ ನಿಂದಿಸದಿರಿ.

ಯಮನದು. ಇಂತಹ ಪ್ರಚೋದನೆಗಳಿಗೆ ಬಲಿಯಾಗಿ ನರಕಕ್ಕೆ ನುಗ್ಗಿದ ನರರ ಸಂಖ್ಯೆ ಲೆಕ್ಕವಿಲ್ಲದಷ್ಟು. ಯಮ ಕಂಡಿರುವ ಘಟನೆ ಲಕ್ಷಾಂತರ. ಅವರಲ್ಲಿ ನಚಿಕೇತ ಸೇರಿಯಾನೆ ಎಂದು ಪರೀಕ್ಷೆ ಮಾಡುವ ಸಾಹಸ ಯಮನದು.

ಬೇಕಾದರೆ ಸಂಪತ್ತು ಕೇಳು ಎನ್ನುತ್ತಾನೆ. ಸಂಪತ್ತಿಗಾಗಿ ಏನೆಲ್ಲಾ ಸಾಹಸ ಮಾಡುವವರಿದ್ದಾರೆ. ಬಾಯ್ಬಿಟ್ಟು ಕೇಳದೆ ಮನಸ್ಸಿನಲ್ಲಿಯೇ ಮಂಡಿಗೆ ಮಾಡಿಕೊಳ್ಳುತ್ತಾ ಸಮಯಕ್ಕಾಗಿ ಹೊಂಚುಹಾಕುವ ಗೋಮುಖವ್ಯಾಘ್ರಗಳು. ಇನ್ನೊಬ್ಬರನ್ನು ತಿನ್ನುತ್ತಾ ತೃಪ್ತಿಯಿಲ್ಲದೆ ತೇಗುವ ತೋಳಗಳು, ಮತ್ತೊಬ್ಬರನ್ನು ಬೀದಿಪಾಲು ಮಾಡಿ ಬಂಗಲೆಯಲ್ಲಿ ಭಾರೀ ಬದುಕು ಬದುಕುವ ರಾಕ್ಷಸರು ಇವರೆಲ್ಲಾ ಸಾರ್ವಭೌಮರು. ಸಂಪತ್ತಿನ ಸೇವಕರು. ಈ ಸಂಪತ್ತಿಗಾಗಿಯೇ ಧುರ್ಯೋಧನ ಪಾಂಡವರನ್ನು ಕಾಡಿದ್ದು. ಕೈಕೇಯೀ ರಾಮನನ್ನು ಕಾಡಿಗೆ ಅಟ್ಟಿದ್ದು. ಹಿರಣ್ಯಕಶಿಪು ದೇವಲೋಕಕ್ಕೆ ದಾಳಿ ಮಾಡಿದ್ದು. ಇದನ್ನು ಬೇಡ ಎನ್ನುವವರನ್ನು ಇತಿಹಾಸ ಕಂಡಿಲ್ಲ. ಸಂಪತ್ತಿನ ಬಲೆ ಬಹು ದೊಡ್ಡದು. ಆಕರ್ಷಕ ಕೂಡ.

ಬೇಕಾದರೆ ಚಿರಂಜೀವಿತ್ವ ನೀಡಲು ಸದಾ ಯಮನು ಸಿದ್ಧ. ಇದರಿಂದ ಯಮನಿಗೆ ಇವನ ಬಗ್ಗೆ ಆಗಾಗ್ಗೆ ಆಕ್ರಮಣ ಮಾಡುವ ಅಧಿಕಾರ ಹೋಗುತ್ತದೆ. ಆದರೂ ಸರಿ ಮುಂದೆ ಅಧಿಕಾರ ಕುಗ್ಗಿದರೂ ಸರಿ. ಈಗ ನಚಿಕೇತ ಬಗ್ಗಿದರೆ ಸಾಕು ಎಂಬ ಪರೀಕ್ಷೆ ಯಮನದ್ದು. ಮುಷ್ಟಿಯಲ್ಲಿ ಕಪಿಮುಷ್ಟಿ ಪ್ರಸಿದ್ಧ. ದೃಷ್ಟಿಯಲ್ಲಿ ಗೃಧ್ರದೃಷ್ಟಿ ಪ್ರಸಿದ್ಧ. ಲೋಭ ಒಡ್ಡುವುದರಲ್ಲಿ 'ಯಮಲೋಭ' ಪ್ರಸಿದ್ಧ.

ಎಷ್ಟೆಲ್ಲಾ ಅಸುರರ ತಪಸ್ಸು ಸಾಯಬಾರದೆಂದೇ ಅಲ್ಲವೆ? ಹಿರಣ್ಯಕಶಿಪುವಿಗೆ ಮನಸ್ಸು, ಹಯಗ್ರೀವಾಸುರನ ಹವಣಿಕೆ, ಮಧುಕೈಟಭರ ಹೊಂದಾಣಿಕೆ, ರಾವಣಾದಿಗಳ ದಬ್ಬಾಳಿಕೆ, ಇವೆಲ್ಲಾ ತಾವು ಸಾಯಬಾರದೆಂದೇ ಅಲ್ಲವೆ? ಮೊದಲು ಸಾಯಬಾರದೆಂಬ ಗುರಿ. ಆ ಗುರಿ ಮುಟ್ಟಿದ ಮೇಲೆ ಲೋಕಕ್ಕೆ ದಳ್ಳುರಿ ಇಡುವ ದೈತ್ಯಕುಹಕ. ಇವು ಸರ್ವೇಸಾಧಾರಣ.

ಅಸುರರ ಮಾತಿರಲಿ, ದೇವತೆಗಳ ಹವಣಿಕೆಯೂ ಅಮೃತತ್ವಕ್ಕೆ ಅಲ್ಲವೆ? ಅಲ್ಲಿ ಸ್ವಾರ್ಥಕ್ಕಿಂತ ಸಾರ್ಥಕ್ಯ ಅಡಗಿರುವುದು ನಿಜ. ಮನುಷ್ಯರಂತೂ ಇನ್ನೂ ಮುಂದೆ. ದೈತ್ಯರಿಗಿಂತ ದುಪ್ಪಟ್ಟು ಮುಂದೆ. ದೈತ್ಯರು ಸಾವು ಬರಬಾರದು ಎಂದರೆ ಮಾನವರು, ವಿಜ್ಞಾನಿಗಳು, ಭೋಗಿಗಳು ರೋಗವೇ ಬರಬಾರದೆಂದು ಬಯಸುವವರಲ್ಲವೆ? ರೋಗವೇ ಬೇಡ ಎನ್ನುವವರು ಮೃತ್ಯುವಿಗೆ ಬಾ ಎನ್ನುತ್ತಾರೇನು? ಹೀಗೆ ಚಿರಂಜೀವಿತ್ವವನ್ನು ನೀಡಲು ಯಮನು ಮುಂದಾದ. ನಚಿಕೇತ ಸುಮ್ಮನೆಯೇ ಇದ್ದಾನೆ.

ಮುಂದುವರಿಯುತ್ತದೆ.....

**ಗೋವುಗಳನ್ನು-ಸಜ್ಜನರನ್ನು ರಕ್ಷಿಸಲು ಪ್ರಯತ್ನಿಸಿ.**

ಸ್ತೋತ್ರ ಚಿಂತನೆ

ಭಾಗ–4

# ಶ್ರೀನಾರಾಯಣವರ್ಮ

–ಬೆ.ನಾ ವಿಜಯೀಂದ್ರಾಚಾರ್ಯ, ಮೈಸೂರು

ದ್ವಾದಶಸ್ತೋತ್ರದಲ್ಲಿ ಶ್ರೀಮದಾಚಾರ್ಯರು:–

**ನ ಚ ಕರ್ಮವಿಮಾಮಲಕಾಲಗುಣಪ್ರಭೃತೀಶಮಚಿತ್ತನುತದ್ಧಿ ಯತಃ।**

**ಚಿದಚಿತ್ತನುಸರ್ವಮಸೌ ತು ಹರಿರ್ಯಮಯೇದಿತಿ ವೈದಿಕಮಸ್ತಿ ವಚಃ॥**

ಕರ್ಮ, ವಿಮಾ, ಕಾಲ, ಜಡಪ್ರಕೃತಿ, ಯಾವುದೂ ಜಗತ್ತನ್ನು ನಿಯಮಿಸಲಾರದು. ಜಡ ಚೇತನಾತ್ಮಕವಾದ ಪ್ರಪಂಚವನ್ನು ಶ್ರೀಹರಿ ಒಬ್ಬನೇ ನಿಯಮಿಸುವವ. ಹಾಗಾದರೆ ಜಗತ್ತಿನ ಸಕಲ ದೇವತೆಗಳ ಕೈಯಲ್ಲಿರುವ ಆಯುಧಗಳೂ ಕೋಲಾಟದ ದಂಡಗಳಂತೆ. ಎಲ್ಲದಕ್ಕೂ ಶಕ್ತಿಯನ್ನು ಶ್ರೀಹರಿಯೇ ತುಂಬುವವ. ಅವನು ಶಕ್ತಿ ತುಂಬದಿದ್ದಲ್ಲಿ ದಂಡಗಳೆಲ್ಲವೂ ದಂಡ. ಆದ್ದರಿಂದ ನಿಯಾಮಕತ್ವ ಗುಣದ ದಂಡಕ್ಕೆ ಬೆಲೆ ಇರುವುದು ಶ್ರೀಹರಿಯ ಕೈಯಲ್ಲಿ ಮಾತ್ರ.

ಖಡ್ಗವು ನಿಯಾಮಕತ್ವಗುಣವನ್ನು ತಿಳಿಸುತ್ತಿದೆ ಎನ್ನಲು ಇಂದಿನಬದುಕಿನ ವ್ಯವಹಾರಗಳನ್ನು ಕಂಡು ತಿಳಿಯಬಹುದು.

[ಇಂದಿನ ಬಹುತೇಕ ಭಯೋತ್ಪಾದಕರು ಹಿಡಿಯುವ ಶಸ್ತ್ರಾಸ್ತ್ರಗಳೆಲ್ಲವೂ ಭಯಹುಟ್ಟಿಸಲು. ಭಯ ಹುಟ್ಟದಿದ್ದಾಗ ಹಿಂಸಿಸಲು.] ತಾಯಿಯು ಕೈಯಲ್ಲಿ ಮಕ್ಕಳನ್ನುದ್ದೇಶಿಸಿ ಹಿಡಿಯುವ ಕೋಲು ಮಕ್ಕಳನ್ನು ಸರಿದಾರಿಯಲ್ಲಿ ತರಲು. ದಂಡ ಹಿಡಿದ ಮಾತ್ರದಿಂದ ದಾರಿಹಿಡಿಯದಿದ್ದಲ್ಲಿ ದಂಡನೆಗೂ ಬಳಕೆಯಾದೀತು. ದಂಡಿಸಿದರೂ ದಾರಿಹಿಡಿಯದಿದ್ದಲ್ಲಿ ಮಗನನ್ನು ತುಂಡರಿಸಲಾಗದು ತಾಯಿಗೆ. ಆದರೆ ದೇವರು ಅದನ್ನೂ ಮಾಡುವವನಾ–ದ್ದರಿಂದ ನಿಜವಾದ ದಂಡಧಾರಿ ಅವನೇ ಆಗಿದ್ದಾನೆ. ನರಕಾಸುರನ ಕಥೆಯೇ ಇದಕ್ಕೆ ಸಾಕ್ಷಿ.

ಬಹುತೇಕ ಹಸುಗಳನ್ನು ಮೇಯಿಸುವ ಗೊಲ್ಲರು ತಮ್ಮ ಕೈಯಲ್ಲಿನ ಕತ್ತಿ ಕೋಲುಗಳನ್ನು ತೋರಿದರೆ ಸಾಕು ಹಸುಗಳು ಸರಿಯಾಗಿ ವರ್ತಿಸುತ್ತವೆ. ಕಾಗೆ ನಾಯಿ ಕೋತಿಗಳೂ ದಂಡದ ದರ್ಶನಮಾತ್ರದಿಂದ ಹೆದರಿಬಿಡುತ್ತವೆ. ಆದರೆ ಮನುಷ್ಯಪ್ರಾಣಿ ದೇವರ ದಂಡನೆಗೂ

**ದೇಶ ಸೇವೆಯನ್ನು ದೇವರ ಸೇವೆಯೆಂಬ ಭಾವನೆಯಿಂದ ಮಾಡುತ್ತಿರಿ.**

ತಲೆತಗ್ಗಿಸದೆ ಸೆಟೆದು ನಿಂತು ಅನರ್ಥದ ದಾರಿಗೆ ತೆರಳುತ್ತಿದ್ದಾನೆ. ಆದರೆ ಸಜ್ಜನನಾದವನು ಭಗವನ್ನಿಯಾಮಕತ್ವವನ್ನು ಖಡ್ಗದ ಮೂಲಕ ಸರಿಯಾಗಿ ತಿಳಿದು ಸನ್ಮಾರ್ಗದಲ್ಲಿ ವರ್ತಿಸಬೇಕು.

## ಗದಾಧರನಿಂದ ಜ್ಞಾನಪ್ರಾಪ್ತಿ :-

ಬದುಕಿನಲ್ಲಿ ಯಾರನ್ನಾದರೂ ನಂಬಲೇಬೇಕು. ಯಾರನ್ನೂ ಅತಿಯಾಗಿ ನಂಬಬಾರದು ಎಂಬುದು ಎಷ್ಟು ಸತ್ಯವಾದ ಸಂಗತಿಯೋ ಅದಕ್ಕಿಂತ ಸತ್ಯವಾದದ್ದು ಯಾವಗುರುಗಳನ್ನಾದರೂ ಪೂರ್ಣನಂಬಿ ಶರಣಾಗತರಾಗಬೇಕು ಎಂಬುದು. ಯಾರಲ್ಲಿಯೂ ವಿಶ್ವಾಸವಿಡದವಗೆ ಅಧೋಗತಿ. ಒಬ್ಬ ಗುರುವನ್ನು ಪೂರ್ಣ ನಂಬಿದವಗೆ ಊರ್ಧ್ವಗತಿ. ಗುರುವಿನ ಯೋಗ್ಯತೆಯನ್ನು ನಿಶ್ಚಯಿಸಿಕೊಂಡು ಗುರೂಪಸತ್ತಿ ಮಾಡುವ ಯೋಗ್ಯತೆ ನಮಗಿಲ್ಲದಿದ್ದಾಗ; ಯೋಗ್ಯತೆ ನಿಶ್ಚಯವಾದ ಯಾವ ಗುರುಗಳನ್ನು ಹೊಂದಿದರೂ ಅವರು ಸನ್ಮಾರ್ಗ ತೋರುವರು. ಹರಿಸರ್ವೋತ್ತಮತ್ವ ಜ್ಞಾನದಿಂದ ಅಪರೋಕ್ಷಜ್ಞಾನಿಯಾದ ಯಾವ ಗುರುವಿನ ಪಾದ ನಂಬಿದಲ್ಲಿಯೂ ಹರಿಮನೆಗೆ ದಾರಿ ಹಿಡಿದಂತೆಯೇ. ಸಾತ್ವಿಕರಾದ ಇಂತಹ ಕೋಟಿ ಕೋಟಿ ಗುರುಗಳಿಗೆ ಗುರುವಾಗಿ ನಿಂತವ ಗದಾಪಾಣಿಯಾದ ಶ್ರೀಹರಿ.

**"ಬ್ರಹ್ಮಾಂಡಭುವನಾರಂಭ ಮೂಲಸ್ತಂಭೋ ಗದಾಧರಃ"**

ಸಮಗ್ರ ಬ್ರಹ್ಮಾಂಡಕ್ಕೆ ಆಧಾರನಾಗಿ ಜಗತ್ತನ್ನೇ ಜ್ಞಾನದಾನಮಾಡಿ ರಕ್ಷಿಸುವ ಕರುಣಾಳು ಗದಾಧರ.

ಇಷ್ಟೇ ಏಕೆ? ತ್ರೈಲೋಕ್ಯಾಚಾರ್ಯಪಾದರೆನಿಸಿದ ಶ್ರೀಮದಾಚಾರ್ಯರ ಬಳಿ ಪ್ರಾರ್ಥಿಸುವ ತ್ರಿವಿಕ್ರಮ ಪಂಡಿತಾಚಾರ್ಯರೂ ಗದಾಪಾಣಿಯಾದ ವಾಯುದೇವನು ನಮಗೆ ಒಳ್ಳೆಯ ಬುದ್ಧಿಯನ್ನು ಕೊಡಲಿ ಎಂದು ಪ್ರಾರ್ಥಿಸಿದ್ದಾರೆ.

**ಉದ್ಯದ್ವಿದ್ಯುತ್ಪ್ರಚಂಡಾಂ-------------------------।**
**--------ದಾಗ್ರ್ಯಾಂ ಅಯಮಿಹ ಸುಮತಿಂ ವಾಯುದೇವೋ ವಿದಧ್ಯಾತ್**
**ಅಧ್ಯಾತ್ಮಜ್ಞಾನನೇತಾ ಯತಿವರಮಹಿತೋ ಭೂಮಿಭೂಷಾಮಣಿರ್ಮೇ॥**

ಎಂದು ಗದಾಪಾಣಿಯಾದ ಪ್ರಾಣದೇವರು ಗದಾಧಾರಿಯಾದ ಹರಿಯ ತೊಡೆಯನ್ನೇರಿ ಜ್ಞಾನವನ್ನು ಪಡೆಯುತ್ತಿದ್ದಾರೆ; ಜ್ಞಾನವನ್ನು ನೀಡುತ್ತಿದ್ದಾರೆ.

**(ಮುಂದುವರಿಯುವುದು)**

**ಜೀವನದಲ್ಲಿ ಪ್ರತಿಯೊಂದು ವಿಷಯವನ್ನು ಧನಾತ್ಮಕವಾಗಿಯೇ ಚಿಂತಿಸಿರಿ.**

# ಜೀವನಯಜ್ಞ

ಸಂಕಲನ: ಸುನಂದಕೀ

## ಯಜ್ಞಾಂಗ ಸ್ಥೂಲ ಶರೀರ ಚಿಂತನೆ ಯಜ್ಞ

ಪ್ರಚುರತಮೋ ಅಂಶದಿಂದ ತನ್ಮಾತ್ರೆಗಳೂ, ಅವುಗಳಿಂದ ಕ್ರಮವಾಗಿ – 'ಶಬ್ದ' ತನ್ಮಾತ್ರದ್ವಾರಾ ಆಕಾಶವು ಉತ್ಪನ್ನವಾಯಿತು. ಅದಕ್ಕೆ ಅಭಿಮಾನಿದೇವತೆಯಾದ ಗಣಪತಿಯು, ಹಾಗೂ ತದುಭಯ ನಿಯಾಮಕನಾಗಿ ನಾರಾಯಣನು ಪ್ರಾದುರ್ಭವಿಸಿದನು. ಆಕಾಶದಿಂದ 'ಸ್ಪರ್ಶ' ತನ್ಮಾತ್ರದ್ವಾರಾ ವಾಯುತತ್ವವು ಉತ್ಪನ್ನವಾಯಿತು. ತದಭಿಮಾನಿ ಮರೀಚಿ ಎಂಬ ದೇವತೆ ಉತ್ಪನ್ನನಾದನು. ತನ್ನಿಯಾಮಕನಾಗಿ ವಾಸುದೇವನು ಪ್ರಾದುರ್ಭೂತನಾದನು. ವಾಯುವಿನಿಂದ 'ರೂಪ' ತನ್ಮಾತ್ರದ್ವಾರಾ ತೇಜಸ್ಸು, ತದಭಿಮಾನಿ 'ಪಾವಕ' ಎಂಬ ಅಗ್ನಿ ಉತ್ಪನ್ನರಾದರು. ತನ್ನಿಯಾಮಕರಾಗಿ ಸಂಕರ್ಷಣನು ಉದಿಸಿದನು. ತೇಜಸ್ಸಿನಿಂದ 'ರಸ' ತನ್ಮಾತ್ರದ್ವಾರಾ ಜಲತತ್ವವು ಉತ್ಪನ್ನವಾಯಿತು. ತದಭಿಮಾನಿ ವರುಣದೇವರು ಸೃಷ್ಟಿಗೊಂಡನು. ತನ್ನಿಯಾಮಕನಾಗಿ ಪ್ರದ್ಯುಮ್ನ ರೂಪಿ ಭಗವಂತನು ಪ್ರಾದುರ್ಭೂತನಾದನು. ಜಲತತ್ವದಿಂದ 'ಗಂಧ' ತನ್ಮಾತ್ರದ್ವಾರಾ ಪೃಥಿವೀ ತತ್ವವು ಉತ್ಪನ್ನವಾಯಿತು. ಅದಕ್ಕೆ ಅಭಿಮಾನಿ ದೇವತೆ ಧರಾದೇವಿ. ತನ್ನಿಯಾಮಕನು ಅನಿರುದ್ಧ ರೂಪಿ ಭಗವಂತನು.

ಇವುಗಳಿಗೆ ಮೂಲಭೂತವಾದ ಅಹಂಕಾರ ತತ್ವವು ವೈಕಾರಿಕ, ತೈಜಸ, ತಾಮಸ ಎಂಬ ಭೇದದಿಂದ ಮೂರು ರೂಪಗಳಿಂದ ಕರೆಯಲ್ಪಡುತ್ತದೆ. ಅವುಗಳಲ್ಲಿ ಅವ್ಯಕ್ತಾದಿ ತತ್ವಗಳು ನಿತ್ಯವಾದರೂ ಸತ್ವಾದಿಗುಣಗಳಿಂದ ಉಪಚಯವಾಗುತ್ತದೆಂಬ ಅಭಿಪ್ರಾಯದಿಂದ ಅವುಗಳಿಗೆ ಉತ್ಪತ್ತಿ ವ್ಯವಹಾರವು ಇರುವುದು. ಅಲ್ಲಿ ಒಂದು ತಮೋಭಾಗ, ಅದಕ್ಕೆ ನೂರು ಗುಣಗಳಿಂದ ಕಡಿಮೆಯಾದ ರಜೋಭಾಗ, ಅದಕ್ಕೆ ಸಾವಿರಗುಣಗಳಿಂದ ಕಡಿಮೆಯಾದ ಸತ್ವಭಾಗವು ಎಂದು ಈ ಭಾಗತ್ರಯಗಳಿಂದ ಪಂಚಭೂತಗಳು ಉಪಚಿತವಾಗುತ್ತವೆ. ಈ ಪಂಚಭೂತಗಳ ಪ್ರಚುರ ಸತ್ವಾಂಶದಿಂದ ದೇವತೆಗಳ ದೇಹಗಳ ಸೃಷ್ಟಿಯು ನಡೆಯುವುದು. ಪ್ರಚುರ ರಜೋ ಅಂಶಗಳಿಂದ ಮನುಷ್ಯ ದೇಹಗಳ ಸೃಷ್ಟಿಯು ನಡೆಯುವುದು. ಪ್ರಚುರ ತಮೋ ಅಂಶಗಳಿಂದ–ತಮ, ಮೋಹ, ಮಹಾಮೋಹ, ತಾಮಸ, ಅಂಧತಾಮಿಸ್ರ ಎಂಬ ಭೇದದಿಂದ ಪಂಚಪರ್ವಾಖ್ಯ ಅವಿದ್ಯೆಗಳ ಸರ್ಜನದ್ವಾರಾ ದೈತ್ಯ, ರಾಕ್ಷಸ, ಪಿಶಾಚಾದಿ

ಅತಿಥಿ ಸತ್ಕಾರವನ್ನು ತಪ್ಪದೆ ನಡೆಸಿರಿ.

ದೇಹಗಳ ಸೃಷ್ಟಿಯು ಆಗುವುದು.

ಈ ರೀತಿ ಭಗವಂತನು ಮಹದಾದಿ ತತ್ವಗಳನ್ನು ತದಭಿಮಾನಿಗಳಾದ ಬ್ರಹ್ಮಾದಿ ದೇವತೆಗಳನ್ನು, ಅವರ ದೇಹಗಳನ್ನು ಹಾಗೂ ಇತರ ದೇಹಗಳನ್ನು ಸೂಕ್ಷತಮ ರೂಪದಿಂದ ಸೃಷ್ಟಿಸಿ, ಪುನಃ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ರೂಪಗಳಿಂದ ಸೃಷ್ಟಿಸಿ, ಅನಂತರ ತುರೀಯ ನಾಮಕನಾದ ಅನಿರುದ್ಧ ರೂಪದಿಂದ ಸ್ಥೂಲ ರೂಪ ಸೃಷ್ಟಿಯನ್ನು ಮಾಡಿದ ಬಳಿಕ ಸ್ಥೂಲ ಶರೀರಗಳನ್ನು ಹೊಂದಿದ ತತ್ವದೇವತೆಗಳನ್ನು ಹಾಗೂ ಬ್ರಹ್ಮಾಂಡ ನಿರ್ಮಾಣಕ್ಕಾಗಿ ಯೋಜನೆ ಮಾಡಿದನು. ಹಾಗೆಯೇ ತತ್ವಗಳೂ ಯೋಜಿಸಲ್ಪಟ್ಟಿದ್ದರೂ ಆ ತತ್ವಾಭಿಮಾನಿ ದೇವತೆಗಳಿಂದ ಸ್ವತಂತ್ರವಾಗಿ ಬ್ರಹ್ಮಾಂಡವನ್ನು ರಚಿಸಲು ಅಸಾಧ್ಯವಾದ್ದರಿಂದ, ಆ ದೇವತೆಗಳಿಂದ ಪ್ರಾರ್ಥಿತನಾಗಿ, ಪ್ರಸನ್ನನಾದ ವಾಸುದೇವನು ಮಾಯಾದೇವಿಯಲ್ಲಿ ತಾನೇ ಪುರುಷ ರೂಪಕನಾಗಿ ಅವತರಿಸಿ ಮಹದಾದಿ ತತ್ವಗಳಲ್ಲಿಯೂ, ತದಭಿಮಾನಿಗಳಲ್ಲಿಯೂ ಪ್ರವೇಶಿಸಿ, ಆ ತತ್ವೇಶರಿಗೆ ಸೃಷ್ಟಿಸುವ ಶಕ್ತಿಯನ್ನು ಉದ್ಬೋಧಿಸಿ ಅವರಿಂದ ಬ್ರಹ್ಮಾಂಡ ರಚನೆಯನ್ನು ಮಾಡಿಸುವನು. ಅದರೊಳಗೆ ಸರ್ವ ಸತ್ವಸಹಿತರಾದ ದೇವತೆಗಳಿಂದ ಕೂಡಿಕೊಂಡು ಪ್ರವೇಶಿಸಿ ಅಂಡೋದಕದಲ್ಲಿ ಶೇಷಪರ್ಯಂಕದಲ್ಲಿ ಮಲಗಿದವನಾಗಿ ತನ್ನ ಉದರದಿಂದ ಹದಿನಾಲ್ಕು ಲೋಕಗಳನ್ನೊಳಗಗೊಂಡ ಪದ್ಮವನ್ನು ನಿರ್ಮಿಸಿ ಆ ಪದ್ಮದಲ್ಲಿ ಪುನಃ ಚತುರ್ಮುಖ ಬ್ರಹ್ಮದೇವರನ್ನು ಸೃಷ್ಟಿಸಿದನು.

ಅಂತೆಯೇ ಬ್ರಹ್ಮಾಂಡದಲ್ಲಿ ಮೊದಲು ಸೃಷ್ಟರಾದ ತತ್ವದೇವತೆಗಳಿಂದ ಕೂಡಿ ಹದಿನಾಲ್ಕು ಲೋಕಗಳನ್ನು ನಿರ್ಮಿಸಿ ಅಲ್ಲಿ ಇಂದ್ರಾದಿ ನಾಮಗಳಿಂದ ಕರೆಯಲ್ಪಡುವ ದೇಹ-ರೂಪಗಳನ್ನು ರಚಿಸಲು ಅನಿರುದ್ಧ ನಾಮಕರೂಪದಿಂದ -ತೇಜಸ್ಸು, ಜಲ, ಪೃಥಿವೀ ಎಂಬ ಭೂತತ್ರಯಗಳನ್ನೂ ತದಭಿಮಾನಿಗಳಾದ ಶ್ರೀ, ಪ್ರಾಣ, ರುದ್ರರೆಂಬ ಉತ್ತಮದೇವತೆಗಳನ್ನೂ, ಇಂದ್ರಾದಿ ಮಧ್ಯಮ ದೇವತೆಗಳನ್ನು, ಅಗ್ನಿ, ವರುಣ, ಪೃಥಿವ್ಯಾದಿ ಅಧಮದೇವತೆಗಳನ್ನು ಅನುಪ್ರವೇಶಿಸಿ ಒಂದೊಂದನ್ನು 'ತ್ರಿವೃತ್ಕರಣ' ಮಾಡಿದನು. ಹಾಗೆಯೇ ಆ ತತ್ವೇಶರಿಗೆ ಆಯಾಯಾ ರೂಪಗಳನ್ನು ನೀಡಿದನು. ಹೇಗೆಂದರೆ ಮೊದಲಿಗೆ ಅನಿರುದ್ಧರೂಪಿ ಭಗವಂತನು ತೇಜಸ್ಸು, ಜಲ, ಪೃಥಿವೀ ಎಂಬ ಭೂತತ್ರಯವನ್ನು, ತದಭಿಮಾನಿಗಳಾದ ಶ್ರೀ-ಪ್ರಾಣ-ರುದ್ರರನ್ನು ಅನುಪ್ರವೇಶಿಸಿ ಅವರಿಗೆ ಕಾರ್ಯೋನ್ಮುಖತ್ವಾದಿ ಶಕ್ತಿಯನ್ನು ಪ್ರಚೋದಿಸಿ ಕ್ರಮವಾಗಿ ಆ ಭೂತಗಳಿಂದ ಮೂರು ಜಡಾಂಶಗಳನ್ನು ಆ ದೇವತೆಗಳಿಂದ ಮೂರು ಚೇತನಾಂಶಗಳನ್ನು ತೆಗೆದು ಆ ಆರು ಅಂಶಗಳನ್ನು ಮಿಶ್ರಮಾಡಿ ಕ್ರಮವಾಗಿ ತೇಜೋನಾಮಕ,

**ಎಲ್ಲಾ ಭಾಷೆಗಳ ಮಾತೃಭಾಷೆಯಾದ ಸಂಸ್ಕೃತವನ್ನು ಕಲಿಯಿರಿ.**

ಅಪ್ನಾಮಕ ಪೃಥಿವೀನಾಮಕವನ್ನಾಗಿ ಮಾಡಿದನು. ಇವುಗಳಿಗೆ ಇಂದ್ರಾದಿ ನಾಮಗಳನ್ನೂ ಆಯಾಯಾ ಶರೀರ ರೂಪಗಳನ್ನು ಮಾಡಿದನು. ಪುನಃ ಅವುಗಳ ಮಿಶ್ರಣ ಮಾಡಿದನು. ಭೂತತ್ರಯವನ್ನು ಅದರ ಉತ್ತಮಾಭಿಮಾನಿಗಳಾದ ಲಕ್ಷ್ಮ್ಯಾದಿಗಳನ್ನು ಅದರ ಮಧ್ಯಮಾಭಿಮಾನಿಗಳಾದ ಇಂದ್ರಾದಿಗಳನ್ನು ಅನುಪ್ರವೇಶ ಮಾಡಿ ಅವರುಗಳಿಗೆ ಕಾರ್ಯೋನ್ಮುಖವಾಗಲು ಶಕ್ತಿಯನ್ನು ಉದ್ಬೋದಿಸಿ ಹಿಂದಿನಂತೆಯೇ ಚೇತನಾಂಶಗಳನ್ನು, ಜಡಾಂಶಗಳನ್ನು ತೆಗೆದು ಒಂಭತ್ತು ಅಂಶಗಳನ್ನು ಮಿಶ್ರಮಾಡಿ, ಒಂದು ತೇಜಸ್ಸು, ಒಂದು ಜಲ, ಒಂದು ಪೃಥಿವೀ ನಾಮಕಗಳನ್ನಾಗಿ ಮಾಡಿದನು. ಅವುಗಳಿಗೆ ಅಗ್ನಿ, ವರುಣ, ಪೃಥಿವ್ಯಾದಿಗಳ ನಾಮರೂಪಗಳನ್ನು ಇಟ್ಟನು. ಪುನಃ ಅದೇ ಭೂತತ್ರಯವನ್ನು ಉತ್ತಮಾಭಿಮಾನಿಗಳನ್ನು ಮಧ್ಯಮಾಭಿಮಾನಿಗಳನ್ನು ಅಗ್ನ್ಯಾದಿ ಅಧಮಾಭಿಮಾನಿಗಳನ್ನು ಅನುಪ್ರವೇಶಿಸಿ ಕಾರ್ಯೋನ್ಮುಖತ್ವಾದಿ ಶಕ್ತಿಯನ್ನು ಉದ್ಬೋಧಿಸಿ ಚೇತನಾಂಶಗಳನ್ನು , ಜಡಾಂಶಗಳನ್ನು ತೆಗೆದ ಈ ಹನ್ನೆರಡು ಅಂಶಗಳನ್ನು ಮಿಶ್ರಮಾಡಿ, ಹಿಂದಿನಂತೆಯೇ ಒಂದು, ತೇಜ, ಜಲ, ಪೃಥಿವೀ ನಾಮಕವನ್ನಾಗಿ ಮಾಡಿ ಅವುಗಳಿಗೆ ಮನುಷ್ಯಾದಿ ರೂಪನಾಮಗಳನ್ನು ನೀಡಿದನು. ಈ ಮನುಷ್ಯಾದಿರೂಪನಾಮಗಳೂ ಇಂದ್ರಾದಿ ನಾಮರೂಪಗಳಂತೆ ಸಾಕ್ಷಾತ್ತಾಗಿ ಸೃಷ್ಟವಾಗುವುದಿಲ್ಲ. ಆದರೆ ಹೇಗೆಂದರೆ –ಪೃಥಿವಿಯಿಂದ ಔಷಧಿಗಳು, ಔಷಧಿಗಳಿಂದ ಅನ್ನವು ಉತ್ಪನ್ನವಾಗುವುದು. ಆಗ ಭಗವಂತನು ಶರೀರಾದಿ ಸಂಯೋಗಪ್ರದವಾದ ಕರ್ಮವು ಯಾವ ಜೀವನಿಂದ ಆಗಬೇಕೋ ಅಂತಹ ಜೀವನನ್ನು ತೆಗೆದುಕೊಂಡು ಸಂಕರ್ಷಣನು ರೂಪಾಂತರದಿಂದ ಅನ್ನದಲ್ಲಿ ಸೇರುತ್ತಾನೆ. ಕರ್ಮ ಉದ್ಬೋಧನವೆಂದರೆ ಕರ್ಮಸ್ಥಿತನಾದ ಕರ್ಮನಾಮಕ ಹರಿಗೆ –ಜೀವಗೆ ಫಲಕೊಡುವ ಇಚ್ಛೆಯೇ ಎಂಬುದೇ ರಹಸ್ಯ. ಇದೇ ರೀತಿ ಮುಂದೆಯೂ ಅನ್ವಯಿಸಬೇಕು. ಯಾರಿಗೆ ಪುತ್ರಾದಿ ಪ್ರಪಂಚಸಂಬಂಧಪ್ರದವಾದ ಕರ್ಮೋದ್ಬೋಧನೆಯೋ ಅಂತಹ ಪ್ರದ್ಯುಮ್ನಾಧಿಷ್ಠಿತನಾದ ಪಿತೃರೂಪಿ ಪುರುಷನಿಂದ ಆ ಅನ್ನವು ಭೋಜನ ಮಾಡಲ್ಪಡುತ್ತದೆ. ಅನ್ನಸ್ಥನಾದ ಭಗವಾನ್ ಸಂಕರ್ಷಣನೂ ಕೂಡ ಜೀವನನ್ನು ತೆಗೆದುಕೊಂಡು ಅನ್ನದ್ವಾರಾ ಆ ಪುರುಷನನ್ನು ಪ್ರವೇಶಿಸುತ್ತಾನೆ.

★

ರಾಮಾಯಣ–ಮಹಾಭಾರತ–ಭಾಗವತವನ್ನು ಕೇಳುತ್ತಿರಿ, ಓದುತ್ತಿರಿ.

# ಕೇವಲ ಯುಕ್ತಿಗೆ ಶಕ್ತಿ ಇಲ್ಲ

–ಅನಂತಕೃಷ್ಣಾಚಾರ್ಯ,ಉಡುಪಿ

ಆಚಾರ್ಯರು ವಿಷ್ಣುಮಂಗಲ ದೇವಾಲಯದಲ್ಲಿ ತಮ್ಮ ಪ್ರವಚನವನ್ನು ಮುಂದುವರಿಸುತ್ತಾ ಶ್ರೀಮನ್ನಾರಾಯಣನು ಅನಂತಗುಣಪೂರ್ಣನು, ಜಗತ್ತನ್ನು ನಿರ್ಮಿಸಿದವನು ಎಂಬ ವಿಷಯದಲ್ಲಿ ವೇದಗಳೇ ಪರಮಪ್ರಮಾಣ, ಎಂದು ಸಮರ್ಥಿಸಿ ವೇದವನ್ನು ಒಪ್ಪದವನಿಗೆ ವೇದಾನುಸಾರಿಯಾದ ಯುಕ್ತಿಯನ್ನೂ ತೋರಿಸಿದಂತಾಯಿತು. ಆದರೆ ನಾಸ್ತಿಕನೊಬ್ಬ ಕೇವಲ ತನ್ನ ತಲೆಗೆ ತೋಚಿದ ಯುಕ್ತಿಯಿಂದ ದೇವರೇ ಇಲ್ಲವೆಂದೂ ಸಾಧಿಸಬಹುದು. ಅದು ಪ್ರಮಾಣವಾಗಲಾರದು. ಏಕೆಂದರೆ ಕೇವಲ ಯುಕ್ತಿ ಎಂಬುದು ಕಾಮಾಚಾರಿ. ಅದು ಗಂಡನ ಹಿಡಿತವಿಲ್ಲದ ಹೆಣ್ಣಿನಂತೆ ಮನಬಂದಂತೆ ವರ್ತಿಸುತ್ತದೆ. ಕೇವಲ ಯುಕ್ತಿಯಿಂದ ಒಂದು ವಸ್ತುವನ್ನು ಇದೆಯೆಂದೂ ಸಾಧಿಸಬಹುದು. ಇಲ್ಲವೆಂದೂ ಸಾಧಿಸಬಹುದು. ಅದು ಕೇವಲ ಬುದ್ಧಿವಂತಿಕೆಯ ಕಸರತ್ತು. ಆದ್ದರಿಂದ ಬರಿಯ ಯುಕ್ತಿ ಪ್ರಯೋಜನವಿಲ್ಲ. ವೇದಾಗಮ, ಪ್ರತ್ಯಕ್ಷಗಳ ಬೆಂಬಲ ಪಡೆದ ಯುಕ್ತಿ ಮಾತ್ರ ಏನನ್ನಾದರೂ ಸಾಧಿಸುತ್ತದೆ. ಭಗವಂತನ ವಿಷಯದಲ್ಲಿ ಪ್ರತ್ಯಕ್ಷ ಪ್ರಯೋಜನವಿಲ್ಲ. ಏಕೆಂದರೆ ಭಗವಂತನು ಪ್ರತ್ಯಕ್ಷಕ್ಕೆ ಗೋಚರಿಸುವುದೇ ಇಲ್ಲವಷ್ಟೆ. ಆದ್ದರಿಂದ ಯುಕ್ತಿಯು ವೇದಾನುಸಾರಿಯಾಗಿದ್ದರೆ ಮಾತ್ರ ಭಗವಂತನ ವಿಷಯದಲ್ಲಿ ಪ್ರಮಾಣವಾಗುತ್ತದೆ. ವೇದವನ್ನು ಒಪ್ಪದವನಿಗೆ ಭಗವಂತನ ಇರವನ್ನು ಸಮರ್ಥಿಸಲು ಸಾಧ್ಯವೇ ಇಲ್ಲ. ಹೀಗಾಗಿ ಭಗವಂತನ ವಿಷಯದಲ್ಲಿ ವೇದಗಳು ಪರಮಪ್ರಮಾಣವೆಂದು ಒಪ್ಪಲೇ ಬೇಕಾಗುತ್ತದೆ.

## ಪರಿಣಾಮವಾದ ಸರಿಯಲ್ಲ

ಇಲ್ಲಿಯವರೆಗೆ ಅಚೇತನವೇ ಜಗತ್ತಿನ ಸೃಷ್ಟಿಗೆ ಕಾರಣವೆಂಬ ಸಿದ್ಧಾಂತಗಳನ್ನು ವಿಮರ್ಶಿಸಿದಂತಾಯಿತು. ಚೇತನವೇ ಜಗತ್ತಿನ ನಿರ್ಮಾತೃ ಎಂಬ ಸಿದ್ಧಾಂಗತಗಳಲ್ಲಿಯೂ ಅನೇಕ ಗೊಂದಲಗಳಿವೆ. ಕೆಲವು ಪರಮಚೇತನವಾದ ಬ್ರಹ್ಮನೇ ಜಗತ್ತಾಗಿ ಪರಿಣಾಮ ಹೊಂದುತ್ತಾನೆಂದು ಅಭಿಪ್ರಾಯಪಡುತ್ತಾರೆ. ಇದು ತಪ್ಪು. ಬ್ರಹ್ಮಚೇತನ, ಜಗತ್ತು ಜಡ. ಚೇತನವು ಜಡವಾಗುವುದೆಂತು? ಬ್ರಹ್ಮನೇ ಜಗತ್ತಾಗಿ ಪರಿಣಾಮ ಹೊಂದಿದನೆಂದರೆ ಚೇತನವು ಅಚೇತನವಾಯಿತೆಂದು ಹೇಳಿದಂತಾಗಲಿಲ್ಲವೆ? ಜಗತ್ತಿನಲ್ಲಿ ಯಾವುದು ಪರಿಣಾಮ

ಇಂದ್ರಿಯಗಳೆಂಬ ಕುದುರೆಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಪ್ರಯತ್ನಿಸಿ.

ಹೊಂದುತ್ತದೆಯೋ ಅದು ಅಚೇತನ (ಜಡ)ವಾಗಿ ಯಾವುದು ಪರಿಣಾಮ ಹೊಂದುವುದಿಲ್ಲವೋ ಅದು ಚೇತನವಾಗಿ ಕಂಡಿದೆ. ಉದಾಹರಣೆ: ಜಡವಾದ ಹಾಲು, ಜಡವಾದ ಮೊಸರಾಗಿ ಪರಿಣಾಮ ಹೊಂದುವುದು ಕಂಡಿದೆ. ಆದರೆ ಚೇತನವಾದ ಮನುಷ್ಯನೊಬ್ಬ ಜಡವಾದ ಹಾಲು–ಮೊಸರಾಗಿ ಪರಿಣಾಮ ಹೊಂದುವುದು ಕಂಡಿಲ್ಲ. ಮನುಷ್ಯನಿಗೆ ಬಾಲ್ಯ, ಯೌವ್ವನ, ವೃದ್ಧಾಪ್ಯ ಮುಂತಾದ ಪರಿಣಾಮಗಳು ಕಂಡಿವೆಯಲ್ಲವೆ ಎಂದು ಸಂಶಯ ಬರಬಹುದು. ಆದರೆ ಇದು ಕೇವಲ ಜಡವಾದ ದೇಹಕ್ಕಾಗುವ ಪರಿಣಾಮವೇ ಹೊರತು ಒಳಗಿರುವ ಚೇತನನಾದ ಜೀವನಿಗಾಗುವ ಪರಿಣಾಮವಲ್ಲ. ದೇಹದ ಮೇಲಿರುವ ಅಭಿಮಾನದಿಂದಷ್ಟೆ ಜೀವನಿಗೆ ಆ ಅವಸ್ಥೆಗಳ ಅನುಭವವಾಗುತ್ತದೆ.

ಹೀಗೆ ಬ್ರಹ್ಮನೇ ಜಗತ್ತಾಗಿ ಪರಿಣಾಮ ಹೊಂದುತ್ತಾನೆಂಬ ಭಾಸ್ಕರಾಚಾರ್ಯರ ಮತ ಸರಿಯಲ್ಲ.

## ಶಿವನಲ್ಲೂ ದೋಷಗಳು ಕಂಡಿವೆ

ಶೈವ, ಗಾಣಪತ್ಯ ಮುಂತಾದವರು ಶಿವ, ಗಣಪತಿ ಮುಂತಾದವರೇ ಜಗತ್ತಿನ ನಿರ್ಮಾತೃಗಳೆಂದು ಸಮರ್ಥಿಸುತ್ತಾರೆ. ವಿಷ್ಣುವೇ ಜಗನ್ನಿರ್ಮಾತೃ ಎಂಬುದನ್ನು ಅಲ್ಲಗಳೆಯುತ್ತಾರೆ. ತಮ್ಮ ವಾದವನ್ನು ಸಮರ್ಥಿಸಲು ಪಾಶುಪತಾದಿ ಆಗಮಗಳನ್ನು ಪ್ರಮಾಣವಾಗಿ ಸ್ವೀಕರಿಸುತ್ತಾರೆ. ಇದು ಸರಿಯಲ್ಲ. ಪಾಶುಪತಾದಿ ಆಗಮಗಳಿಗಿಂತಲೂ ವೇದವು ಪ್ರಬಲ ಪ್ರಮಾಣ. ಅಂತಹ ವೇದದಲ್ಲಿ **'ಸೋಽರೋದೀದ್ ಯದರೋದೀತ್ ತದ್ ರುದ್ರಸ್ಯ ರುದ್ರತ್ವಂ' 'ಯಂ ಕಾಮಯೇ ತಂ ತಮುಗ್ರಂ ಕೃಣೋಮಿ'**– 'ಅವನು ರೋದಿಸಿದ, ಯಾವ ಕಾರಣದಿಂದ ರೋದಿಸಿದನೋ, ಅದರಿಂದ ರುದ್ರನಿಗೆ ರುದ್ರನೆಂಬ ಹೆಸರು' 'ಯಾರನ್ನು ಬಯಸುತ್ತೇನೋ ಅವನನ್ನು ರುದ್ರನನ್ನಾಗಿ ಮಾಡುತ್ತೇನೆ'–ಎಂದು ರುದ್ರನಿಗೆ ದೋಷಗಳು ಹೇಳಲ್ಪಟ್ಟಿವೆ. ಹೀಗೆ ಪರರ ಹಿಡಿತದಲ್ಲಿರುವ ರುದ್ರನಿಂದ ಜಗತ್ತಿನ ನಿರ್ಮಾಣವಾದರೂ ಹೇಗೆ ಸಾಧ್ಯ? ರುದ್ರನಿಗೆ ಸಾಧ್ಯವಿಲ್ಲವೆಂದ ಬಳಿಕ ಗಣಪತಿ, ಸೂರ್ಯ ಮುಂತಾದವರು ಜಗನ್ನಿರ್ಮಾತೃಗಳೆಂದು ಒಪ್ಪಲು ಸಾಧ್ಯವೇ ಇಲ್ಲ. ಇದು ಶಾಸ್ತ್ರಗಳ ಸರಿಯಾದ ತಿಳುವಳಿಕೆ ಇಲ್ಲದವರ ಅಭಿಪ್ರಾಯ. ಅಥವಾ ವೇದಗಳ ಮೇಲ್ನೋಟದ ಅರ್ಥಕ್ಕೆ ಮರುಳಾದವರ ಅಭಿಪ್ರಾಯವಷ್ಟೆ.

ಮುಂದುವರಿಯುತ್ತದೆ.....

ಸತ್ಯ, ಪ್ರಿಯ ಮತ್ತು ಹಿತ ನುಡಿಗಳು ನಿಮ್ಮ ಜೀವನದಲ್ಲಿ ಹಾಸುಹೊಕ್ಕಾಗಿರಲಿ.

# ಹರಿಕಥಾಮೃತಸಾರ

ವಿದ್ವಾನ್ ಅಪ್ಪಣಾಚಾರ್ಯ, ಕೌತಾಳಂ

## ಗುರುಗಳಕರುಣೆ

ಶ್ರುತಿ–ಸ್ಮೃತಿ–ಪುರಾಣಗಳು ವಾಯುದೇವರು ಭಗವಂತನ ಆಜ್ಞೆಗನುಗುಣವಾಗಿ ಮೋಕ್ಷಪ್ರದಾತರೆಂದು ಸಾರಿಹೇಳುತ್ತವೆ. **"ವಿಷ್ಣುರ್ಹಿ ದಾತಾ ಮೋಕ್ಷಸ್ಯ ವಾಯುಶ್ಚ ತದನುಜ್ಞಯಾ"** ಎಂಬ ಆಚಾರ್ಯರ ವಾಕ್ಯವನ್ನು ಅನುಸರಿಸಿ ಸತ್ತತ್ವಮಾಲಾಕಾರರು ಬ್ರಹ್ಮವಾಯುಪ್ರಕರಣದಲ್ಲಿ **"ಸರ್ವಜ್ಞಾನೋಪದೇಷ್ಟಾಚ ಮೋಕ್ಷದಾತಾಖಿಲಸ್ಯಚ"** ಎಂದು ಹೇಳಿ ಜೀವೋತ್ತಮರಾದ ವಾಯುದೇವರ ಹಿರಿಮೆಯನ್ನು ಸಾರಿಹೇಳಿರುವರು.

ಜಗನ್ನಾಥದಾಸರು ಗ್ರಂಥಾರಂಭದಲ್ಲೇ

**"ಆರುಮೂರೆರಡೊಂದು ಸಾವಿರ–ಮೂರೆರಡು ಶತಶ್ವಾಸಜಪಗಳ**
**ಮೂರುವಿಧ ಜೀವರೊಳಗಬ್ಜಜ ಕಲ್ಪಪರಿಯಂತ।**
**ತಾರಚಿಸಿ ಸಾತ್ತ್ವರಿಗೆ ಸುಖ ಸಂ–ಸಾರಮಿಶ್ರರಿಗಧಮಜನರಿಗ–**
**ಪಾರದುಃಖಗಳೀವ ಗುರುಪವಮಾನ ಸಲಹೆಮ್ಮ॥"**

ಎಂದು ಹೇಳಿ "ಸಾತ್ತ್ವರಿಗೆ ಸುಖ" ಎಂಬ ಶಬ್ದಪ್ರಯೋಗದಿಂದ ವಾಯುದೇವರ ಮೋಕ್ಷಪ್ರದಾತೃತ್ವವನ್ನೇ ಸಮರ್ಥಿಸಿರುವರು. ಗುರುಜಗನ್ನಾಥದಾಸರು ಸಹ ಈ ವಿಷಯವನ್ನೇ ಒತ್ತಿಹೇಳುತ್ತಾ–

**ಹರಿಯೇ ಸರ್ವೋತ್ತುಮ ಹರಿಯೇ ಪರದೈವ**
**ಪರಮಗುರು ಮುಖ್ಯಪ್ರಾಣನು ಕೋಲೇ।**
**ಪರಮಗುರು ಮುಖ್ಯಪ್ರಾಣನ ಪ್ರಸಾದ**
**ಪರನಾದ ಅವನಿಗೆ ಪರಮೋಕ್ಷ ಕೋಲೇ॥**

ಎಂದು ನುಡಿದಿರುವರು.

ಇಂತಹ ವಾಯುದೇವರ ಸಾಕ್ಷಾತ್ ಅವತಾರಿಗಳು ಶ್ರೀಆನಂದತೀರ್ಥಭಗವತ್ಪಾದರು ಇವರು ಸಜ್ಜನರ ಉದ್ಧಾರಕ್ಕಾಗಿ, ಭಗವಂತನಿಗೆ ಸಮ್ಮತವಾದ ಸತ್ಸಿದ್ಧಾಂತಸ್ಥಾಪನೆಗಾಗಿ ರಚಿಸಿದ ಸರ್ವಮೂಲಗ್ರಂಥಗಳು ಸಾಧಕನನ್ನು ಮೋಕ್ಷಕ್ಕೆ ಕೊಂಡೊಯ್ಯುವ ಪುಷ್ಪಕವಿಮಾನಗಳಾಗಿವೆ. ಇಂತಹ ಮೋಕ್ಷಪ್ರದಾತೃಗಳಾದ ಶ್ರೀಮದಾಚಾರ್ಯರ ರೂಪವನ್ನೂ, ಅವರ ಸಮಗ್ರ ಗ್ರಂಥಗಳ ಸಾರವನ್ನೂ, ತಮ್ಮ ದೇಹದ ಅಣುಅಣುವಿನಲ್ಲೂ ತುಂಬಿಕೊಂಡು ಸದಾ ಅದನ್ನು ಅನುಭವಿಸುತ್ತಾ "ಮಧ್ವರಾಯರ ಕರುಣೆಪಡೆಯದವ ಧರೆಯೊಳಗೆ

ನಿಮ್ಮನೇ ನಂಬಿ ಬದುಕುವ ಜನರನ್ನು ರಕ್ಷಿಸಿರಿ.

ಇದ್ದರೇನು ಇಲ್ಲದಿದ್ದರೇನು?" ಎಂದು ಮನತುಂಬಿ ಹೊಗಳಿದ ಪುಣ್ಯಜೀವಿಗಳು ದಾಸವರೇಣ್ಯರು. ಎಲ್ಲಾ ಹರಿದಾಸರು ತಮ್ಮ ಕೃತಿಗಳೆಂಬ ರತ್ನಖಚಿತಸುವರ್ಣಹರಿವಾಣಗಳಲ್ಲಿ ಆಚಾರ್ಯರ ವಾಗಮೃತವನ್ನು ತುಂಬಿಕೊಂಡು ತಾವು ಮನಸಾರೆ ಉಂಡು ಸುಜೀವಿಗಳಿಗೂ ಉಣಬಡಿಸಿರುವರು. ದ್ವೈತಮತ ಸಂಪ್ರದಾಯದಲ್ಲಿ ಸಾಗಿಬಂದ ಶ್ರೀಪದ್ಮನಾಭತೀರ್ಥರೇ ಮೊದಲಾದ ಸಕಲ ವಿಬುಧೋತ್ತಮರ ರಚನೆಗಳೆಲ್ಲವೂ ಪಾತ್ರೆಗಳು. ಅವುಗಳಲ್ಲಿರುವ ತತ್ವಗಳೇ ವಿಧವಿಧ ಪರಮಾನ್ನಗಳು. ಯಾವುಬ್ಬ ಮಹಿತಾತ್ಮರ ವಾಕ್ಯಗಳಲ್ಲೂ ಕಪೋಲಕಲ್ಪನಾ ಚಾತುರ್ಯವಾಗಲಿ, ಹೊಸ ಸಿದ್ಧಾಂತ ಪ್ರತಿಷ್ಠಾಪನಾ ಪ್ರಯತ್ನವಾಗಲಿ ಇಲ್ಲವೇ ಇಲ್ಲ. "ಗುರುಉಚ್ಛಿಷ್ಠ ಭುಂಜಿಸಿ" ಎಂಬ ಮಾತಿಗನುಗುಣವಾಗಿ ಎಲ್ಲಾ ಜ್ಞಾನಿಗಳು ಶ್ರೀಮಧ್ವಾಚಾರ್ಯರು ಹೇಳಿಬಿಟ್ಟ ಪ್ರಮೇಯಗಳನ್ನೇ ತಮ್ಮ ತಮ್ಮ ಜನ್ಮಸಾಫಲ್ಯತೆಗಾಗಿಯೂ, ಪಾಮರ ಜನರ ಉದ್ಧಾರಕ್ಕಾಗಿಯೂ ತಮ್ಮ ಗ್ರಂಥಗಳಲ್ಲಿ ವಿಸ್ತಾರಗೊಳಿಸಿರುವರು. ಈ ಕಾರಣದಿಂದ ಆಚಾರ್ಯರ ಪರಮಾನುಗ್ರಹಕ್ಕೆ ಪಾತ್ರರಾದ ಜ್ಞಾನಿಗಳ ವಾಙ್ಮಯ ಸೇವೆ ಆಚಾರ್ಯರ ವಾಙ್ಮಯದ ಸೇವೆಯೇ ಆಗಿ ಕೈವಲ್ಯಪ್ರದವಾಗಿರುವುವು. ಈ ದಿಸೆಯಲ್ಲಿ ನೋಡಿದಾಗ ಕನ್ನಡ ಭಾಷೆಯಲ್ಲಿ ರಚಿತವಾದ ಹರಿದಾಸರ ಎಲ್ಲಾ ಕೃತಿಗಳು ಆಚಾರ್ಯರ ಸಂಪತ್ತೇ ಆಗಿ ಮೋಕ್ಷಪ್ರದಾಯಕಗಳಾಗಿವೆ.

ಈ ನಿಜಮರ್ಮವನ್ನು ತಿಳಿಸುವುದಕ್ಕಾಗಿಯೇ ಜಗನ್ನಾಥದಾಸರು ತಮ್ಮ ಹರಿಕಥಾಮೃತಸಾರದ ಪ್ರತಿಸಂಧಿಗಳಾದಿಯಲ್ಲಿ **"ಹರಿಕಥಾಮೃತಸಾರಗುರುಗಳ ಕರುಣದಿಂದಾ ಪನಿತುಪೇಳುವೆ ಪರಮಭಗವದ್ಭಕ್ತರಿದನಾದರದಿ ಕೇಳುವುದು"** ಎಂದು ಹೇಳಿರುವರು. ಇಲ್ಲಿ ದಾಸಾರ್ಯರು "ಗುರುಗಳ ಕರುಣದಿಂದ" ಎಂಬ ಎರಡು ಶಬ್ದಗಳನ್ನು ಪ್ರಯೋಗಿಸಿ ಈ ಹರಿಕಥಾಮೃತಸಾರದಲ್ಲಿರುವ ಪ್ರತಿಶಬ್ದವೂ, ಪ್ರತಿವಾಕ್ಯವೂ, ಪ್ರತಿಪದವೂ ಆಚಾರ್ಯರ ಸಿದ್ಧಾಂತವನ್ನೇ ಪ್ರತಿಪಾದಿಸುತ್ತಿರುವವು. ಆಚಾರ್ಯರ ಕರುಣಾಕಟಾಕ್ಷದಿಂದ ಹೊರಹೊಮ್ಮಿದ ಈ ಎಲ್ಲವೂ ಅವರದ್ದೇ ಸಂಪತ್ತು. ಇಲ್ಲಿ ನನ್ನದು ಎಂಬುದು ಏನೂ ಇಲ್ಲ ಎಂದು ಸೂಚಿಸಿರುವರು. ಇಷ್ಟು ಮಾತ್ರವಲ್ಲದೆ "ಆದರದಿ ಕೇಳುವುದು" ಎಂಬ ಪದ ಪ್ರಯೋಗದಿಂದ ಈ ಗ್ರಂಥಗಳಲ್ಲಿ ತೋರುವ ವಿಷಯಗಳು ಯಾವ ಕಾರಣದಿಂದ ಆಚಾರ್ಯರ ಸತ್ಸಿದ್ಧಾಂತ ಪ್ರತಿಪಾದಕಗಳೋ ಅದೇ ಕಾರಣದಿಂದ ಮೋಕ್ಷಪ್ರದವೂ ಆಗಿರುವವು. ಅದರಿಂದಾಗಿ ಇದನ್ನು ಭಕ್ತಿಯಿಂದ ಮಮತೆಯಿಂದ ಕೇಳಿರಿ. ಇದು ಜಗನ್ನಾಥದಾಸನಿಂದ ಕಲ್ಪಿತಗಳಾದವುಗಳೆಂದು ತಿಳಿಯಬೇಡಿರಿ ಎಂದು ಸೂಚಿಸಿರುವರು. **"ಉಣ್ಣುವ ಜನರಿಗೆ ತೃಪ್ತಿಯನ್ನು ಕೊಡುವುದು ಪಾಯಸವಲ್ಲದೆ ಪಾತ್ರೆಯಲ್ಲ"**

ಮುಂದುವರಿಯುತ್ತದೆ.....

ದೀನ–ದುಃಖಿತರಿಗೆ ನಿಮ್ಮಲ್ಲಿರುವುದನ್ನು ಕೊಡಿ.

# ಶ್ರೀವಿಷ್ಣುಪುರಾಣ

–ಸ್ಫೂರ್ತಿ

ಪೃಥುಚಕ್ರವರ್ತಿಗೆ ಅಂತರ್ಧಾನ ಹಾಗೂ ವಾದಿ ಎಂಬ ಇಬ್ಬರು ಮಕ್ಕಳು. ಇವರಲ್ಲಿ ಅಂತರ್ಧಾನನಿಗೆ ಹವಿರ್ಧಾನ ಎಂಬ ಮಗ ಹುಟ್ಟಿದನು. ಹವಿರ್ಧಾನನಿಗೆ ಆರು ಮಕ್ಕಳಾದರು. ಇವರಲ್ಲಿ ಪ್ರಾಚೀನಬರ್ಹಿಯೂ ಒಬ್ಬ. ಎಲ್ಲೆಡೆ ದರ್ಭೆಹಾಸಿ ಯಜ್ಞ–ಯಾಗಾದಿಗಳನ್ನು ನಡೆಸಿದ್ದರಿಂದ ಪ್ರಾಚೀನಬರ್ಹಿ ಎಂಬ ಬಿರುದು. ಈತನು ಬಹಳ ತಪಸ್ಸಿನ ಫಲವಾಗಿ ಹತ್ತು ಮಂದಿ ಪ್ರಚೇತರೆಂಬ ಮಕ್ಕಳನ್ನು ಪಡೆದನು. ಇವರೆಲ್ಲರೂ ಸಮಾನವಾದ ಧರ್ಮಾಚರಣೆಯುಳ್ಳವರು. ತಂದೆಯಾದ ಪ್ರಾಚೀನಬರ್ಹಿಯಿಂದ ಪ್ರಜಾವೃದ್ಧಿಗಾಗಿ ಅಜ್ಞಪ್ತರಾದ ಈ ಹತ್ತು ಮಂದಿ ಪ್ರಜಾವೃದ್ಧಿಯ ಸಾಮರ್ಥ್ಯವನ್ನು ಪಡೆಯಲೋಸುಗ ಸಮುದ್ರದಲ್ಲಿ ಮುಳುಗಿ ಸರ್ವಭೂತಗಳ ಪ್ರಭುವಾದ ಶ್ರೀಮಹಾವಿಷ್ಣುವನ್ನು ಕುರಿತು ಹತ್ತು ಸಾವಿರ ವರ್ಷಗಳ ಕಾಲ ತಪಸ್ಸನ್ನಾಚರಿಸಿದರು. ಭಗವಂತನನ್ನು ಸ್ತೋತ್ರಗಳಿಂದ ಸ್ತುತಿಸಿದರು. ಹೀಗೆ ಪ್ರಚೇತಸರಿಂದ ಸ್ತುತಿಸಲ್ಪಟ್ಟ ಭಗವಂತನು ಪ್ರಸನ್ನನಾಗಿ ಸಮುದ್ರದ ಜಲದಲ್ಲಿಯೆ ಗರುಡಾರೂಢನಾಗಿ ಪ್ರಕಟನಾದನು. ತನ್ನನ್ನು ಕಂಡ ಕೂಡಲೆ ಭಕ್ತಿಭಾವದಿಂದ ಬಾಗಿದ ಪ್ರಚೇತಸರಿಗೆ ಇಷ್ಟವಾದ ವರವನ್ನು ಬೇಡುವಂತೆ ಭಗವಂತನು ಆದೇಶಿಸಿದನು. ಪ್ರಚೇತಸರು ತಂದೆಯ ಆಜ್ಞೆಯಂತೆ ಪ್ರಜಾವೃದ್ಧಿಯ ಸಾಮರ್ಥ್ಯವನ್ನು ಭಗವಂತನಿಂದ ಕೇಳಿ ಪಡೆದರು. ಭಗವಂತನು ಮರೆಯಾಗಲು ನೀರಿನಿಂದ ಹೊರಬಂದರು.

ಪ್ರಚೇತಸರು ನೀರಿನಲ್ಲಿ ಮುಳುಗಿ ತಪಸ್ಸನ್ನಾಚರಿಸುತ್ತಿರುವಾಗ ಇತ್ತ ಭೂಮಿಯು ಕೃಷಿ ಮುಂತಾದುವುಗಳ ಮೂಲಕ ರಕ್ಷಿಸುವವರಿಲ್ಲದೆ ಮರಗಳಿಂದ ತುಂಬಿ ಹೋಯಿತು. ಎಲ್ಲ ಕಡೆಯೂ ಮರಗಳೇ ಬೆಳೆದು ಪ್ರಜೆಗಳಿಗೆ ಬದುಕುವುದೇ ಕಷ್ಟವಾಯಿತು. ಇದರಿಂದ ಪ್ರಜಾಕ್ಷಯವೂ ಉಂಟಾಯಿತು. ಅಳಿದುಳಿದವರಿಗೂ ಅತ್ತಿತ್ತ ಓಡಾಡುವುದೂ ಅಸಾಧ್ಯವಾಯಿತು. ಹತ್ತು ಸಾವಿರ ವರ್ಷಗಳ ಕಾಲ ಆಕಾಶದಲ್ಲಿ ಗಗನಚುಂಬಿ ಮರಗಳಿಂದ ವ್ಯಾಪಿಸಲ್ಪಟ್ಟು ಗಾಳಿಯೂ ಬೀಸುವುದೇ ನಿಂತು ಹೋಯಿತು. ನೀರಿನಿಂದ ಹೊರಬಂದ ಪ್ರಚೇತಸರು ಇದನ್ನು ಕಂಡು ಕ್ರೋಧಗೊಂಡರು. ಅವರ ಕೋಪದ ಫಲವಾಗಿ ಮುಖದಿಂದ ವಾಯು ಹಾಗೂ ಅಗ್ನಿಯು ಹೊರಹೊಮ್ಮಿತು. ಗಗನಚುಂಬಿ ಮರಗಳೆಲ್ಲ ಸುಟ್ಟು

**ಗಳಿಸಿದ ಹಣವನ್ನು ಕೇವಲ ವಿಲಾಸ ಜೀವನಕ್ಕಾಗಿಯೇ ಪೋಲು ಮಾಡದಿರಿ,**

ಕರಕಲಾಗತೊಡಗಿದವು. ಹೀಗೆ ಮರಗಳೆಲ್ಲ ಸುಟ್ಟು ಭಸ್ಮವಾಗುತ್ತಾ ಕಡೆಗೆ ಸ್ವಲ್ಪ ಮಾತ್ರ ಉಳಿದಿರಲು ಔಷಧಿಗಳ ರಾಜ ಚಂದ್ರನು ಬಂದು ಪ್ರಚೇತಸರನ್ನು ಸಮಾಧಾನಪಡಿಸಿದನು. 'ಎಲೈ ರಾಜರೆ, ಕೋಪವನ್ನು ತ್ಯಜಿಸಿರಿ. ನನ್ನ ಮಾತನ್ನು ಕೇಳಿರಿ. ನಿಮಗೂ ಈ ಮರಗಳೊಡನೆ ಸಂಧಾನವನ್ನು ಮಾಡಿಸುತ್ತೇನೆ. ಮಾರಿಷಾ ಎಂಬ ಹೆಸರುಳ್ಳ ಅತ್ಯಂತ ಸುಂದರಿಯಾದ ಈ ವೃಕ್ಷಗಳ ಕನ್ಯೆಯ ಭವಿಷ್ಯವನ್ನು ಬಲ್ಲವನಾಗಿ ನಾನು ಹಿಂದೆಯೆ ನನ್ನ ಕಿರಣಗಳಿಂದ ಬೆಳೆಸಿದ್ದೇನೆ. ಇವಳನ್ನು ನಿಮ್ಮ ಧರ್ಮಪತ್ನಿಯಾಗಿ ಸ್ವೀಕರಿಸಿರಿ. ಖಂಡಿತವಾಗಿಯೂ ಇವಳು ನಿಮ್ಮ ವಂಶವನ್ನು ಬೆಳೆಸುತ್ತಾಳೆ. ನನ್ನ ಅರ್ಧ ತೇಜಸ್ಸಿನಿಂದ ಹಾಗೂ ನಿಮ್ಮ ಅರ್ಧತೇಜಸ್ಸಿನಿಂದ ಇವಳಲ್ಲಿ ದಕ್ಷ ಎಂಬ ಪ್ರಜಾಪತಿಯು ಹುಟ್ಟಿ ಬರುತ್ತಾನೆ. ಅವನು ಅಗ್ನಿ ಸಮರಾದ ಮತ್ತಷ್ಟು ಪ್ರಜೆಗಳನ್ನು ಬೆಳೆಸುತ್ತಾನೆ.

## ಕಂಡು ಮುನಿಯ ಕಥೆ

ಈ ಮಾರಿಷೆಯ ಹುಟ್ಟಿನ ಕಥೆ ವಿಚಿತ್ರವಾದುದು. ಹಿಂದೆ ಕಂಡು ಎಂಬ ವೇದವಿದನಾದ ಮುನಿಯು ಗೋಮತಿ ನದಿ ತೀರದಲ್ಲಿ ಶ್ರೇಷ್ಠವಾದ ತಪಸ್ಸಿನಲ್ಲಿ ನಿರತನಾಗಿದ್ದನು. ಅವನ ತಪಸ್ಸನ್ನು ಕೆಡಿಸುವ ಉದ್ದೇಶದಿಂದ ದೇವೇಂದ್ರನು ಪ್ರಮ್ಲೋಚೆ ಎಂಬ ಶ್ರೇಷ್ಠ ಅಪ್ಸರಾ ಸ್ತ್ರೀಯಳನ್ನು ಅವನ ಬಳಿಗೆ ಕಳುಹಿಸಿದನು. ಅವಳ ಹಾವಭಾವಕ್ಕೆ ಮರುಳಾದ ಮುನಿಯು ಅವಳೊಡನೆ ನೂರು ವರ್ಷಗಳಿಗಿಂತಲೂ ಹೆಚ್ಚು ಕಾಲ ಮಂದರಪರ್ವತದ ತಪ್ಪಲಲ್ಲಿ ವಿಷಯಾಸಕ್ತನಾಗಿ ಕಳೆದನು. ಬಳಿಕ ಅವಳು, 'ಪೂಜ್ಯರೆ, ನಾನು ಸ್ವರ್ಗಕ್ಕೆ ಮತ್ತೆ ಹೋಗಲು ಇಚ್ಛಿಸುತ್ತೇನೆ. ಅಪ್ಪಣೆಯನ್ನು ಕೊಡಿ' ಎನ್ನಲು 'ಕೆಲವು ದಿನಗಳ ಕಾಲ ನನ್ನೊಡನೆ ಇರು. ಮತ್ತೆ ಹೋಗುವಿಯಂತೆ' ಎಂದು ತಡೆದನು. ಮತ್ತೆ ನೂರು ವರ್ಷ ಕಳೆಯಿತು. ಮತ್ತೆ ಪ್ರಮ್ಲೋಚೆ ಸ್ವರ್ಗಕ್ಕೆ ಹೋಗಲು ಅನುಮತಿಯನ್ನು ಕೇಳಿದಾಗ ಹಿಂದಿನಂತೆಯೆ ಮುನಿಯು ತಡೆದನು. ಆಕೆ ಮತ್ತೆ ನೂರಕ್ಕಿಂತಲೂ ಹೆಚ್ಚು ವರ್ಷಗಳ ಕಾಲ ಮುನಿಯೊಂದಿಗೆ ರಮಿಸಿದಳು. ಬಳಿಕ ಆಕೆ ಸ್ವರ್ಗಕ್ಕೆ ಹೋಗಲು ಅಣಿಯಾಗಲು ಋಷಿಯು ಮತ್ತೆ ತಡೆದನು. ಹೀಗೆ ಹಲವು ವರ್ಷಗಳು ಕಳೆದು ಹೋದವು. ಆ ಮುನಿಗೆ ಆ ಸುಂದರಿಯೊಡನೆ ರಮಿಸುತ್ತ ಪ್ರತಿದಿನವೂ ಹೊಸಹೊಸತಾಗಿ ಕಂಡು ದಿನಗಳು ಉರುಳಿದ್ದೇ ತಿಳಿಯಲಿಲ್ಲ. ಆಕೆಯಾದರೋ ಋಷಿಯ ಶಾಪದ ಭಯದಿಂದ, ದಾಕ್ಷಿಣ್ಯದಿಂದಲೂ ಅವನೊಡನೆ ದಿನಗಳನ್ನು ಕಳೆದಳು.

ಮುಂದುವರಿಯುತ್ತದೆ.....

**ಬಂದ ಹಣದಲ್ಲಿ ಸ್ವಲ್ಪ ಭಾಗವನ್ನು ಧಾರ್ಮಿಕ ಕಾರ್ಯಕ್ಕಾಗಿ, ಬಡಬಗ್ಗರಿಗಾಗಿ ವಿನಿಯೋಗಿಸಿ.**

ಪುರಾಣಸಂದೇಶ

# ಮಾರ್ಕಂಡೇಯಪುರಾಣ

ವಿ॥ ಅಡ್ವೇ ಲಕ್ಷ್ಮೀಶಾಚಾರ್ಯ

ಅದೊಂದು ಮಧ್ಯಾಹ್ನ ಮನದಲ್ಲಿ ಭಗವಂತನನ್ನು ಹೊತ್ತ ಮಹಾಮುನಿ ಮಾರ್ಕಂಡೇಯರು ಕೂತಿದ್ದಾರೆ. ವ್ಯಾಸರ ಶಿಷ್ಯರಾದ ಮಹಾತೇಜಸ್ವಿಗಳೂ ಆದ ಜೈಮಿನಿಗಳು ಬಂದು ಪಾದಕೆರಗಿ ಭಿನ್ನವಿಸಿದರು.

**ತದಿದಂ ಭಾರತಾಖ್ಯಾನಂ ಬಹ್ವರ್ಥಂ ಶ್ರುತಿ ವಿಸ್ತರಂ।**
**ತತ್ತ್ವತೋ ಜ್ಞಾತುಕಾಮೋಭಗವಾನ್ ತ್ವಾಮುಪಸ್ಥಿತಃ॥**

ಜೈಮಿನಿ: ಭಗವಾನ್। ಸೆಟೆದು ನಿಂತು ಕುತರ್ಕಗಳೆಂಬ ಹೆಮ್ಮರಗಳನ್ನು ನೆಲಕ್ಕೊರಗಿಸುತ್ತಾ ಹರಿವ, ವ್ಯಾಸ ವಾಕ್ಯಗಳೇ ಪ್ರವಾಹದೋಪಾದಿಯಲ್ಲಿರುವ, ವೇದಾಚಲದಿಂದ ಧುಮ್ಮಿಕ್ಕುವ, ಮನಸ್ಸಿಗಂಟೆದ ಸಂಶಯ-ವಿಪರೀತ ಜ್ಞಾನವೇ ಮೊದಲಾದ ರಜಸ್ಸುಗಳನ್ನು ಕೊಚ್ಚಿ ಶುಭ್ರವಾಗಿಸುವ, ಮಧುರ ಶಬ್ದಗಳೆಂಬ ಹಂಸಗಳು ವಿಹರಿಸುವ, ಮಹಾ ಅಖ್ಯಾನಗಳೆಂಬ ಪದ್ಮದಿಂದ ಶೋಭಿಸುವ, ಉತ್ತಮ ಕಥೆಗಳಿಂದ ಹರವಿ ಹರಿಯುವ, ಕಾರ್ಷ್ಣವೇದವೆಂದೇ ಪ್ರಸಿದ್ಧವಾದ ಗಂಭೀರವಾದ, ಗಹನವೂ ಆದ ಮಹಾಭಾರತ ಅದೊಂದು ಮಹಾನದಿ. ಅಂತಹ ಮಹಾಭಾರತದಲ್ಲಿ ಬಂದ ಕೆಲವು ವಿಷಯಗಳ ಬಗ್ಗೆ ಮತ್ತೆ ವಿಶೇಷವಾಗಿ ತಿಳಿದುಕೊಳ್ಳುವುದಕ್ಕೆ ಇಚ್ಛೆಯುಳ್ಳವನಾಗಿ ನಿಮ್ಮಲ್ಲಿ ಬಂದೆದ್ದೇನೆ. ಅವಧರಿಸಬೇಕು.

1. ಸಜ್ಜನರ ಹುಟ್ಟಡಗಿಸುವದರಿಂದಲೇ ಜನಾರ್ದನನೆಂದೆನಿಸುವ ಭಗವಂತ ತ್ರಿಗುಣಾತೀತನಾದವ ತಾನು ಹುಟ್ಟಿಬರುವುದೇಕೆ.
2. ದ್ರೌಪದಿ ಪಂಚವಲ್ಲಭೆ ಯಾಕಾದಳು? ಇದರ ಗುಟ್ಟೇನು?
3. ಬ್ರಹ್ಮಹತ್ಯೆ ಎಂಬ ರೋಗಕ್ಕೆ ಬಲರಾಮ ಔಷಧವನ್ನಾಗಿ ತೀರ್ಥಯಾತ್ರೆಯನ್ನು ಕೈಗೊಂಡ ಕಾರಣವೇನು? ಬ್ರಹ್ಮಹತ್ಯೆ ಪಾಪ ಯಾಕೆ ಬಂತು?
4. ಲೋಕನಾಯಕರಾದ ಪಾಂಡವರಂತಹ ತಂದೆಯಂದಿರನ್ನು ಪಡೆದ ದ್ರೌಪದಿಯ ಮಕ್ಕಳು ಅಕಾಲದಲ್ಲಿ ಅವಿವಾಹಿತರಾಗಿ ಸಾಯುವುದಕ್ಕೆ ಕಾರಣವೇನು? ಈ ಬಗ್ಗೆ ಎದ್ದಿರುವ ನನ್ನ ಸಂಶಯವನ್ನು ಪರಿಹರಿಸಬೇಕೆಂದು ನನ್ನ ಪ್ರಾರ್ಥನೆ.

ಹೀಗೆಂದು ಜೈಮಿನಿ ಕೇಳಿದಾಗ ಮಾರ್ಕಂಡೇಯರು ಈ ರೀತಿ ಸಮಾಧಾನ ಹೇಳಿದರು.
ಮಾರ್ಕಂಡೇಯ: ಈಗ ಸಂಧ್ಯಾವಂದನೆಗೆ ಹೊತ್ತಾಗುತ್ತಿದೆ. ವಿಸ್ತಾರವಾಗಿ ಹೇಳುವುದಕ್ಕೆ ಸಮಯಾವಕಾಶವಿಲ್ಲ. ನಿನ್ನ ಸಂಶಯಕ್ಕೆ ವಿಂಧ್ಯೆಯ ಕಂದರದಲ್ಲಿರುವ ದ್ರೋಣನೆಂಬ

**ಹೆಂಡತಿ ಮಕ್ಕಳಿಗೆ ಹಿತೋಪದೇಶವನ್ನು ಮಾಡುತ್ತಾ ಕುಟುಂಬವನ್ನು ಸಾಗಿಸುತ್ತಿರಿ.**

ಋಷಿಗೆ ತಾರ್ಕ್ಷಿಯಲ್ಲಿ ಹುಟ್ಟಿರುವ ಪಿಂಗಾಕ್ಷ, ವಿಭೋಧ, ಸುಪುತ್ರ, ಸುಮುಖ, ಎಂಬ ಹೆಸರುಳ್ಳ ಗೃಧ್ರಪಕ್ಷಿಗಳು ಉತ್ತರಿಸುವವು. ಅವರನ್ನು ಕೇಳು ಎಂದರು.

ಜೈಮಿನಿ: ಇದು ವಿಸ್ಮಯ! ಪಕ್ಷಿಗಳು ಮನುಜರಂತೆ ಮಾತಾಡುವುದು. ಇದರ ಹಿನ್ನಲೆಯನ್ನು ಅರುಹಬೇಕು.

**ಅಪ್ಸರೆ ಪಕ್ಷಿಯಾದಳು**

ಸ್ವರ್ಗದಲ್ಲಿ ಒಮ್ಮೆ ರಂಭಾದಿ ಅಪ್ಸರೆಯರ ಮೇಳದೊಂದಿಗೆ ದೇವೇಂದ್ರ ವಿನೋದಿಸುವ ಸಂದರ್ಭದಲ್ಲಿ ಅಲ್ಲಿಗೆ ನಾರದರ ಆಗಮನವಾಯಿತು. ಸರ್ವಸಂಗಪರಿತ್ಯಾಗಿಗಳಾದ ನಾರದರ ಮನೋಲ್ಲಾಸಕ್ಕೆ ರಂಭಾದಿಗಳ ನರ್ತನ ಪ್ರದರ್ಶನವಾಗಲಿ ಎಂದು ಇಂದ್ರ ಆಜ್ಞಾಪಿಸಿದ. ಆಗ ನಾರದರೆಂದರು. ನೃತ್ಯಕ್ಕೆ ಕಳೆ ಬರುವುದು ನರ್ತಕಿಯ ರೂಪ, ಶರೀರ ವಿನ್ಯಾಸಗಳಿಂದ. ಇವರಲ್ಲಿ ಯಾರು ಅತ್ಯಂತ ರೂಪಸಿಯೋ ಅವಳು ನರ್ತಿಸಲಿ ಎಂದರು. ಆಗ ಈ ಅಪ್ಸರೆಯೊರಳಗೆ ಸ್ಪರ್ಧೆಯುಂಟಾಯಿತು. ನಾನು ಚಲುವೆ ನಾನು ಚೆಲುವೆ ನೀನಲ್ಲ ಹೀಗೆ ಪರಸ್ಪರ ಘರ್ಷಣೆಯಾದಾಗ, ತೀರ್ಮಾನ ಮಾಡುವುದಕ್ಕೆ ಅಸಾಧ್ಯವಾದಾಗ ನಾರದರು ಪರಿಹಾರ ಸೂಚಿಸಿದರು. ಹಿಮವತ್ ಪರ್ವತದ ತಪ್ಪಲಿನಲ್ಲಿ ದೂರ್ವಾಸರು ತಪಸ್ಸನ್ನಾಚರಿಸುತ್ತಿದ್ದಾರೆ. ಯಾರು ಅವರ ತಪೋಭಂಗವನ್ನು ಮಾಡಿ ಅನುರಾಗವನ್ನುಂಟುಮಾಡುವಳೋ ಅವಳೇ ವಿಶ್ವ ಸುಂದರಿ ಎಂದ ನಾರದರ ಈ ಮಾತು ಕೇಳಿ ತಾನು ತಾನೆಂದು ಜಗಳ ಕಾಯುತಿದ್ದ ಅಪ್ಸರೆಯರು ದೂರ್ವಾಸರ ಹೆಸರು ಕೇಳಿದ ತಕ್ಷಣ ತಣ್ಣಗಾದರು. ನಾನು ನಾನು ಎನ್ನುತಿದ್ದವರು ನೀನೆ ನೀನೇ ಚೆಲುವೆ ಎಂದಾರಂಭಿಸಿ, ಈ ಕಾರ್ಯದಲ್ಲಿ ಹಿಮ್ಮೆಟ್ಟಿದಾಗ "ವಪು" ಎಂಬ ಅಪ್ಸರೆ ತನ್ನ ರೂಪದ ಮೇಲಿನ ಅತಿ ಅಭಿಮಾನದಿಂದ ತಾನು ಈ ಕೆಲಸ ಸಾಧಿಸುವೆ. ತನ್ನ ರೂಪ ತಪೋನಿರತ ದೂರ್ವಾಸರನ್ನು ಕಲಡಿಸುವಂತದು ಎಂದು ಈ ಹರಸಾಹಸಕ್ಕೆ ಮುಂದಾದಳು. ತನ್ನ ಲಾಸ್ಯದಿಂದ ದೂರ್ವಾಸರನ್ನು ಮೊಹಿಸುವೆನೆಂಬ ಅಹಂಕಾರದಿಂದ ದೂರ್ವಾಸರ ತಪೋಭೂಮಿಗೆ ಬಂದಳು. ತನ್ನ ಗೀತ, ನರ್ತನಾದಿಗಳಿಂದ ಅವರ ತಪಸ್ಸಿಗೆ ವಿಘ್ನವನ್ನುಂಟು ಮಾಡಿದಳು. ಆದರೆ ಅವಳ ಆಸೆ ಈಡೇರಲಿಲ್ಲ. ದೂರ್ವಾಸರು ಕನಲಿ ಶಾಪಕೊಟ್ಟರು. ರೂಪ ಮದದಿಂದ ನನ್ನ ತಪಸ್ಸಿಗೆ ವಿಘ್ನವನ್ನು ಮಾಡಿದ ನೀನು ಹದ್ದಿನ ರೂಪವನ್ನು ಪಡೆ. ಹದಿನಾರು ವರ್ಷ ಆ ಜನ್ಮವನ್ನು ಪಡೆದು ಮಕ್ಕಳ ಲಾಲನೆಯನ್ನು ಮಾಡುವ ಭಾಗ್ಯವನ್ನು ಕಳೆದುಕೊಂಡು ಅಕಾಲದಲ್ಲಿ ಮರಣವಾಗಲಿ ಎಂದು ಶಪಿಸಿ, ದೂರ್ವಾಸರು ಆ ತಾಣದಿಂದ ನಡೆದರು. ವಿಶ್ವ ಸುಂದರಿ ಆಗಬೇಕೆಂದು ಕನಸ ಹೊತ್ತ ವಪು ದೂರ್ವಾಸರಿಂದ ಶಪ್ತಳಾಗಿ ಗೃಧ್ರ ಪಕ್ಷಿಯಾದಳು.

**(ಮುಂದುವರಿಯುವುದು)**

**ಭಾರತೀಯ ಸಂಸ್ಕೃತಿ-ವಿದ್ಯೆಗಳನ್ನು ಕಲಿಯಲು ತೊಡಗಿರಿ.**

ಮುಖಪುಟಲೇಖನ

# ನವನೀತಚೋರ

-ಬೊಮ್ಮರಬೆಟ್ಟು ಶ್ರೀನಿವಾಸ ಭಟ್ಟ

ವ್ಯಾಸರಾಜರು "ಚೋರತ್ವವನು ಮಾಡಿದ ಪಾಪಗಳೆಗೆಲ್ಲಾ ಹೇ ನವನೀತಚೋರ ಎಂದರೆ ಸಾಲದೇ" ಎಂಬುದಾಗಿ ಉಗಾಭೋಗವನ್ನು ರಚಿಸಿದ್ದಾರೆ. ಇಲ್ಲಿ ಚೋರತ್ವ ಎಂಬ ಪದಕ್ಕೆ ಎಲ್ಲಾ ರೀತಿಯ ಪಾಪಗಳು ಎಂದು ಅರ್ಥ. ನಾವು ಯಾವುದೇ ಪಾಪವನ್ನು ಮಾಡಿದರೂ ಕೂಡ ನವನೀತ ಚೋರ ಎಂದು ಕೃಷ್ಣನನ್ನು ನೆನೆದರೆ ಆ ಪಾಪಗಳೆಲ್ಲಾ ನಾಶವಾಗುವುವು ಎಂದಿದ್ದಾರೆ. ನವನೀತ ಎಂದರೆ ಹೊಸತಾಗಿ ಸಂಪಾದಿಸಲ್ಪಟ್ಟದ್ದು ಎಂದರ್ಥ. ನಾವು ಹೊಸದಾಗಿ ಸಂಪಾದಿಸುವುದು ಯಾವುದು? ಪಾಪವನ್ನು ಮಾತ್ರ. ಆ ಪಾಪವನ್ನು ಕದಿಯುವವ ಎಂದು ಅರ್ಥ. ಪಾಪವನ್ನು ಕಳೆಯುವವನು ಎಂದು ದೇವರನ್ನು ಸ್ತುತಿಸಿದರೆ ಪಾಪವನ್ನೆಲ್ಲಾ ನಾಶಮಾಡುತ್ತಾನೆ.

**ನಾರಾಯಣೋ ನಾಮ ನರೋ ನರಾಣಾಂ ಪ್ರಸಿದ್ಧಚೋರಃ ಕಥಿತಃ ಪೃಥಿವ್ಯಾಮ್।**
**ಅನೇಕ ಜನ್ಮಾರ್ಜಿತಪಾಪಸಂಚಯಂ ಹರತ್ಯಶೇಷಂ ಸ್ಮೃತಮಾತ್ರ ಏವ॥**

ನಾರಾಯಣನೆಂಬ ಕಳ್ಳನಿದ್ದಾನೆ, ಅವನನ್ನು ನೆನೆದರಷ್ಟೇ ಸಾಕು ಅನೇಕ ಜನ್ಮಗಳಲ್ಲಿ ಮಾಡಿದ ಪಾಪಗಳನ್ನು ಎಳ್ಳಷ್ಟು ಬಿಡದೆ ಕದಿಯುತ್ತಾನೆ ಎಂದು ಶ್ರೀಮನ್‌ಮಧ್ವಾಚಾರ್ಯರು ಶ್ರೀಕೃಷ್ಣಾಮೃತಮಹಾರ್ಣವದಲ್ಲಿ ಹೇಳಿದ ವ್ಯಾಸವಾಕ್ಯವನ್ನೇ ವ್ಯಾಸರಾಜರು ದಾಸವಾಣಿಯ ಮೂಲಕ ತಿಳಿಸಿದ್ದಾರೆ. ಕೃಷ್ಣಾವತಾರದಲ್ಲಿ ದೇವರು ಬೆಣ್ಣೆಯನ್ನು ಕದಿಯುತ್ತಿದ್ದರು. ಆದ್ದರಿಂದ ಅವನಿಗೆ ನವನೀತಚೋರ ಎಂದು ಹೆಸರು ಬಂದಿದೆ. ಕೃಷ್ಣ ಬೆಣ್ಣೆಯನ್ನು ಯಾಕೆಕದ್ದ? ಬೆಣ್ಣೆಯ ಅಭಿಮಾನಿದೇವತೆ ವಾಯುದೇವರು. ಹನುಮನೆಲ್ಲೋ ನಾನೂ ಅಲ್ಲೇ. ಎಂಬುದನ್ನು ತಿಳಿಸಲು ಶ್ರೀಕೃಷ್ಣ ಸದಾ ಬೆಣ್ಣೆಯನ್ನು ಕದಿಯುತ್ತಿದ್ದ. ನಾವು ಕೂಡ ವಾಯುದೇವರ ಅವತಾರವಾದ ಶ್ರೀಮಧ್ವಾಚಾರ್ಯರ ಶಾಸ್ತ್ರದ ಪ್ರಕಾರ ಹರಿಯು ಸರ್ವೋತ್ತಮನೆಂದು ತಿಳಿದು ಅವನನ್ನು ಭಜಿಸಿದರೆ ಭಗವಂತ ನಮ್ಮ ಬಳಿಗೂ ಒಲಿದು ಬರುತ್ತಾನೆ.

**ಸರ್ವೋಪನಿಷದೋ ಗಾವಃ ದೋಗ್ಧಾ ಗೋಪಾಲನಂದನಃ।**
**ಪಾರ್ಥೋ ವತ್ಸಃ ಸುಧೀಃ ಭೋಕ್ತಾ ದುಗ್ಧಂ ಗೀತಾಮೃತಂ ಮಹತ್॥**

ಎಂಬಂತೆ ಕೃಷ್ಣನೆಂಬ ಗೋವಳನು ಕರೆದ ಎಲ್ಲ ಉಪನಿಷತ್ತಗಳೆಂಬ ಆಕಳ ಹಾಲು ಗೀತೆ. ಆಕಳು ಹಾಲು ಕೊಡಬೇಕಾದರೆ ಮೊದಲು ಕರುವು ಹಾಲನ್ನು ಕುಡಿಯಬೇಕು. ಆಕರುವೇ ಅರ್ಜುನ. ಕರುಕುಡಿದ ನಂತರ ಉಳಿದ ಹಾಲನ್ನು ಭೋಗಿಸುವವರು ಒಳ್ಳೆಯ

ಹಸಿದವರಿಗೆ ಅನ್ನವನ್ನು ನೀಡಿ.

ಹೃದಯವಂತರು. ಆ ಗೀತೆ ಎಂಬ ಹಾಲನ್ನು ಜ್ಞಾನವೆಂಬ ಅಗ್ನಿಯಿಂದ ಬಿಸಿಮಾಡಬೇಕು. ಅಂದರೆ ಶಾಸ್ತ್ರಪ್ರತಿಪಾದ್ಯವಾದ ವಿಷಯಗಳ ಜ್ಞಾನವನ್ನು ಪಡೆಯಬೇಕು. ಕಾಯಿಸಿದ ಹಾಲಿಗೆ ಹೆಪ್ಪನ್ನು ಹಾಕಬೇಕಾದರೆ ಹಾಲು ಸ್ವಲ್ಪ ತಣ್ಣಗಾಗಬೇಕು. ಅಂದರೆ ಆ ಜ್ಞಾನಕ್ಕೆ ಗೋಚರವಾದ ಭಗವಂತನ ಗುಣಗಳ ಮನನೆ ಮಾಡಬೇಕು. ನಂತರ ಅದಕ್ಕೆ ವೈರಾಗ್ಯವೆಂಬ ಹೆಪ್ಪನ್ನು ಹಾಕಬೇಕು. ಆಗ ಮೊಸರಾಗುತ್ತದೆ. ಮೊಸರನ್ನು ಕಡೆದಾಗ ಬೆಣ್ಣೆ ಬರುತ್ತದೆ. ಭಗವಂತನ ಜ್ಞಾನ ಮತ್ತು ವಿಷಯ ಪದಾರ್ಥಗಳ ವೈರಾಗ್ಯದಿಂದಾಗಿ ಭಗವಂತನೆಡೆಗೆ ಮನಸ್ಸನ್ನು ಕೇಂದ್ರಿಕರಿಸಿ ಧ್ಯಾನಿಸುವುದೇ ಮೊಸರನ್ನು ಕಡೆದಂತೆ. ಹೀಗೆ ಧ್ಯಾನಿಸಿದಾಗ ಬರುವ ಬೆಣ್ಣೆ ಎಂದರೆ ಭಕ್ತಿ. ಅದೇ ನವನೀತ, ಆ ಭಕ್ತಿ ಎಂಬ ನವನೀತವನ್ನು ಕದಿಯುವವ ಕೃಷ್ಣ ಎಂದು ವ್ಯಾಸರಾಜರ ಮಾತಿನ ತಾತ್ಪರ್ಯ. ಕೃಷ್ಣ ಗಡಿಗೆಯನ್ನು ಒಡೆದು ಬೆಣ್ಣೆ ಕದಿಯುತ್ತಿದ್ದ. ಲಿಂಗ ಶರೀರವೆಂಬ ಗಡಿಗೆಯನ್ನು ಒಡೆದು ಭಕ್ತಿಎಂಬ ನವನೀತವನ್ನು ಕದಿಯುತ್ತಾನೆ. ಕದ್ದು ಆ ಜೀವನಿಗೆ ಸ್ವರೂಪಸುಖವನ್ನೀಯುತ್ತಾನೆ ಎಂಬುದು ಇದರ ಅಧ್ಯಾತ್ಮ ಅರ್ಥ. ಅಂತಹ ಭಗವಂತನಲ್ಲಿ ಮಾಹಾತ್ಮ್ಯಜ್ಞಾನಪೂರ್ವಕವಾದ ಸುದೃಢವಾದ ಭಕ್ತಿಯನ್ನು ಮಾಡಿ, ನಮ್ಮ ಲಿಂಗಶರೀರವನ್ನು ಒಡೆದು ಸದ್ಗತಿಯನ್ನು ಕರುಣಿಸಲಿ ಎಂದು ಈ ಶ್ರೀಕೃಷ್ಣಜನ್ಮಾಷ್ಟಮಿಯ ಶುಭಸಂದರ್ಭದಲ್ಲಿ ಮಧ್ವವಲ್ಲಭ ಸಿರಿಕೃಷ್ಣನಲ್ಲಿ ಪ್ರಾರ್ಥಿಸೋಣ.

---

(19ನೇ ಪುಟದಿಂದ.....)
ನೀಡಿದರೆ ಅಧಿಕ ವೈಷ್ಣವತ್ವವನ್ನು ಬೆಂಬಲಿಸಿದಂತೆ. ವಿಷ್ಣುಭಕ್ತಿಯೇ ಕೇಂದ್ರಬಿಂದುವಾಗಿ ಉಳ್ಳ ವೈಷ್ಣವತ್ವಧರ್ಮವನ್ನು ಭಗವಂತನು ಮೆಚ್ಚಿಕೊಳ್ಳುವುದರಿಂದ ಅಂತಹ ವೈಷ್ಣವತ್ವಧರ್ಮಕ್ಕೆ ನಮ್ಮಿಂದ ಎಷ್ಟೆಷ್ಟು ಪುಷ್ಟಿ ದೊರಕುವುದೋ ಅಷ್ಟು ಪ್ರಮಾಣದಲ್ಲಿ ನಾವು ಭಗವಂತನ ಮೆಚ್ಚುಗೆಗೆ ಪಾತ್ರರಾಗಬಹುದಾಗಿದೆ.

ಹೀಗೆ ಭಗವಂತನ ಅಧಿಕಾಧಿಕ ಮೆಚ್ಚುಗೆಗೆ ಪಾತ್ರರಾಗುವಂತೆ ಅಧಿಕಾಧಿಕ ವೈಷ್ಣವತ್ವಕ್ಕೆ ಪುಷ್ಟಿ ದೊರಕುವಂತಾಗಬೇಕೆಂದು ಸಾಮಾನ್ಯ ವೈಷ್ಣವರ ವಿರುದ್ಧವಾಗಿ ವಿಶಿಷ್ಟವೈಷ್ಣವರನ್ನು ಬೆಂಬಲಿಸಬೇಕು, ಕೆಲವು ವೈಷ್ಣವರ ವಿರುದ್ಧವಾಗಿ ಬಹುವೈಷ್ಣವರನ್ನು ಬೆಂಬಲಿಸಬೇಕು, ಬಹುವೈಷ್ಣವರ ಪಕ್ಷವನ್ನು ಆಶ್ರಯಿಸಬೇಕು ಎಂದು ಶ್ರೀಮದ್ವಗುರುಗಳು ವೈಷ್ಣವರ ವೈಶಿಷ್ಟ್ಯ, ಬಹುತ್ವ–ಇವುಗಳಿಗೆ ಪರಿಗಣನೆಯನ್ನು ನೀಡಿರುವರೆಂಬುದು ಗಮನಾರ್ಹ.

ಆದುದರಿಂದ ಸಾಧಕರು ಯಾವುದೇ ಧಾರ್ಮಿಕ ಅಥವಾ ಆಧ್ಯಾತ್ಮಿಕ ವಿಷಯದಲ್ಲಿ ಸಂದೇಹಕ್ಕೆ, ಗೊಂದಲಕ್ಕೆ ಒಳಗಾದಾಗ ವಿಶಿಷ್ಟರಾದ ವೈಷ್ಣವರ, ಬಹು ಸಂಖ್ಯೆಯ ವೈಷ್ಣವರ ಪಕ್ಷವನ್ನು ಅವಲಂಬಿಸುವುದೇ ಲೇಸು. *

ಬಾಯಾರಿದವರನ್ನು ನೀರಿನಿಂದ ತೃಪ್ತಿಗೊಳಿಸಿ.

ಅನುಭವ ಕಥನ

# ಪಾತ್ರರ ಸಂಗಡ ಯಾತ್ರೆಯ ಮಾಡಿರೋ !

–ರಾಘವೇಂದ್ರ ಮುಟ್ಲುಪಾಡಿ

**ಅಯೋಧ್ಯಾಮಥುರಾ ಮಾಯಾ ಕಾಶೀ ಕಾಂಚೀ ಅವಂತಿಕಾ**
**ಪುರೀ ದ್ವಾರಾವತೀ ಚೈವ ಸಪ್ತೈತಾ ಮೋಕ್ಷದಾಯಕಾಃ ॥**

ಎಂಬ ಈ ಮೋಕ್ಷದಾಯಕಗಳಾದ ಸಪ್ತ ಕ್ಷೇತ್ರಗಳಲ್ಲಿ ದಕ್ಷಿಣದ ಕಾಂಚಿಯನ್ನು ಹೊರತುಪಡಿಸಿ ಉಳಿದ ಆರು ಕ್ಷೇತ್ರಗಳಲ್ಲಿ ಜತೆಗೆ ಇನ್ನೂ ಹಲವು ತೀರ್ಥಕ್ಷೇತ್ರಗಳ ಸಂದರ್ಶನಕ್ಕಾಗಿ ಸಕಲ ಸಿದ್ಧತೆಗಳೊಂದಿಗೆ ದೇಶದ ಉತ್ತರಕ್ಕೆ ನಮ್ಮ ಯಾತ್ರೆ ಹೊರಟಿತ್ತು. ತಾ. 09–06–2008 ರಂದು ಸಂಜೆ 5.20ಕ್ಕೆ ಹೊರಟ ನಮ್ಮ ಯಾತ್ರೆ ಬೆಂಗಳೂರು ಮಾರ್ಗವಾಗಿ ತಿರುಪತಿಗೆ ಸಾಗಿತ್ತು. ನಾವು ನೋಡ ಹೊರಟ ಈ ಕ್ಷೇತ್ರಗಳಲ್ಲಿ ಕೆಲವು ತೀರ್ಥಪ್ರಧಾನವಾದವುಗಳಾಗಿದ್ದರೆ ಕೆಲವು ಕ್ಷೇತ್ರಗಳೇ ಪ್ರಧಾನವಾಗಿವುಳ್ಳವುಗಳಾಗಿದ್ದವು. ತಿಮ್ಮಪ್ಪನ ದರ್ಶನ ಪಡೆದ ನಾವು ಕೃಷ್ಣಾನದಿ ಎಂಬ ತೀರ್ಥವೇ ಮುಖ್ಯವಾಗಿಯುಳ್ಳ ವಿಜಯವಾಡ ತಲುಪಿದೆವು. ಅಲ್ಲಿಂದ ಭುವನೇಶ್ವರದ ಮೂಲಕ ಪುರಿ ಕ್ಷೇತ್ರಕ್ಕೆ ಬಂದು ಜಗನ್ನಾಥನ ದರ್ಶನ ಪಡೆದು ಪುನೀತರಾದೆವು. ಈಗಾಗಲೇ ಬೇರೆ ಬೇರೆ ಊರಿನಿಂದ ಬಂದವರಾದರೂ ನಾವು ನೂರು ಮಂದಿ ಯಾತ್ರಿಕರು ಒಂದೇ ಕುಟುಂಬದವರಂತೆ ಪ್ರೀತಿಯಿಂದ ಬೆರೆತಿದ್ದೆವು. ಇದರಲ್ಲಿ ಕೆಲವು ಯುವಕರಾಗಿದ್ದರೆ ಹಲವು ವೃದ್ಧರಾಗಿದ್ದರು. ಪುರಿಯಿಂದ ಹೊರಟ ನಾವು ಗಯೆಯನ್ನು ತಲುಪಿದೆವು.

ಗಯಾಗದಾಧರನ ದರ್ಶನವನ್ನು ನಾವು ಮಾಡಿದರೆ ಪೂಜ್ಯ ಗುರುಗಳಾದ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು ಪಂಚಾಮೃತಾಭಿಷೇಕವನ್ನು ಮಾಡಿದರು. ಹಾಗೆಯೇ ಪಿತೃಕರ್ಮಾಧಿಕಾರಿಗಳು ಗಯೆಯ ಮೂರು ಸ್ಥಳಗಳಲ್ಲಿ ಪಿಂಡಪ್ರದಾನ ಮಾಡಿದರು. ಗಯೆಯಿಂದ ಮೋಕ್ಷದಾಯಕ ಕಾಶೀ ಕ್ಷೇತ್ರಕ್ಕೆ ಬಂದು ಸೇರಿದೆವು. ಅಲ್ಲಿ ನಾವು ಮನೆಯಲ್ಲಿ ಸ್ಮರಿಸಿ ಸ್ನಾನ ಮಾಡುತ್ತಿದ್ದ ಗಂಗೆಯಲ್ಲಿ ಪೂಜ್ಯ ಶ್ರೀಪಾದರೊಂದಿಗೆ ಪ್ರತ್ಯಕ್ಷ ಸ್ನಾನ ಮಾಡಿದಾಗ ಆದ ಅನುಭವವೇ ಅಪೂರ್ವ. ಗಂಗೆಯಲ್ಲಿ ಸ್ನಾನಮಾಡಿ ಜೀವನ ಸಾರ್ಥಕ

ಭಗವದ್ಗೀತೆ–ವಿಷ್ಣುಸಹಸ್ರನಾಮ–ಕೃಷ್ಣಾಷ್ಟೋತ್ತರವನ್ನು ಎಂದಿಗೂ ಬಿಡಬೇಡಿ.

ಮಾಡಿಸಿಕೊಳ್ಳಬೇಕೆಂಬ ಭಕ್ತಿಯ ಭಾರವನ್ನು ತಲೆಯಲ್ಲಿ ಹೊತ್ತ ನಮಗೆ ಗಂಗಾಸ್ನಾನದಿಂದ ಭಾರವೆಲ್ಲ ಕಳೆದು 'ಧನ್ಯನಾದೆ' ಎಂಬ ಭಾವನೆ ಮನಸ್ಸಿನಲ್ಲಿ ಮೂಡಿತ್ತು. ಅನಂತರ ಕಾಶೀ ವಿಶ್ವನಾಥನ ದರ್ಶನ ಪಡೆದು ಪ್ರಯಾಗದ ತ್ರಿವೇಣೀ ಸಂಗಮದಲ್ಲಿ ಸ್ನಾನಮಾಡಿ, ಅಯೋಧ್ಯೆಯಲ್ಲಿ ನಮ್ಮ ಜನ್ಮೋದ್ಧಾರಕವಾದ ರಾಮಜನ್ಮಭೂಮಿಯನ್ನು ವೀಕ್ಷಿಸಿದೆವು.

ಅಲ್ಲಿಂದ ನಮ್ಮ ಯಾನ ನೈಮಿಷಾರಣ್ಯದಲ್ಲಿನ ವೇದವ್ಯಾಸಾಶ್ರಮವನ್ನು ವೀಕ್ಷಿಸಿ, ಹರಿದ್ವಾರಕ್ಕೆ ಮುಂದುವರಿಯಿತು. ದಾರಿಯಲ್ಲಿ ಹೋಗುವುದೇ ಒಂದು ವಿಶೇಷ ಅನುಭವ. ವಿಷ್ಣುಸಹಸ್ರನಾಮ, ಕೃಷ್ಣಾಷ್ಟೋತ್ತರ, ಭಜನೆ ಇತ್ಯಾದಿಗಳನ್ನು ಮಾಡುತ್ತಾ ಬಸ್ಸಿನಲ್ಲಿ ಹೋಗುವುದು, ಮಾರ್ಗಮಧ್ಯೆ ಶುಚಿಯಾದ ಸ್ಥಳದಲ್ಲಿ ಉಪಾಹಾರ ಸೇವಿಸುವಾಗ ಅನಿಸಿದ್ದು 'ಇದು ವನಭೋಜನವೋ?' ಎಂದು. ಪುನಃ ರಾತ್ರಿಯಾದಲ್ಲಿ ಬಸ್ಸಿನ ಸುಖಾಸನದಲ್ಲಿ ತಂಪಾದ ಗಾಳಿಯಲ್ಲಿ ಸೊಂಪಿನ ನಿದ್ದೆ. ಬೆಳಗ್ಗೆ ಎಚ್ಚೆತ್ತಾಗ ಇದ್ದದ್ದು ಹರಿದ್ವಾರದಲ್ಲಿ. ಇಲ್ಲಿನ ಗಂಗಾಸ್ನಾನ ಒಂದೆಡೆ ಬಿಸಿಲಬೇಗೆಯಿಂದ ತಣಿಸಿದರೆ ಇನ್ನೊಂದೆಡೆ ನಮ್ಮ ಮನಸ್ಸನ್ನು ಪುಣ್ಯದ ಕಡಲಲ್ಲಿ ತೇಲಿಸಿತು.

ಅಲ್ಲಿಂದ ನಾವು ವಿಶೇಷ ಬಸ್ಸಿನಲ್ಲಿ ಹೊರಟದ್ದು ಬದರೀ ಕ್ಷೇತ್ರಕ್ಕೆ. ಇದೊಂದು ಅತ್ಯಂತ ರೋಮಾಂಚಕ ಕ್ಷಣ. 10000 ಅಡಿ ಎತ್ತರ ರಸ್ತೆಯಲ್ಲಿ ನಾವು ಸಾಗುವಾಗ ಒಂದೆಡೆ ಆಳದಲ್ಲಿ ಅಲಕನಂದಾ ನದಿಯಾದರೆ ಇನ್ನೊಂದೆಡೆ ರಸ್ತೆಯನ್ನೇ ನುಂಗುತ್ತೇನೆಂದು ನಿಂತಿರುವ ಎತ್ತರ ಗುಡ್ಡ, ಹೀಗೆ ಕಡಿದಾದ ದಾರಿಯಲ್ಲಿ ಸಾಗುವಾಗ ನಮ್ಮ ನಿಸ್ಸಹಾಯಕತೆಯ ನಿಜವಾದ ಅರಿವಾಗುತ್ತಿತ್ತು. ನಾಸಿಕನನ್ನೂ ಆಸ್ತಿಕನನ್ನಾಗಿಸಿ ದೇವರೇ ನೀನೇ ಗತಿ ಎಂದು ಹೇಳಿಸುವಂತಿತ್ತು. ಈ ಪಯಣ, ಎಲ್ಲರೂ ಬದರೀನಾರಾಯಣನ ಸ್ಮರಣೆ ಮಾಡುವುದು ಒಂದೆಡೆಯಾದರೆ ಇನ್ನೊಂದೆಡೆ ಹೆದರಿಕೆಯಿಂದ ಮನೆಯವರನ್ನೆಲ್ಲಾ ಎಣಿಸುತ್ತಿದ್ದರು. ಎದೆ ಬಡಿತವಂತೂ ನಿಮಿಷದಿಂದ ನಿಮಿಷಕ್ಕೆ ಹೆಚ್ಚುತ್ತಿತ್ತು. ಇದು ದೇಹದ ಒಳಗಿನ ಭಾವನೆಯಾದರೆ ದೇಹದ ಹೊರಮೈಗಂತೂ ತಂಪು ವಾತಾವರಣದ ಅಮೃತಾಭಿಷೇಕ. ಕಣ್ಣಿಗಂತೂ ಎಲ್ಲಿಲ್ಲದ ಕಾಯಕ. ದೊಡ್ಡ ದೊಡ್ಡ ಪರ್ವತಗಳ ನಡುವೆ ಪರ್ವತದಿಂದ ಪರ್ವತಕ್ಕೆ ಸುತ್ತಿಕೊಂಡು ಹೋಗುವಾಗ ಸಕ್ಕರೆಯ ರಾಶಿಯನ್ನು ಹತ್ತಲು ಹೊರಟ ಇರುವೆಯಂತಾಗಿದ್ದೆವು. ಅರ್ಥಾತ್ ಅಷ್ಟೇಕಷ್ಟ ಅಷ್ಟೇ ಸಂತೋಷ. ಗಗನಕ್ಕೆ ಚುಂಬನವನ್ನೀಯುವಂತೆ ಕಾಣುವ ಹಿಮದ ಪರ್ವತವಿದ್ದರೆ ನಿನ್ನನ್ನು ದೂಡಿ ನಾನು ನಿಲ್ಲುತ್ತೇನೆಂದು ಎನ್ನುವಂತೆ ಇನ್ನೊಂದು ಬೆಟ್ಟ ಕಾಣುತ್ತಿತ್ತು. ನಿಮ್ಮನ್ನೆಲ್ಲಾ ಹೊತ್ತವಳು

**ಪ್ರಾಣಿಗಳಲ್ಲಿ ದಯೆವುಳ್ಳವರಾಗಿರಿ.**

ನಾನು ಎಂದು ಹೇಳುವಂತೆ ಭೋರ್ಗರೆಯುತ್ತಾ ಹರಿಯುವವಳು ಅಲಕನಂದೆ. ಈ ಬೆಟ್ಟಗಳ ಪಂಕ್ತಿಗಳ ನಡುವೆ ನಿಮ್ಮನ್ನೆಲ್ಲಾ ಹಿಂದಿಕ್ಕಿ ನಾನು ಹೋಗುತ್ತೇನೆಂದು ಮುನ್ನುಗ್ಗುತ್ತಿರುವ ಬಾಲರವಿಯ ಬಲವಾದ ಕಿರಣಗಳು. ಇದರಿಂದಾಗಿಯೇ ಸುವರ್ಣಮಯವಾದ ಪರ್ವತ ಶ್ರೇಣಿಗಳನ್ನು ದಾಟಿ ಬದರಿಯನ್ನು ತಲುಪಿದೆವು. ಅಲ್ಲಿನ ಉಷ್ಣಕುಂಡದಲ್ಲಿ ಸ್ನಾನ ಮಾಡಿದಾಗ ಭಗವಂತನ ವೈಚಿತ್ರ್ಯದ ಮತ್ತೊಂದು ಅರಿವಾಯಿತು. ಅಲ್ಲಿನ ಕೊರೆಯುವ ಚಳಿಯಲ್ಲಿ, ಅಲಕನಂದೆಯಲ್ಲಿ ಮುಳುಗಿ ಎದ್ದಾಗ ರಕ್ತ ಹೆಪ್ಪುಗಟ್ಟಿದಂತಾಗಿ ನಾನೆಲ್ಲಿದ್ದೇನೆಂದು ಹೇಳಲು ನನಗೆ ಇನ್ನೊಬ್ಬರ ಅಗತ್ಯವಿದ್ದಂತ್ತಿತ್ತು. ಅನಂತರ ನರನಾರಾಯಣ ಪರ್ವತದ ನಡುವೆ ವಿರಾಜಮಾನನಾದ ಬದರೀನಾರಾಯಣನ ದರ್ಶನಗೈದು ಜೀವನ ಸಾರ್ಥಕಪಡಿಸಿಕೊಂಡೆವು.

ಅಲ್ಲಿಂದ ಹಿಂತಿರುಗಿ

**ಕುರುಕ್ಷೇತ್ರಂ ಗಯಾಂ ಗಂಗಾಂ ಪ್ರಭಾಸಂ ಪುಷ್ಕರಾಣಿಚ**
**ಏತಾನಿ ಮನಸಾ ಧ್ಯಾತ್ವಾ ಅವಗಾಹ್ಯಂ ತತೋ ಜಲೇ ॥**

ಎಂಬ ಐತಿಹ್ಯವುಳ್ಳ ಕುರುಕ್ಷೇತ್ರದ ಬ್ರಹ್ಮ ಸರೋವರದಲ್ಲಿ ಸ್ನಾನ ಮುಗಿಸಿ ದೇಶದ ರಾಜಧಾನಿಯನ್ನು ಸುತ್ತಿದ್ದೂ ಆಯಿತು. ಪುಷ್ಕರದಲ್ಲಿ ಮಿಂದು ಪುನೀತರಾಗಿ ಮಾತೃಗಯೆಗೆ ತೆರಳಿ ಮಾತೃಕರ್ಮವನ್ನು ಮಾಡಿ ಅಧಿಕಾರಿಗಳು ಜನ್ಮಪಾವನಗೊಳಿಸಿಕೊಂಡರು. ಮಥುರೆಯಲ್ಲಿ ಜಗಜ್ಜನಕನಾದ ಕೃಷ್ಣನ ಜನ್ಮಭೂಮಿಯನ್ನು ನೋಡಿದೆವು. ಕೃಷ್ಣ ನಡಿದಾಡಿದ ಭೇಟ್ ದ್ವಾರಕೆಯನ್ನು ಕಣ್ತುಂಬ ಕಂಡೆವು. ಅಭಯಪ್ರದ ಕೃಷ್ಣನ ಈ ಜಾಗಕ್ಕೆ ಹೋಗುವಾಗ ಭಯಪೂರಿತ ವಿಶೇಷ ಅನುಭವ, ನೀರಿನಲ್ಲಿ 3 ಕಿ.ಮೀ ತೇಲುತ್ತಾ ಕೃಷ್ಣನ ಭಕ್ತಿಯಲ್ಲಿ ಅನವರತ ಮುಳುಗುತ್ತಾ ಹೋದೆವು. ಅಲ್ಲಿ ಕುಚೇಲನ ಅರಮನೆಯ ಮಸುಕುದೃಶ್ಯವನ್ನು ಕಂಡೆವು. ತರುವಾಯ ಪ್ರಭಾಸದ ತ್ರಿವೇಣೀ ಸಂಗಮದಲ್ಲಿ ಸ್ನಾನ ಮುಗಿಸಿದೆವು. ನಂತರ ನಾಸಿಕ್ ಮತ್ತು ಭರೂಚ್‌ನಲ್ಲಿ ಕ್ರಮವಾಗಿ ಗೋದಾವರಿ ಮತ್ತು ನರ್ಮದಾ ನದಿಯಲ್ಲಿ ಮಿಂದು ಪಾಪದಿಂದ ಪರಿಶುದ್ಧರಾಗಿ ಫಂಡರಾಪುರದಲ್ಲಿ ವಿಠಲನನ್ನು ಮುಟ್ಟಿ ಪೂಜಿಸಿದೆವು. ಹಾಗೆಯೇ ಕೊಲ್ಹಾಪುರದಲ್ಲಿ ತಾಯಿ ಮಹಾಲಕ್ಷ್ಮಿಯ ದರ್ಶನ ಮುಗಿಸಿ ಸೋದೆಯಲ್ಲಿ ತಂದೆ ತ್ರಿವಿಕ್ರಮ ದೇವರನ್ನು ಕಂಡು ಕೃತಾರ್ಥರಾದೆವು.

ಈ ಹೊತ್ತಿಗೆ ಕರ್ನಾಟಕ ಹೊರತುಪಡಿಸಿ 12 ರಾಜ್ಯಗಳಲ್ಲಿನ ಸುಮಾರು 26 ಕ್ಷೇತ್ರಗಳನ್ನು ಹಾಗೂ ಹಲವಾರು ಇತಿಹಾಸ ಪ್ರಸಿದ್ಧ ಪುರಾತನ ದೇವಾಲಯಗಳನ್ನು ಕಂಡು ಸುಮಾರು 10,000 ಕಿ.ಮೀಗಳನ್ನು ಕ್ರಮಿಸಿ 30 ದಿವಸಗಳನ್ನು

ಶ್ರೀ ಮಾಧ್ವಗ್ರಂಥಗಳ ಅಧ್ಯಯನ ನಿಮ್ಮ ಯೋಗ್ಯತೆಗೆ ಸರಿಯಾಗಿ ಮಾಡಿರಿ.

ಸದ್ವಿನಿಯೋಗಗೊಳಿಸಿದ್ದೆವು. ಬೇರೆ ಬೇರೆ ರಾಜ್ಯದ ಬೇರೆ ಬೇರೆ ಭಾಷೆ ನೀರು, ವಾತಾವರಣ, ಜನಗಳೊಂದಿಗೆ ಹೊಂದಿಕೊಂಡು ವ್ಯವಹರಿಸುವುದು ಕಷ್ಟದ ವಿಷಯವಾದರೂ 'ತೀರ್ಥಯಾತ್ರೆ' ಎಂಬ ಭಗವತ್ಪ್ರೀತಿಜನಕ ಕಾರ್ಯದಲ್ಲಿ ತೊಡಗಿದ್ದರಿಂದ ಎಲ್ಲವೂ ಸುಲಭವೇ ಆಯಿತು. ಕೆಲವು ಕಡೆಯ ನೀರು ಸಿಹಿಯಾದರೆ ಕೆಲವು ಕಡೆ ಗಡಸು ಹಾಗೂ ಉಪ್ಪು ನೀರು. ಇದಕ್ಕೆ ಹೊಂದಿಕೊಳ್ಳುವುದಂತೂ ದೊಡ್ಡ ಸಂಗತಿಯೇ ಸರಿ. ಕೆಲವು ಕಡೆ ಪೋಲಿಸ್ ಗಾರ್ಡ್‌ಗಳ ಕಾಟವಾದರೆ ಕೆಲವೆಡೆ ಭಿಕ್ಷುಕರ ಕಾಟ. ಎಲ್ಲಾ ಕ್ಷೇತ್ರಗಳಲ್ಲಿಯೂ ಖರೀದಿಯ ವಸ್ತುಗಳಿಗೇನೂ ಬರವಿರಲಿಲ್ಲ. ಅಂತೂ ನಮ್ಮವರೇ ಆದ ಪಾಚಕರ ನೆರವಿನಿಂದ ಮಡಿಯಿಂದ ತಯಾರಿಸಿದ ಹರಿನಿವೇದಿತ ಭೋಜನ ಮತ್ತು ಆಯಾಕ್ಷೇತ್ರದ ಪೌರಾಣಿಕ ಜ್ಞಾನ ಇವು ಒಬ್ಬೊಬ್ಬರೆ ಯಾತ್ರೆ ಕೈಗೊಂಡರೆ ಸಿಗುವುದು ಕಷ್ಟಸಾಧ್ಯ.

ನಮ್ಮ ರಕ್ಷಣೆಗೆ ಹಾಗೂ ಮನಸ್ಸಿಗೆ ಭಕ್ತಿಯ ಭಾರನೀಡಲು ನಮ್ಮ ಜತೆ ಇದ್ದದ್ದು ಕ್ರಮವಾಗಿ ಲೋಕಾಭಿರಾಮನಾದ ಪಲಿಮಾರು ಮಠದ ಸೀತಾಲಕ್ಷ್ಮಣಸಹಿತ ಶ್ರೀರಾಮದೇವರು ಮತ್ತು ಪೂಜ್ಯ ವಿದ್ಯಾಧೀಶತೀರ್ಥ ಶ್ರೀಪಾದಂಗಳವರು. ಪ್ರತಿಯೊಂದು ಕ್ಷೇತ್ರದಲ್ಲಿಯೂ ಶ್ರೀರಾಮದೇವರ ಪೂಜೆ, ತೀರ್ಥಪ್ರಸಾದ ಲಭಿಸುತ್ತಿತ್ತು. ಹೀಗೆ ಹೊಟ್ಟೆಗೆ ಹರಿಪ್ರಸಾದವಾದರೆ, ನಾವು ತಲುಪಿದ ಕ್ಷೇತ್ರಗಳ ಮಹತ್ವ, ತೀರ್ಥಗಳ ಗರಿಮೆ ಇತಿಹಾಸ ಪುರಾಣಗಳ ಹಿನ್ನಲೆಯನ್ನು ವಿವರಿಸುತ್ತಾ ತಮ್ಮ ಪ್ರವಚನದಿಂದ ನಮ್ಮನ್ನು ಆ ಕ್ಷೇತ್ರಗಳ ಪೂರ್ಣ ಪರಿಚಯಾತ್ಮಕ ಜ್ಞಾನಸಾಗರದಲ್ಲಿ ಶ್ರೀಪಾದರು ಮೀಯಿಸುತ್ತಿದ್ದರು. ನಾವು ತಲುಪುವ ಮೊದಲೇ ಶ್ರೀಗಳು ಆ ಕ್ಷೇತ್ರವನ್ನು ತಲುಪುತ್ತಿದ್ದರು. ನಾವು ಅಲ್ಲಿಗೆ ಹೋಗಿ ಶ್ರೀಗಳನ್ನ ಕಂಡಾಗ ನಮ್ಮೆಲ್ಲಾ ಆಯಾಸ ಕಳೆದು ಹೋಗಿ ನಮ್ಮವರ ಮನೆಗೆ ಬಂದು ತಲುಪಿದ್ದೇವೆಯೋ ಎಂದೆನಿಸುತ್ತಿತ್ತು. ಈ ಎಲ್ಲಾ ಕಾರಣದಿಂದಾಗಿ ಈ ಪಯಣ ಯಾತ್ರೆಯಾಗಿತ್ತು. ಇಲ್ಲದಿದ್ದಲ್ಲಿ North India Tour ಆಗುತ್ತಿತ್ತೋ ಏನೋ?

ಕೊನೆಯಲ್ಲಿ ಯಾತ್ರೆಯುದ್ದಕ್ಕೂ ನಮ್ಮೊಂದಿಗಿದ್ದು ನಮ್ಮನ್ನು ಅನುಗ್ರಹಿಸಿದ ಪೂಜ್ಯ ವಿದ್ಯಾಧೀಶ ಶ್ರೀಗಳಿಗೆ ಸಾಷ್ಟಾಂಗ ಪ್ರಣಾಮಗಳು. ★

ಎಷ್ಟೋ ಜನುಮದ ಸುಕೃತದಿಂದ ಪ್ರಾಪ್ತನಾದ ಈ ಮನುಷ್ಯ ಜನ್ಮವನ್ನು ಸಾರ್ಥಕಪಡಿಸಿಕೊಳ್ಳಿ.

**ಪ್ರಶ್ನೋತ್ತರ–ಪದಬಂಧ**

# ನೆನಪಿನ ಅಂಗಳ

ವಿ॥ ಶಂಕರನಾರಾಯಣಾಚಾರ್ಯ

1) ಹಾಸಿಗೆಯಿಂದ ಏಳುವಾಗ ನೆನೆಯಬೇಕಾದ ದೇವರ ನಾಮ ಯಾವುದು?

2) ತಾರತಮ್ಯಪ್ರಕಾರದಲ್ಲಿ ಲಕ್ಷ್ಮೀಯ ನಂತರ ಬರುವವರು ಯಾರು?

3) ಕಾಳಿದಾಸನಿಗಿದ್ದ ಜನಪ್ರಿಯ ವಿಶೇಷಣ ಯಾವುದು?

4) ಕಲ್ಹಣನ ಐತಿಹಾಸಿಕ ಗ್ರಂಥ ಯಾವುದು?

5) ಸಂಸ್ಕೃತದ ಪ್ರಥಮ ಚಂಪೂ ಗ್ರಂಥ ಯಾವುದು?

6) ಸಂಸ್ಕೃತದ ಅತಿ ಪ್ರಾಚೀನ ರೂಪಕ ಯಾವುದು?

7) ಕ್ಷಯವ್ಯಾಧಿಯಿಂದ ಪೀಡಿಸಲ್ಪಡುವ ದೇವತೆ ಯಾರು?

8) ಒಂದು ಮರಕ್ಕೆ ಹನ್ನೆರಡು ಕೊಂಬೆ, ಕೊಂಬೆಗೆ 30 ಎಲೆ, ಅವುಗಳಲ್ಲಿ ಅರ್ಧ ಕಪ್ಪು ಅರ್ಧ ಬಿಳಿ ಇದರ ಅರ್ಥ ಏನು?

9) ರೀತಿ ಸಂಪ್ರದಾಯದ ಪ್ರವರ್ತಕ ಯಾರು?

10) ಅಲಂಕಾರ ಶಾಸ್ತ್ರವನ್ನು ಪ್ರತಿಪಾದಿಸುವ ಪ್ರಾಚೀನ ಪುರಾಣ ಯಾವುದು?

**ಕಳೆದ ಸಂಚಿಕೆಯ ಉತ್ತರ:**

1) 18 2) 18,000 ಅಕ್ಷೋಹಿಣಿ 3) ಭೀಷ್ಮಪರ್ವ 4) ದೇವವ್ರತ 5) ಶಂತನು 6) 7 7) ವಿಕ್ರಮಾಂಕದೇವಚರಿತ 8) ಇಂಕ್ ಪೆನ್ 9) ಲಕ್ಷ್ಮೀ ದೇವಿ 10) 19 ದಿನ

| | | | | | |
|---|---|---|---|---|---|
| 1 ರ | ವಿ | | | 2 ದಿ | 4 ನ |
| ಘು | | 3 ಮೋ | ಹ | ನಾಂ | ಗ |
| 5 ವೀ | 6 ರ | ಹಾ | | | ದು |
| 13 ರ | ಮಾ | | 12 ಮೀ | ರು | |
| | 10 ಕಾಂ | 11 ಚ | ನ | | 9 ಕಾ |
| 7 ಕಾ | ತ | ರ | | 8 ಹು | ಳಿ |

ಪ್ರಾಣಿ ಹಿಂಸೆ ಮಾಡಬೇಡಿ

### ಎಡದಿಂದ ಬಲಕ್ಕೆ:

1. ಮನೋಹರಳಾದ ಪ್ರಮದೆ (3)
2. ಕಾನನಜಾತ (3)
5. ಗಣಪ ಇಷ್ಟಪಡುವ ಸಿಹಿತಿಂಡಿ (3)
7. ಬಾಣಭಟ್ಟನ ಕಾದಂಬರಿಯ ಋಷಿ(3)
8. ಯಮನೂ ಆಗಬಲ್ಲ ಸಮಯ (2)
10. ಕ್ರೋಧದಿಂದ ಕೂಡಿದ ಹೆಂಗಸು (3)
11. ಆಂಗ್ಲವರ್ಣಮಾಲೆಯ ಹದಿನಾರನೆಯ ಅಕ್ಷರವನ್ನು ನಡುವೆ ಹೊಂದಿದ ಕಾಡು(3)



ಉತ್ತರ ಮುಂದಿನ ಸಂಚಿಕೆಯಲ್ಲಿ

### ಮೇಲಿನಿಂದ ಕೆಳಕ್ಕೆ:

1. ಲಕುಮೀಪತಿ (3)
3. ಶಂಬರಜಾತ (3)
4. ಹೊಸತಾದ ಬಾವಿ (4)
5. ಹಜಾರದಲ್ಲಿ ಶುರುವಾದ ಪ್ರೀತಿಯಬಲೆ(4)
6. ತಾವರೆಯಂತಿರುವವಳು (4)
9. ಕೋಗಿಲೆಯ ವಿರೋಧಿ ಈ ವಾನರ (2)
12. ಹೋಗದಿರುವಂತಹದ್ದು (2)
13. ಧ್ವನಿಯನ್ನು ಧ್ವನಿಸುವ ಪದ (2)

ನೀಚರನಾಶ್ರಯಿಸಿ ಕೆಡಬೇಡಿ.

ತ್ರೈಲೋಕ್ಯ ಗುರುಗಳಾದ ಶ್ರೀ ಮಧ್ವಾಚಾರ್ಯರ ನಿಜಶಿಷ್ಯಪ್ರವರರಾದ ಶ್ರೀ ಹೃಷೀಕೇಶತೀರ್ಥರ ಪರಂಪರೆಯಲ್ಲಿ ಇಪ್ಪತ್ತೈದನೆಯ ಯತಿವರ್ಯರಾಗಿ ಪೀಠವನ್ನಲಂಕರಿಸಿದ ಶ್ರೀ ರಘುಪ್ರವೀರತೀರ್ಥರ ತಪಸ್ಸಿಗೆ ಒಲಿದ ಘಟಿಕಾಚಲದ ಶ್ರೀಮುಖ್ಯಪ್ರಾಣದೇವರ ಆಡುಂಬೊಲವಾದ, ಮಂಗಳಾಷ್ಟಕಕರ್ತಾರರಾಗಿ ಪ್ರಖ್ಯಾತರಾದ ಶ್ರೀರಾಜರಾಜೇಶ್ವರತೀರ್ಥರು ಹಾಗೂ ಬಹುಗ್ರಂಥಪ್ರಣೇತೃಗಳಾದ ಯತಿತತಿನಿರ್ಮಾತೃಗಳಾದ, ವಿದ್ವದ್ವೃಂದವಿದ್ಯಾದಾತೃಗಳಾದ, ವಿದ್ಯಾಪೀಠ-ಮಧ್ವಮಠವೃಂದಸಂಸ್ಥಾಪಕರಾದ, ದೇಶಾದ್ಯಂತ ವಾಕ್ಯಾರ್ಥನಡೆಸಿ-ಪ್ರತಿವಾದಿಗಳನ್ನು ಜಯಿಸಿ ವಾದಿಭಯಂಕರರೆನಿಸಿದ, ಪರವಿದ್ಯೆಗೆ ಮಾನ್ಯತೆಯನ್ನು ತಂದುಕೊಟ್ಟು ಪರವಿದ್ಯೆಯಿಂದ ಮಾನ್ಯರಾದ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥರೇ ಮೊದಲಾದವರ ತಪೋಭೂಮಿಯಾದ, ಶ್ರೀವೇದವ್ಯಾಸದೇವರ ನಿತ್ಯಸನ್ನಿಧಾನವಿರುವ ಪಲಿಮಾರಿನ ಶ್ರೀಮಠದಲ್ಲಿ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥರ ಕನಸಿನ ಕೂಸಾದ ಶ್ರೀ ಯೋಗದೀಪಿಕಾ ಗುರುಕುಲ ಶ್ರೀ ಶ್ರೀ ವಿದ್ಯಾಧೀಶ ತೀರ್ಥರ ನೇತೃತ್ವದಲ್ಲಿ ಕಳೆದ ಹದಿನೆಂಟು ವರ್ಷಗಳಿಂದ ನಡೆಯುತ್ತಿದೆ.

15 ಅಧ್ಯಾಪಕರು ಅಧ್ಯಾಪನೆ ನಡೆಸುತ್ತಿರುವ ಪ್ರಾಚೀನ ಗುರುಕುಲ ಪದ್ಧತಿಯಲ್ಲಿ ನಡೆಯುತ್ತಿರುವ ಈ ಗುರುಕುಲದಲ್ಲಿ 60 ವಿದ್ಯಾರ್ಥಿಗಳು ಆರು ವರ್ಷಗಳಲ್ಲಿ ವೇದ-ವೇದಾಂತ-ಆಗಮ-ಜ್ಯೋತಿಷ್ಯ-ಪೌರೋಹಿತ್ಯವನ್ನು ಕಲಿಯುತ್ತಿದ್ದಾರೆ. ಹಾಗೂ ಕರ್ನಾಟಕ ಸರಕಾರದ ಪ್ರೌಢ ಶಿಕ್ಷಣ ಪರೀಕ್ಷಾಮಂಡಳಿ ನಡೆಸುತ್ತಿರುವ ಪ್ರವರ ಮತ್ತು ಪ್ರವೀಣ ಪರೀಕ್ಷೆಗಳನ್ನು ನಡೆಸಲಾಗುವುದು. ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳಿಗೆ ಉಚಿತ ಊಟ ಹಾಗೂ ವಸತಿ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ಶ್ರೀಮಠದ ಅಭಿಮಾನಿಗಳಾದ ಕೊಡುಗೈ ದಾನಿಗಳಿಂದ ಹಳೆ ಮಠದ ನವೀಕರಣ ಭೋಜನಶಾಲೆ ಕಂಪ್ಯೂಟರ್ ಕೊಠಡಿ, ವಿದ್ಯುತ್‌ಜನಕ ಮುಂತಾದ ಮೂಲಭೂತ ವ್ಯವಸ್ಥೆಗಳು ನಿರ್ಮಾಣ ಆಗಿವೆ. ನಿತ್ಯ ಅನ್ನಸಂತರ್ಪಣೆಗಾಗಿ ಹಲವಾರು ದಾನಿಗಳು ತಮ್ಮ ದೇಣಿಗೆಗಳನ್ನು ನೀಡಿದ್ದಾರೆ ನೀಡುತ್ತಿದ್ದಾರೆ. ಈ ಮೂಲಕ ಗುರುಕುಲವನ್ನು ಕಳೆದ 18 ವರ್ಷಗಳಿಂದ ಪೋಷಿಸುತ್ತಿದ್ದಾರೆ.

ಅಧ್ಯಾಪಕರ ಸಂಭಾವನೆ, ಊಟ, ವಸತಿ ಈ ಎಲ್ಲಾ ವ್ಯವಸ್ಥೆಗಳಿಗಾಗಿ ಪ್ರತಿ ತಿಂಗಳು ಸುಮಾರು 1,50,000-00ರೂಗಳ ವೆಚ್ಚವಾಗುತ್ತಿದೆ ಸರಕಾರದ ಯಾವುದೇ ಮೂಲಭೂತ ಸಹಕಾರವನ್ನು ಪಡೆಯದೆ ನಡೆಯುತ್ತಿರುವ ಈ ಗುರುಕುಲದ ಅಭಿವೃದ್ಧಿಗಾಗಿ ಶ್ರೀ ಮಠದ ಅಭಿಮಾನಿ ದಾನಿಗಳಿಂದ ಪೂರ್ಣಪ್ರಮಾಣದ ಸಹಕಾರವನ್ನು ಬಯಸುತ್ತೇವೆ

**ನಿತ್ಯ ಅನ್ನಸಂತರ್ಪಣೆ ನಿಧಿ** :ಒಬ್ಬ ವಿದ್ಯಾರ್ಥಿಗೆ ಒಂದು ತಿಂಗಳಿಗೆ ರೂ. 500-00 ಪ್ರತಿ ತಿಂಗಳು ನೀಡಬಹುದು. ಅಥವಾ ವರ್ಷಕ್ಕೆ 6000-00 ನೀಡಬಹುದು. ಈ ಸೇವೆಗಾಗಿ ಬ್ಯಾಂಕಿಗೆ Standard instruction ನೀಡಬಹುದು.

**ಹಸ್ತೋದಕ ಸೇವೆ** : ಮದುವೆ-ಮುಂಜಿ ಹುಟ್ಟುಹಬ್ಬ ಮುಂತಾದ ಸಂದರ್ಭದಲ್ಲಿ ಅಥವ ಹಿರಿಯರ ಸಂಸ್ಮರಣಾ ದಿನಗಳಲ್ಲಿ ವಿದ್ಯಾರ್ಥಿಗಳ ಮಧ್ಯಾಹ್ನ ಹೊತ್ತಿನ ಹಸ್ತೋದಕ ಸೇವೆ. ರೂ 3000-00

**ದತ್ತು ಸ್ವೀಕಾರ ಸೇವೆ** :ರೂ 25,000 ಒಂದು ವರ್ಷದ ವಿದ್ಯಾರ್ಥಿಯ ಸಂಪೂರ್ಣ ಖರ್ಚು.

**ವಿದ್ಯಾದಾನ** :ವರ್ಷಕ್ಕೆ 60,000 ರೂಗಳು ಒಬ್ಬ ಅಧ್ಯಾಪಕರ ವಾರ್ಷಿಕ ಸಂಭಾವನೆ

ವಸ್ತುಗಳ ರೂಪದಲ್ಲಾದರೂ ಅಥವ ಯಥಾಶಕ್ತಿ ತಮ್ಮ ಸೇವೆಯನ್ನು ಸಲ್ಲಿಸಬಹುದು.

ಮೇಲ್ಕಂಡ ಸೇವೆಗಳಿಗೆ ದೇಣಿಗೆ ನೀಡಬಯಸುವುವವರು ಸ್ಟೇಟ್ ಬ್ಯಾಂಕ್ ಅಫ್ ಹೈದರಾಬಾದ್ Sri Yogadeepika Gurukula A/C Number 62032376077 ಇದಕ್ಕೆ ನೀಡಬಹುದು.

(ವಿ.ಸೂ ಮೇಲಿನ ಎಲ್ಲಾ ಸೇವೆಗಳಿಗೆ 80G ಸೌಲಭ್ಯಪಡೆಯ ಬಯಸುವವರು ಚೆಕ್/ಡಿ.ಡಿಯನ್ನು ಯೋಗದೀಪಿಕಾ ಟ್ರಸ್ಟ್ ಇದರ ಹೆಸರಿಗೆ ನೀಡಬೇಕು.)

ಹೆಚ್ಚಿನ ವಿವರಗಳಿಗೆ
ಶ್ರೀಹರ್ಷ
ಪಲಿಮಾರು ಮಠ
9448435244

ವ್ಯವಸ್ಥಾಪಕರು
ಶ್ರೀಪಲಿಮಾರುಮಠ
ರಥಬೀದಿ
ಉಡುಪಿ
0820-2523402

|| Sri Rama Sri ||

## "VIDYA DANA - NITYA SANTARPANE"

(Free Education - Free Boarding)

### Sri Yoga Deepika Gurukula

It is said that, the omnipresent 'sannidhya' of 'Sri Vedavyasa' and 'Sri Mukhya Pranadevaru' is in the abode of 'Sri.Sri.Vidya Manya Teertha Swamiji's Brindavanam', located at 'Palimaru', a sacred place near Udupi, in Udupi District, Karnataka.

"Sri Yoga Deepika Gurukula", is a residential religious school, which is run purely in spiritual environment, with an ancient type of 'Gurkulam' set-up, in the woods of Palimaru, by 'Sri Palimaru Mutt'. For the past 18 years, 15 Tutors have been regularly engaged in educating the students. Also, classes and examinations are conducted in the 'Gurukula' for 'Pravara' and 'Praveena', of the Karnataka State Higher Secondary Education Examination Board.

In the past 6 years, nearly 60 students have been benefited from the 'Gurukula' and obtained the required knowledge in the areas of 'Adhyatma', 'Agama', 'Veda-Vedanta', Astrology' & 'Pourohitya'. The teaching faculty and the

students in the Gurukula are provided free accommodation and food along with boarding facilities. Mutt's Dining Hall and the Computer Centre have been renovated. A Diesel Power Generator is also installed for emergency electricity supply. All these have been facilitated with the generous support, contributions and donations made by various Donors and Well-wishers

**Sri Tatwa Deepika Gurukula** :-

Udupi, as we know, is the holy place of 'Lord Sri Krishna', created by 'Sri Madhwacharya". The idol of 'Lord Sri Krishna' is worshipped by Rukmini. The ambition of our Guruji, Sri.Sri. Vidya Manya Teertha Swamiji was to impart and teach the lessons on 'Vyasa Traya', 'Tarka', 'Grammar', 'Astrology' to the interested students and complete such teachings to the individuals in a span of 6 years.

With this ambition in mind, 'Sri Tatwa Deepika Gurukula' has been established in the year 2002 within the premises of 'Sri Palimaru Mutt', on the Chariot Street in Udupi.

**Sri Vidya Manya Vidya Peetha** :-

Modalakallu is a place where ‘sri Sesha Dasa’ performance his ‘tapas’ and also worshipped ‘Sri Lord Venkateshwara’.

A ‘Vidya Peetha’ in the name of “Sri Vidya Manya Vidya Peetha” was set up in the year 2006 in a village called “Modalakallu” in Gadwal Taluk, Mahaboobnagar (Palamooru) District, Andhra Pradesh. In this ‘Vidya Peetha’, Veda and Vedanta are being taught to the needy students.

In all these three Educational Institutions (Gurukulas and Vidya Peetha), 28 well-known Scholars have been guiding hundreds of young, brilliant and dynamically potent Pupils, in their quest to gain more Knowledge.

For all the activities that take place in the above mentioned locations, Sri Palimaru Mutt, is incurring an expense of nearly Rs.1,50,000/- every month, without any aid or support from the Government.

For the maintenance, upkeep and development of these ‘Gurukulas’ and ‘Vidyapeetha’, Sri Palimaru Mutt requests the support from the generous Donors whole-heartedly, for the following Sevas:

## FUND FOR 'DAILY FREE FOOD FOR STUDENTS'

Rs.500/- per month per Student Or Rs.6,000/- per annum.

For this, the Donors can provide the "Standing Instruction" in their respective Bank.

## HASTODAKA SEVA

Rs.3,000/- for Hastodaka Seva for Students in the afternoon.

This Seva can be enrolled to coincide with occasions like Marriage, Upanayanam (Thread Ceremony) or Elders' Ritual Ceremony.

## DATTU SWEEKARA SEVA

Rs.25,000/- for meeting the complete expenses of one Student throughout the tenure of his stay in the Gurukula.

## VIDYA DANA SEAVA

Rs.60,000/- per annum for meeting the honorarium of One Teacher (Adhyapak)

**Donations of any other quantum or in other forms / types are also accepted**

**Donations / Contributions can be made into the account**

**maintained at**

**State Bank of Hyderabad : SRI YOGADEEPIKA GURUKULA A/C Number: 62032376077**

Please note:

Donations made for any / all of the above programmes,

are exempted from tax under the Income Tax Regulations Act **80G.**

Donors interested in availing the Tax Exemption are requested to send their donations / contributions by way of Cheques or Demand Drafts in the Name of

“**Yoga Deepika Trust**”

**For complete information,**

**please Contact:**

**Shri Harsha**

**Sri. Palimaru mutt**

**Car Street**

**UDUPI**

**Ph: 9448435244**